# ಕೇರಳ ಪಾಠಾವಳಿ

# ಕನ್ನಡ

## ಮುಂದುವರಿದ ಪಠ್ಯ

# KERALA READER
# KANNADA
## ADVANCED TEXT

## ತರಗತಿ

# VI

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ
2016

KT 313-1/Kannada 6 AT Vol-1

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠಾ
ದ್ರಾವಿಡ ಉತ್ಕಲ ವಂಗಾ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗಾ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವ ಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

*Prepared by :*

**State Council of Educational Research and Training (SCERT)**
Poojappura, Thiruvananthapuram 695012, Kerala
*Website* : www.scertkerala.gov.in
*e-mail* : scertkerala@gmail.com
Phone : 0471 - 2341883, Fax : 0471 - 2341869
First Edition : 2015, Reprint: 2016
Typesetting : SCERT
Lay out : SCERT
Cover design : SCERT
Printed at : KBPS, Kakkanad, Kochi-30
© Department of Education, Government of Kerala

ಪ್ರೀತಿಯ ವಿದ್ಯಾರ್ಥಿಗಳೇ,

ಭಾಷೆಯೆಂದರೆ ಮಾತೆಯ ಮಮತೆಯ ಹಾಗೆ. ನಯ ವಿನಯದಿಂದ ಕೂಡಿದ ಮಾತು ಎಲ್ಲರನ್ನು ಸೆಳೆಯುತ್ತದೆ. ನಮ್ಮ ಮಾತು ಕೃತಿಗಳು ನಮ್ಮ ವ್ಯಕ್ತಿತ್ವ ಚಿಂತನೆಗಳನ್ನು ಹೊರಗೆಡಹುತ್ತವೆ. ಕನ್ನಡ ನುಡಿಯು ನಮ್ಮೆಲ್ಲರ ಬಾಂಧವ್ಯವನ್ನು ಬೆಸೆಯುತ್ತದೆ. ಸಂಸ್ಕೃತಿಯ ಕೈಗನ್ನಡಿಯಾಗಿರುವ ನುಡಿಯ ಹಿರಿಮೆಯನ್ನು ನೀವೆಲ್ಲರೂ ಅರಿತುಕೊಳ್ಳಬೇಕಾಗಿದೆ. ಅದಕ್ಕಾಗಿ ನಿಮ್ಮ ಮನಸೂರೆಗೊಳಿಸುವಂತಹ ಕತೆ, ಕವಿತೆ, ನಾಟಕ, ಇತ್ಯಾದಿ ಸಾಹಿತ್ಯ ಪ್ರಕಾರಗಳನ್ನು ಈ ಪಠ್ಯಪುಸ್ತಕದಲ್ಲಿ ಕೊಡಲಾಗಿದೆ. ನಿಮ್ಮ ಆಶಯಗಳನ್ನೂ, ಭಾವನೆಗಳನ್ನೂ, ಅನುಭವಗಳನ್ನೂ ಹಂಚಿಕೊಳ್ಳಲು ಮತ್ತು ಪ್ರಕಟಿಸಲು ಈ ಪಾಠಪುಸ್ತಕವು ಸಹಕಾರಿಯಾಗಲಿ ಎಂದು ಆಶಿಸುತ್ತೇನೆ. ಇವುಗಳಲ್ಲಿರುವ ಉತ್ತಮ ಮೌಲ್ಯಗಳು ಚಿಂತನೆಗಳು ನಿಮ್ಮ ಬದುಕಿಗೆ ದಾರಿದೀಪವಾಗಲಿ. ಕನ್ನಡ ಕುಸುಮದ ಕಂಪನ್ನು ಪಸರಿಸಲು ನಾವೆಲ್ಲ ಒಂದಾಗಿ ಶ್ರಮಿಸೋಣ.

ಪ್ರೀತಿಪೂರ್ವಕ ಹಾರ್ದಿಕೆಗಳೊಂದಿಗೆ,

**ಡಾ. ಪಿ.ಎ. ಫಾತಿಮ**
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ., ಕೇರಳ

# TEXTBOOK DEVELOPMENT TEAM

## STANDARD VI

# KANNADA - AT

**Participants**

Asha Kumari K., SGKHS Kudlu
Kunhirama, AKMMAUPS Paika
Padmanayana, SVVAUPS Kodlamogaru
Radhakrishna Bhat, SNHS Perla
Sathyanarayana Sharma, GSBS Kumbla
Shekhara Shetty, HAUPS Chippar
Shrinivasa K.H., Dharmathadka AUPS
Subrahmanya Bhat K., GSBS Soorambail
Udaya Kumar M., GHS Adoor
Veena K., GHSS Kundamkuzhi

**Experts**

Dr. Srikrishna Bhat P., Professor (Rtd), Govt. College, Kasaragod.
Dr. Rathnakara Mallamoole, Asst. Professor, Govt. College Kasaragod
Shridhara N., Asst. Professor, Govt. College, Kasaragod
Shivashankar, Asst. Professor, Govt.College, Manjeshwar.

**Artists**

Balamadhurakanana, Madhurakanana, Bela.
Shyam Shashi, GHSS Kakkat.

**Academic Co-ordinator**

Dr. Faisal Mavulladathil, Research Officer, SCERT, Thiruvananthapuram.

---

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ
ವಿದ್ಯಾಭವನ, ಪೂಜಪ್ಪುರ, ತಿರುವನಂತಪುರಂ 695012

# ಅನುಕ್ರಮಣಿಕೆ


| | | | | |
|---|---|---|---|---|
| **1.** | **ಸಿರಿ ನುಡಿ** | | | **7** |
| | 1. | ಗಂಧದ ಬುವಿಯಿದು ಕನ್ನಡ ನಾಡು | (ಕವಿತೆ) | |
| | 2. | ಶಿವಪ್ಪಾಯ್ಯ ಕೋಂಟೆ ಹಿಡಿದ್ವಾಂಗೆ | (ಕಥೆ) | |
| | 3. | ಯಕ್ಷಗಾನ ಬೊಂಬೆಯಾಟ | (ಲೇಖನ) | |
| | 4. | ವಾತ್ಸಲ್ಯ | (ಜಾನಪದ ಗೀತೆ) | |
| **2.** | **ಹಸಿರೇ ಉಸಿರು** | | | **25** |
| | 1. | ದುಡಿಮೆಯ ಫಲ | (ಕಥೆ) | |
| | 2. | ರೈತ | (ಕವಿತೆ) | |
| | 3. | ಹಸಿರು ಚಿನ್ನ | (ಆತ್ಮಕಥೆ) | |
| **3.** | **ತಾಣ–ಯಾನ** | | | **41** |
| | 1. | ಹೊಸ ಕಾರಿನ ಓಟ | (ಕವಿತೆ) | |
| | 2. | ಕಾಶ್ಮೀರದ ಸರೋವರಗಳ ತೀರದಲ್ಲಿ | (ಪ್ರವಾಸ ಕಥನ) | |
| | 3. | ಬದುಕಿನ ಸತ್ಯ | (ಕಥೆ) | |
| **4.** | **ಜೀವನ ಕಲೆ** | | | **55** |
| | 1. | ತೋಳ ಮತ್ತು ಕೊಕ್ಕರೆ | (ಕಥನ ಕವನ) | |
| | 2. | ರಾಣ ಮತ್ತು ಅಕ್ಬರ | (ನಾಟಕ) | |
| | 3. | ನಿರೀಕ್ಷೆ | (ಕಥೆ) | |
| | 4. | ಸದಾಚಾರ | (ಕೀರ್ತನೆ) | |
| **5.** | **ಸ್ವಾಸ್ಥ್ಯ** | | | **73** |
| | 1. | ನಾಲಿಗೆಯ ಮಹಿಮೆ | (ಲಲಿತ ಪ್ರಬಂಧ) | |
| | 2. | ಆರೋಗ್ಯ ಭಾಗ್ಯ | (ಕವಿತೆ) | |
| | 3. | ತಾಯಿಯ ಋಣ | (ಕಥೆ) | |
| **6.** | **ಪರಿವರ್ತನೆ** | | | **87** |
| | 1. | ಮೋಡಗಳೇ | (ಕವಿತೆ) | |
| | 2. | ಮೈಕಲ್ ಫ್ಯಾರಡೇ | (ಜೀವನ ಚರಿತ್ರೆ) | |
| | 3. | ಅನಿಲನ ಕಾರು | (ಕಥೆ) | |

# ಭಾರತದ ಸಂವಿಧಾನ

## ಭಾಗ 4(ಕ)

## ಮೂಲಭೂತ ಕರ್ತವ್ಯಗಳು

**51ಕ. ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು ಮತ್ತು ಸಂಸ್ಥೆಗಳನ್ನು, ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು.

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಪೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಎತ್ತಿ ಹಿಡಿಯುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ, ಹಾಗೆ ಮಾಡುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಸಮಾನ ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಮ್ಮಿಶ್ರ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣಾ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಸಮರ್ಪಕವಾಗಿ ಶ್ರಮಿಸುವುದು.

(ಟ) ಆರು ಮತ್ತು ಹದಿನಾಲ್ಕು ವರ್ಷಗಳ ನಡುವಣ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಬಾಲಕರಿಗೋ, ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

1

# ಸಿರಿ ನುಡಿ



ನಮ್ಮ ನಾಡು ಅಪೂರ್ವವಾದ ಕಲೆ, ಸಂಸ್ಕೃತಿ, ಸಾಹಿತ್ಯ, ಜನಪದ ಆಚರಣೆಗಳಿಂದ ಕೂಡಿದೆ. ಸಮಾಜದ ಸರ್ವಾಂಗೀಣ ಬೆಳವಣಿಗೆಯಲ್ಲಿ ಇವುಗಳ ಪಾತ್ರ ಮಹತ್ತರವಾದುದು. ವಿದೇಶೀಯರು ನಮ್ಮ ಸಂಸ್ಕೃತಿ, ಆಚರಣೆ ಮತ್ತು ಕಲೆಗಳ ಬಗ್ಗೆ ವಿಶೇಷವಾದ ಆಸಕ್ತಿಯನ್ನು ತೋರುವುದು ನಮಗೆ ಹೆಮ್ಮೆಯ ವಿಷಯವಾಗಿದೆ. ಇವುಗಳನ್ನು ಉಳಿಸಿ ಮುಂದಿನ ತಲೆಮಾರಿಗೆ ಹಸ್ತಾಂತರಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

# ಗಂಧದ ಬುವಿಯಿದು ಕನ್ನಡ ನಾಡು







ಗಂಧದ ಬುವಿಯಿದು ಕನ್ನಡ ನಾಡು
ಕವಿ ಕೋಗಿಲೆಗಳ ಸಿರಿನುಡಿ ಹಾಡು
ಜ್ಞಾನಪೀಠದಲಿ ಮೊದಲನೆ ಸಾಲು
ಭಾರತಮಾತೆಯ ಕೊರಳಲಿ ನೋಡು ॥

ಇಲ್ಲಿ ವಿರಾಜಿಪ ನದಿವನ ಕಾನನ
ಭಾರತಮಾತೆಗೆ ಉದ್ಯಾನ
ಹರಿಯುವ ನದಿಗಳು ಮಿರುಗುವ ಗಿರಿಗಳು
ವಸುಧೆಯ ನೊಸಲಿಗೆ ಸೋಪಾನ ॥

ಕನಕ ಪುರಂದರ ಅಲ್ಲಮ ಬಸವರು
ಕನ್ನಡ ಸಂಸ್ಕೃತಿ ರಕ್ಷಕರು
ನಾಡೋಜ ಪಂಪ ರನ್ನ ಪೊನ್ನರು
ವಿಶ್ವಮಾನ್ಯ ಕವಿ ಪುಂಗವರು ॥

ಶಾಂತಿ ಸಹನೆಗಿದು ಮೊದಲನೆ ಹೆಸರು
ಹಕ್ಕ ಬುಕ್ಕರಾಳಿದ ಈ ಕರುನಾಡು
ಮುತ್ತು ರತುನಗಳ ಅಳೆದು ಮಾರಿದ
ಕೃಷ್ಣದೇವರಾಯನ ಸಿರಿನಾಡು

ಮಾನಸ










## ಮಾನಸ

ಶ್ರೀಯುತ ಮಾನಸ ಅವರು 15.01.1962 ರಂದು ಮೈಸೂರಿನಲ್ಲಿ ಜನಿಸಿದರು. ಮೈಸೂರು ವಿಶ್ವವಿದ್ಯಾನಿಲಯದಿಂದ ಕನ್ನಡ ಎಂ.ಎ. ಪದವಿ ಪಡೆದ ಇವರು, ಮೈಸೂರಿನ 'ತನುಮನ' ಪ್ರಕಾಶನದಲ್ಲಿ ಪ್ರಕಾಶಕರಾಗಿ ಕೆಲಸ ನಿರ್ವಹಿಸುತ್ತಿದ್ದರು. ಪ್ರಸವ, ಚಂದನ ಮುಂತಾದ ಕವನ ಸಂಕಲನಗಳನ್ನೂ ನೂರೆಂಟು ನೆನಪುಗಳು, ನೆಲದ ನೆರಳು ಮುಂತಾದ ಕಾದಂಬರಿಗಳನ್ನೂ ರಚಿಸಿದ್ದಾರೆ. 'ಕೊರವರ ಸಂಸ್ಕೃತಿ' ಎನ್ನುವುದು ಇವರ ಸಂಶೋಧನ ಕೃತಿಯಾಗಿದೆ. ಇವರು ಸಂಕ್ರಮಣ ಕಾವ್ಯ ಪ್ರಶಸ್ತಿ, ಸೇವಾ ಚೇತನ ಪ್ರಶಸ್ತಿ, ವಿಶ್ವೇಶ್ವರಯ್ಯ ರಾಷ್ಟ್ರೀಯ ಸಾಹಿತ್ಯ ಪ್ರಶಸ್ತಿ ಮುಂತಾದ ಗೌರವ, ಸನ್ಮಾನಗಳಿಗೆ ಪಾತ್ರರಾಗಿದ್ದಾರೆ.

## ಚಟುವಟಿಕೆಗಳು

### ಹಾಡಿರಿ

- 'ಗಂಧದ ಬೀಡಿಯಿದು ಕನ್ನಡ ನಾಡು' ಹಾಡನ್ನು ರಾಗ, ತಾಳ, ಲಯಬದ್ಧವಾಗಿ ಹಾಡಿರಿ.

### ಪ್ರಾಸಪದಗಳನ್ನು ಗುರುತಿಸಿರಿ

- ಈ ಕವನದಲ್ಲಿ ಬಂದಿರುವ ಪ್ರಾಸಪದಗಳನ್ನು ಗುರುತಿಸಿ ಬರೆಯಿರಿ.

### ಉತ್ತರಿಸಿರಿ

- ಗಂಧದ ಬೀಡಿ ಯಾವುದು?
- ಭಾರತಮಾತೆಯ ಉದ್ಯಾನ ಯಾವುದು?
- ವಸುಧೆಯ ನೊಸಲಿಗೆ ಸೋಪಾನವಾಗಿರುವವುಗಳು ಯಾವುವು?
- ಈ ಕವಿತೆಯಲ್ಲಿ ಸೂಚಿಸಲಾದ ಕನ್ನಡದ ಪ್ರಸಿದ್ಧ ಕವಿಗಳು ಯಾರು?

### ಆಶಯ ಬರೆಯಿರಿ

- ಇಲ್ಲಿ ನೀಡಲಾದ ಕವಿತೆಯ ಸಾಲುಗಳ ಆಶಯವನ್ನು ಬರೆಯಿರಿ.

ಶಾಂತಿ ಸಹನೆಗಿದು ಮೊದಲನೆ ಹೆಸರು
ಹಕ್ಕ ಬುಕ್ಕರಾಳಿದ ಈ ಕರುನಾಡು
ಮುತ್ತು ರತುನಗಳ ಅಳೆದು ಮಾರಿದ
ಕೃಷ್ಣದೇವರಾಯನ ಸಿರಿನಾಡು

### ಆರಿಸಿ ಬರೆಯಿರಿ

- ಕೋಣೆಯಲ್ಲಿ ನೀಡಲಾದ ಪದಗಳಲ್ಲಿ ಗುಂಪಿಗೆ ಸೇರಿದವುಗಳನ್ನು ಆರಿಸಿ ಬರೆಯಿರಿ.

| | | |
|---|---|---|
| ಬುವಿ | ಸಂಪತ್ತು | ಪೃಥ್ವಿ |
| ವಿಪಿನ | ಇಳೆ | ಸಂಪದ |
| ಸಿರಿ | ಭೂಮಿ | ಕಾನನ |
| ಅಡವಿ | ಕಾಡು | ಐಶ್ವರ್ಯ |

### ಹೋಲಿಸಿರಿ

- ಇಲ್ಲಿ ನೀಡಲಾದ 'ಕನ್ನಡ ಬಳಸೋಣ' ಕವಿತೆಯನ್ನು 'ಗಂಧದ ಬುವಿಯಿದು' ಕವಿತೆಯೊಂದಿಗೆ ಹೋಲಿಸಿ ಬರೆಯಿರಿ.

## ಕನ್ನಡ ಬಳಸೋಣ

ಕನ್ನಡ ಬಳಸೋಣ ಕನ್ನಡ ಬೆಳೆಸೋಣ
ಕನ್ನಡ ತಾಯಿಯ ಅನ್ನದ ಋಣವನು
ಬನ್ನಿ ತೀರಿಸೋಣ

ಪಶ್ಚಿಮ ಘಟ್ಟಗಳಂತೆ
ನಿಲ್ಲಲಿ ಕನ್ನಡವಿಲ್ಲಿ
ಕಡಲಿನ ತೆರೆಗಳ ಹಾಗೆ
ನಲಿಯಲಿ ನಾಲಿಗೆಯಲ್ಲಿ

ಜುಳು ಜುಳು ಹರಿಯುತಲಿರಲಿ
ಕನ್ನಡ ಕಾವೇರಿ
ಮೊಳಗಲಿ ಮನೆ ಮನೆಯಲ್ಲಿ
ಕನ್ನಡ ಜಯಭೇರಿ.

### ಪದ ಹುಡುಕಿರಿ

- ಕವಿತೆಯಲ್ಲಿ ಬಂದಿರುವ ಕೆಲವು ಪದಗಳ ಅಕ್ಷರಗಳು ಕೋಣೆಯಲ್ಲಿ ಅಡಗಿವೆ. ಅವುಗಳನ್ನು ಹುಡುಕಿ ಪದಗಳನ್ನು ಬರೆಯಿರಿ.

| | | | |
|---|---|---|---|
| ಭಾ | ತ | ಕೃ | ಯ |
| ವ | ದೇ | ನಾ | ರಾ |
| ಮಾ | ನ್ಯ | ವಿ | ತೆ |
| ಕ | ಶ್ವ | ಷ್ಣ | ರು |
| ರ | ಪ | ಡು | ಜಿ |

### ಸಂಗ್ರಹಿಸಿರಿ

- ನಾಡು ನುಡಿಗಳಿಗೆ ಸಂಬಂಧಿಸಿದ ಹಾಡುಗಳನ್ನು ಸಂಗ್ರಹಿಸಿ ಭಿತ್ತಿಪತ್ರಿಕೆಯಲ್ಲಿ ಪ್ರದರ್ಶಿಸಿರಿ.

## ಕನ್ನಡ ಸಾಹಿತ್ಯಲೋಕವೂ ಜ್ಞಾನಪೀಠ ಪ್ರಶಸ್ತಿಯೂ

ಜ್ಞಾನಪೀಠ ಪ್ರಶಸ್ತಿಯು ಅತ್ಯುತ್ತಮ ಸಾಹಿತ್ಯ ಸೇವೆಗಾಗಿ ನೀಡುವ ಪ್ರಶಸ್ತಿಯಾಗಿದೆ. ಶ್ರೀಮಂತವಾದ ಕನ್ನಡ ಸಾಹಿತ್ಯಲೋಕವು ಇದುವರೆಗೆ ಎಂಟು ಜ್ಞಾನಪೀಠ ಪ್ರಶಸ್ತಿಗಳನ್ನು ತನ್ನ ಮಡಿಲಿಗೆ ಹಾಕಿಕೊಂಡಿದೆ. ಕನ್ನಡ ಸಾರಸ್ವತ ಜಗತ್ತಿನಲ್ಲಿ ತಮ್ಮ ಶ್ರೇಷ್ಠ ಸಾಧನೆಗಾಗಿ ಈ ಪ್ರಶಸ್ತಿಯನ್ನು ಪಡೆದವರ ವಿವರಗಳು ಇಲ್ಲಿವೆ.

| ಕವಿ | ಕೃತಿ | ವರ್ಷ |
|---|---|---|
| ಕುವೆಂಪು | ಶ್ರೀ ರಾಮಾಯಣ ದರ್ಶನಂ | 1967 |
| ದ.ರಾ. ಬೇಂದ್ರೆ | ನಾಕುತಂತಿ | 1973 |
| ಶಿವರಾಮ ಕಾರಂತ | ಮೂಕಜ್ಜಿಯ ಕನಸುಗಳು | 1977 |
| ಮಾಸ್ತಿ ವೆಂಕಟೇಶ ಅಯ್ಯಂಗಾರ್ | ಚಿಕವೀರ ರಾಜೇಂದ್ರ | 1983 |
| ವಿ.ಕೃ. ಗೋಕಾಕ್ | ಭಾರತ ಸಿಂಧು ರಶ್ಮಿ | 1990 |
| ಯು.ಆರ್. ಅನಂತಮೂರ್ತಿ | ಸಮಗ್ರ ಸಾಹಿತ್ಯ | 1994 |
| ಗಿರೀಶ್ ಕಾರ್ನಾಡ್ | ಸಮಗ್ರ ಸಾಹಿತ್ಯ | 1998 |
| ಚಂದ್ರಶೇಖರ ಕಂಬಾರ | ಸಮಗ್ರ ಸಾಹಿತ್ಯ | 2010 |

# ಶಿವಪ್ನಾಯ್ಕ ಕೋಂಟೆ ಹಿಡಿದ್ವಾಂಗೆ

ತಿರುಕನೊಬ್ಬನು ಕಡುಬಿಸಿಲಲ್ಲಿ ನಡೆದು ನಡೆದು ಆಯಾಸಗೊಂಡು ಹಸಿವನ್ನು ತಾಳಲಾರದೆ ತಳಮಳಿಸುತ್ತಿದ್ದನು. ಹಾಗೆಯೇ ಕಾಲೆಳೆದುಕೊಂಡು ಸ್ವಲ್ಪ ಮುಂದಕ್ಕೆ ಹೋಗಲು ಒಂದು ಗುಡಿಸಲು ಕಾಣಿಸಿತು.

ಬಾಗಿಲಲ್ಲಿ ಒಬ್ಬ ಮುದುಕಿಯು ಕುಳಿತಿದ್ದಳು. ಕಾಂಗಿನ ಹರಕು ಸೀರೆ ಸುತ್ತಿದ್ದಳು. ಮೈ ಸುಕ್ಕುಗಟ್ಟಿತ್ತು. ಮೊಗದಲ್ಲಿ ಬಡತನದ ಗೆರೆಗಳು ಎದ್ದು ಕಾಣಿಸುತ್ತಿದ್ದುವು. ತಿರುಕನು ಅವಳ ಬಳಿಗೆ ಹೋಗಿ "ಮೂರ್ದಿನವಾಯ್ತಜ್ಜಿ ಊಟವಿಲ್ದೆ. ಇಷ್ಟು ಅನ್ನ ಹಾಕ್ತೀಯಾ ಅಜ್ಜಿ!" ಎಂದು ಕೇಳಿದನು.

"ಅಯ್ಯೋ ಮಗ್ನೆ! ನಾನು ಅನ್ನ ಕಂಡ್ರಲ್ವೇ ನಿಂಗನ್ನ ಹಾಕೋದು?" ಎಂದು ತಲೆ ಆಡಿಸಿದಳು.

"ಇಟ್ಟು ರಾಗಿ ಗಂಜಿ ಬೇಯ್ಸಿಟ್ಟಿದ್ದೇನೆ. ನೆಂಜ್ಲಿಕ್ಕೇನೂ ಇಲ್ಲ. ಉಪ್ಪು ಹಾಕಿ ಕುಡಿತಿಯಾದ್ರೆ ಕುಡಿ"

"ಆಗಲಿ ತಾಯಿ, ಕುಡೀತೇನೆ"



ಮುದುಕಿಯು ಜಗಲಿಯಲ್ಲಿ ಎಲೆ ಹಾಕಿದಳು. ತಿರುಕನು ಹೊದೆದಿದ್ದ ಕಂಥೆಯನ್ನು ಸರಿಸಿಕೊಂಡು ಎಲೆ ಮುಂದೆ ಕುಳಿತನು. ಅಜ್ಜಿ ಬಾವಡಿಯಲ್ಲಿ ರಾಗಿ ಗಂಜಿ ತಂದು ನಾಲ್ಕು ಚಿಪ್ಪು ಇಕ್ಕಿದಳು. ಆ ಗಂಜಿ ಎಲೆಯಲ್ಲಿ ನಾಲ್ಕು ಕಡೆ ಓಡಿತು. ತಿರುಕ ಅಲ್ಲಿ ಓಡುತ್ತದೆಂದು ಅಲ್ಲಿ ಹಿಡಿದರೆ ಇಲ್ಲಿ ಓಡಿತು. ಇಲ್ಲಿ ಹಿಡಿದರೆ ಇನ್ನೊಂದು ಕಡೆ ಓಡಹತ್ತಿತ್ತು. ಹೀಗೆ ಅಲ್ಲಿ ಇಲ್ಲಿ ಆಚೆ ಈಚೆ ಹಿಡಿಯುತ್ತ ಒಂದು ಕಡೆಯೂ ಹಿಡಿಯಲಾರದೆ ಪೇಚಾಡುತ್ತಿದ್ದನು. ಅವನ ಪೇಚಾಟ ಕಂಡು ಅಜ್ಜಿ ನಗುತ್ತ "ಏನಪ್ಪಾ! ನೀನು ಶಿವಪ್ನಾಯ್ಕ ಕೋಂಟೆ ಹಿಡಿದ್ಹಾಂಗೆ ಮಾಡ್ತೀಯಲ್ಲಾ! ಒಂದ್ಕಡೆ ಹಿಡಿದ್ರೆ ನಾಕ್ಕಡೆ ಬಿಡ್ತಿ!" ಎಂದಳು. ತಿರುಕ ಆ ಮಾತನ್ನು ಕೇಳಿ ಮನಸ್ಸಿನೊಳಗೇ ನಕ್ಕನು. ಅಜ್ಜಿಯ ಮಾತಿನ ಸಾರವನ್ನು ಗ್ರಹಿಸಿಕೊಂಡನು. "ಸರಿ ಅಜ್ಜಿ! ನೀನು ಹೇಳಿದ್ದು ನಿಜ" ಎಂದು ಗಂಜಿಯನ್ನು ತಡೆಯುತ್ತ ಹೇಳಿದನು.

"ಹಾಂಗಲ್ಲಪ್ಪ! ಇಕ್ಕಿ ಗಂಜಿನೆಲ್ಲ ಒಂದ್ಕಡೆಮಾಡು. ಓಡೋ ಗಂಜೀನ ಬರಗಿ ಸುರಿ" ಎಂದಳು.

"ಆಯ್ತಜ್ಜಿ! ನೀನು ಹೇಳ್ದ ಹಾಂಗೇ ಮಾಡ್ತೇನೆ" ಎಂದು ತಿರುಕ ಗಂಜಿಯನ್ನು ಸರಬರನೆ ಸುರಿದ. ಅಜ್ಜಿ ಒಂದೊಂದೇ ಚಿಪ್ಪು ಬಡಿಸುತ್ತಾ ಕುಳಿತಳು. ತಿರುಕನು ಹೊಟ್ಟೆತುಂಬ ಗಂಜಿ ಕುಡಿದು ತೇಗಿದನು. ಕೈ ತೊಳೆದುಕೊಂಡು 'ಬರ್ತೇನಜ್ಜಿ' ಎಂದು ಹೇಳಿ ಉಪಕಾರವನ್ನು ನೆನೆವ ಕಣ್ಣಿಂದ ಮುದುಕಿಯನ್ನು ನೋಡಿ ಹೊರಟು ಹೋದನು.

ತಿರುಕ ತಿರುಕನಾಗಿರಲಿಲ್ಲ. ಕೋಂಟೆ ಕೋಲಾಹಲನೆನಿಸಿದ ಇಕ್ಕೇರಿಯ ಶಿವಪ್ಪನಾಯಕನೇ ಆಗಿದ್ದನು. ಅವನು ಕೋಟೆಯ ಮೇಲೆ ಕೋಟೆಯನ್ನು ಹಿಡಿಯುತ್ತಿದ್ದರೂ ಒಂದೊಂದೇ ಕೋಟೆ ಕೈಬಿಡುತ್ತಲೂ ಇತ್ತು. ಅವನು ಶತ್ರುಗಳ ಸುಳುವನ್ನು ತಿಳಿಯುವುದಕ್ಕಾಗಿ ಹೀಗೆ ವೇಷಪಲ್ಲಟ ಮಾಡಿಕೊಂಡು ತೆಂಕನಾಡಿನಲ್ಲಿ ತಿರುಗುತ್ತಿದ್ದನು.

'ಶಿವಪ್ನಾಯ್ಕ ಕೋಂಟೆ ಹಿಡಿದ್ಹಾಂಗೆ ಮಾಡ್ತೀಯಲ್ಲಾ' ಎಂಬ ಅಜ್ಜಿಯ ಮಾತು ಅವನ ಮರ್ಮಕ್ಕೆ ನಾಟಿತು. 'ಹಿಡಿದ ಕೋಟೆಗಳನ್ನು ಬಿಡುವುದೆಂದರೆ ಓಡುವ ಗಂಜಿಯನ್ನು ಹಿಡಿದ ಹಾಗೆ' ಎಂದು ಮನಸ್ಸಿನಲ್ಲಿ ಗಟ್ಟಿಮಾಡಿಕೊಂಡನು. ಅಂದಿನಿಂದ ಅವನು ಹಿಡಿದ ಕೋಟೆಗಳನ್ನು ಒಂದೊಂದಾಗಿ ಬಲಪಡಿಸಿಕೊಂಡು ಮಿಕ್ಕ ಕೋಟೆಗಳಿಗೆ ಲಗ್ಗೆಯಿಡುತ್ತಿದ್ದನು.

ಹಸಿದವನಿಗೆ ಇಕ್ಕಿ ಉಪಚರಿಸಿ ಅನುಭವದ ತಿರುಳನ್ನು ಕೊಟ್ಟ ಆ ಬಡ ಅಜ್ಜಿಯನ್ನು ಅವನು ಮರೆಯಲಿಲ್ಲ. ಅರಮನೆಯನ್ನು ಸೇರಿದೊಡನೆ ಹರಿಯದ ಹಚ್ಚಡ, ಮುರಿಯದ ಮುರುಗಳನ್ನು ಕಳುಹಿಸಿಕೊಟ್ಟು ಅವಳನ್ನು ಮನ್ನಿಸಿದನು.

ಆ ಅಜ್ಜಿಯ ಬಾಯಿಯಿಂದ ಬಿದ್ದ 'ಶಿವಪ್ನಾಯ್ಕ ಕೋಂಟೆ ಹಿಡಿದ್ಹಾಂಗೆ' ಎಂಬ ಅನುಭವದ ಮಾತು ಗಾದೆಯಾಗಿ ಇಂದಿಗೂ ಉಳಿದುಕೊಂಡಿದೆ.

*ಬೇಕಲ ರಾಮನಾಯಕ*

**ಬೇಕಲ ರಾಮನಾಯಕ**



ಬೇಕಲ ರಾಮನಾಯಕರು 1902 ಅಕ್ಟೋಬರ್ 26 ರಂದು ಕಾಸರಗೋಡಿನ ಬೇಕಲದಲ್ಲಿ ಜನಿಸಿದರು. ವೃತ್ತಿಯಲ್ಲಿ ಅಧ್ಯಾಪಕರಾಗಿದ್ದ ಇವರು ಪುಳ್ಕೂರು ಬಾಚ, ನಾಡಕತೆಗಳು, ತೆಂಕನಾಡ ಐತಿಹ್ಯಗಳು, ಕೆಚ್ಚಿನ ಕಿಡಿಗಳು, ಸತ್ಯ ಪರೀಕ್ಷೆ, ಬಾಳಿದ ಹೆಸರು ಮತ್ತು ಇತರ ಐತಿಹ್ಯಗಳು ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಕಥನ ಕವನ, ನಾಟಕ ಮುಂತಾದವುಗಳನ್ನೂ ರಚಿಸಿದ್ದಾರೆ. ಕನ್ನಡ ನಾಡುನುಡಿಯ ರಕ್ಷಣೆಗಾಗಿ ಅವಿಶ್ರಾಂತವಾಗಿ ದುಡಿದ ಈ ಚೇತನ 21.11.1969ರಂದು ಇಹಲೋಕದಿಂದ ಕಣ್ಮರೆಯಾಯಿತು.

## ಚಟುವಟಿಕೆಗಳು

### ಚರ್ಚಿಸಿರಿ

- 'ಹಸಿದವನಿಗೆ ಇಕ್ಕಿ ಉಪಚರಿಸಿ, ಅನುಭವದ ತಿರುಳನ್ನು ಕೊಟ್ಟ ಆ ಬಡ ಅಜ್ಜಿಯನ್ನು ಅವನು ಮರೆಯಲಿಲ್ಲ' ರಾಜನ ಈ ಗುಣದ ಬಗ್ಗೆ ನಿಮ್ಮ ಅಭಿಪ್ರಾಯವೇನು? ಚರ್ಚಿಸಿರಿ.

### ಉತ್ತರಿಸಿರಿ

- ತಿರುಕನು ಕಂಡ ಮುದುಕಿಯ ರೂಪ ಹೇಗಿತ್ತು?
- ತಿರುಕನು ಪೇಚಾಡಿದ್ದು ಯಾಕೆ? ಹೇಗೆ?
- ಶಿವಪ್ಪನಾಯಕನ ಮರ್ಮಕ್ಕೆ ನಾಟಿದ ಅಜ್ಜಿಯ ಮಾತು ಯಾವುದು?
- ಅಜ್ಜಿಯಿಂದ ಶಿವಪ್ಪನಾಯಕನು ಕಲಿತ ಪಾಠ ಯಾವುದು?

### ಸಂದರ್ಭ ಬರೆಯಿರಿ

- ಈ ಮಾತುಗಳನ್ನು ಹೇಳಿದ ಸಂದರ್ಭವನ್ನು ಬರೆಯಿರಿ.
  - "ಏನಪ್ಪಾ! ನೀನು ಶಿವಪ್ಪಾಯ್ಕ ಕೋಂಟೆ ಹಿಡಿದ್ದಾಂಗೆ ಮಾಡ್ತೀಯಲ್ಲಾ!"
  - "ಮೂರ್ದಿನವಾಯ್ತಜ್ಜಿ ಊಟವಿಲ್ದೆ"

Ò

## ಸಂಭಾಷಣೆ ಬರೆಯಿರಿ

- ಪಾಠದಿಂದ ನಿಮಗಿಷ್ಟವಾದ ಭಾಗವನ್ನು ಆಯ್ದು ಸಂಭಾಷಣೆ ರಚಿಸಿರಿ. ತರಗತಿಯಲ್ಲಿ ಏಕಪಾತ್ರಾಭಿನಯ ಮಾಡಿರಿ.

## ಮಾದರಿಯಂತೆ ಬದಲಾಯಿಸಿರಿ

- ಇಲ್ಲಿ ನೀಡಲಾದ ವಾಕ್ಯಗಳನ್ನು ಮಾದರಿಯಂತೆ ಬದಲಾಯಿಸಿ ಬರೆಯಿರಿ.

ಮಾದರಿ : "ಅಯ್ಯೋ ಮಗ್ನೇ! ನಾನು ಅನ್ನ ಕಂಡ್ರಲ್ವೇ ನಿಂಗನ್ನ ಹಾಕೋದು?"

"ಅಯ್ಯೋ ಮಗನೇ! ನಾನು ಅನ್ನವನ್ನು ಕಂಡರಲ್ಲವೇ ನಿನಗೆ ಅನ್ನವನ್ನು ಹಾಕುವುದು?"

- "ಇಟ್ಟು ರಾಗಿ ಗಂಜಿ ಬೇಯ್ಸಿಟ್ಟಿದ್ದೇನೆ"
- "ಮೂರ್ದಿನವಾಯ್ತುಜ್ಜಿ ಊಟವಿಲ್ದೆ"
- "ಶಿವಪ್ನಾಯ್ಕ ಕೋಂಟೆ ಹಿಡಿದ್ಹಾಂಗೆ ಮಾಡ್ತೀಯಲ್ಲಾ!"

## ಸರಳ ವಾಕ್ಯಗಳಾಗಿ ಬರೆಯಿರಿ

ಉದಾಹರಣೆ :

ತಿರುಕನೊಬ್ಬನು ಕಡುಬಿಸಿಲಲ್ಲಿ ನಡೆದು ನಡೆದು ಆಯಾಸಗೊಂಡು ಹಸಿವನ್ನು ತಾಳಲಾರದೆ ತಳಮಳಿಸುತ್ತಿದ್ದನು.

ತಿರುಕನೊಬ್ಬನು ಕಡುಬಿಸಿಲಲ್ಲಿ ನಡೆದು ನಡೆದು ಆಯಾಸಗೊಂಡನು. ಅವನು ಹಸಿವನ್ನು ತಾಳಲಾರದೆ ತಳಮಳಿಸುತ್ತಿದ್ದನು.

- ಅಜ್ಜಿ ಬಾವಡಿಯಲ್ಲಿ ರಾಗಿಗಂಜಿ ತಂದು ನಾಲ್ಕು ಚಿಪ್ಪು ಇಕ್ಕಿದಳು.
- ತಿರುಕನು ಹೊದೆದಿದ್ದ ಕಂಥೆಯನ್ನು ಸರಿಸಿಕೊಂಡು ಎಲೆ ಮುಂದೆ ಕುಳಿತನು.

## ಗಾದೆ ಮಾತಿನ ಆಶಯ ಬರೆಯಿರಿ

- 'ಶಿವಪ್ನಾಯ್ಕ ಕೋಂಟೆ ಹಿಡಿದ್ಹಾಂಗೆ' ಎಂಬುದು ಒಂದು ಗಾದೆ ಮಾತಾಗಿದೆ. ನಿಮಗೆ ತಿಳಿದಿರುವ ಕೆಲವು ಗಾದೆ ಮಾತುಗಳನ್ನು ಸಂಗ್ರಹಿಸಿ ಬರೆಯಿರಿ. ಅವುಗಳಲ್ಲಿ ಒಂದು ಗಾದೆ ಮಾತಿನ ಆಶಯವನ್ನು ಬರೆದು ತರಗತಿಯಲ್ಲಿ ಮಂಡಿಸಿರಿ.

# ಯಕ್ಷಗಾನ ಬೊಂಬೆಯಾಟ

ಜನಪದ ಕಲೆಗಳೆಲ್ಲವೂ ನಮ್ಮ ಧರ್ಮ, ಸಂಸ್ಕೃತಿಯನ್ನು ಅಭಿವ್ಯಕ್ತಗೊಳಿಸುವ ಮಾಧ್ಯಮಗಳಾಗಿವೆ. ಹಲವು ಜನಪದ ಕಲೆಗಳಂತೆ ನಮ್ಮ ನಾಡಿನ ವೈಭವ ಮತ್ತು ಕಲಾ ಶ್ರೀಮಂತಿಕೆಯನ್ನು ಪ್ರತಿಬಿಂಬಿಸುವಲ್ಲಿ ಸೂತ್ರದ ಬೊಂಬೆಯಾಟದ ಪಾತ್ರವು ಹಿರಿದಾದದು. ಕಾಸರಗೋಡು ಮತ್ತು ಕರಾವಳಿ ಕರ್ನಾಟಕದಲ್ಲಿ ಸೂತ್ರದ ಬೊಂಬೆಯಾಟವು ಜನಪ್ರಿಯವಾಗಿದೆ. ಉಪ್ಪಿನಕುದ್ರು ಹಾಗೂ ಕಾಸರಗೋಡಿನ ಸೂತ್ರದ ಬೊಂಬೆಯಾಟ ಸಂಘಗಳು ಯಕ್ಷಗಾನ ಕಲೆಯನ್ನು ಸೂತ್ರದ ಬೊಂಬೆಗಳ ಮೂಲಕ ಪ್ರದರ್ಶಿಸುತ್ತಿವೆ. ಆದ ಕಾರಣ ಈ ಬೊಂಬೆಯಾಟವನ್ನು 'ಯಕ್ಷಗಾನ ಸೂತ್ರದ ಬೊಂಬೆಯಾಟ' ಎಂದು ಕರೆಯಲಾಗುತ್ತದೆ.

ಕೆ. ವೆಂಕಟಕೃಷ್ಣಯ್ಯನವರು ಕಾಸರಗೋಡಿನಲ್ಲಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಬೊಂಬೆಯಾಟ ಸಂಘದ ಸ್ಥಾಪನೆಗೆ ಕಾರಣರಾದವರಾಗಿದ್ದಾರೆ. ನಾನಾ ರೀತಿಯ ಬೊಂಬೆಗಳನ್ನು ನಿರ್ಮಿಸುವುದು ಅವರ ಹವ್ಯಾಸವಾಗಿತ್ತು. ತೆಂಗಿನ ಗೆರಟೆಯಿಂದ, ಚಿಂದಿಬಟ್ಟೆಯಿಂದ ಕಲಾಕೃತಿಗಳನ್ನು ತಯಾರಿಸುತ್ತಿದ್ದರು. ವೆಂಕಟಕೃಷ್ಣಯ್ಯರ ಪುತ್ರ ಕೆ.ವಿ. ರಮೇಶ್ ಎಳವೆಯಲ್ಲಿಯೇ ಚಿತ್ರಕಲೆಯಲ್ಲಿ ಆಸಕ್ತರಾಗಿದ್ದರು. ಅವರಿಗೆ ಉಡುಪಿಯ ಉಪ್ಪಿನಕುದ್ರು ಕೊಗ್ಗ ಕಾಮತರ ಬೊಂಬೆಯಾಟವನ್ನು ವೀಕ್ಷಿಸುವ






ಅವಕಾಶ ಒಮ್ಮೆ ಲಭಿಸಿತ್ತು. ಅದೇ ರೀತಿಯಲ್ಲಿ ಬೊಂಬೆಗಳನ್ನು ಕುಣಿಸಬೇಕೆಂಬ ಛಲವು ಉಂಟಾಯಿತು ರಮೇಶರ ಹವ್ಯಾಸಕ್ಕೆ ಅವರ ತಂದೆ ವೆಂಕಟಕೃಷ್ಣಯ್ಯರ ಪ್ರೋತ್ಸಾಹ ಲಭಿಸಿತು. ಅವರ ಮಾರ್ಗದರ್ಶನದಲ್ಲಿ ಪಿಲಿಕುಂಜೆಯ ಅವರ ಮನೆ ಕಲಾಕೇಂದ್ರವಾಯಿತು.

ಉಪ್ಪಿನಕುದ್ರು ತಂಡದ ಹಾಗೆಯೇ ಚಂದ್ರಗಿರಿ ತೀರದಲ್ಲಿಯೂ ಬೊಂಬೆಯಾಟ ಸಂಘದ ಉದಯವಾಯಿತು.ಶ್ರೀ ಗೋಪಾಲಕೃಷ್ಣ ನಾಮಾಂಕಿತದಲ್ಲಿ ಶ್ರೀ ಕೆ.ವಿ. ರಮೇಶ ಮತ್ತು ಅವರ ಸಹೋದರ ಸಹೋದರಿಯರು, ಕುಟುಂಬದ ಇತರ ಸದಸ್ಯರು ಸೂತ್ರ ಹಿಡಿದರು. ಬೊಂಬೆ ಕುಣಿಸುವ ಕಲೆಯನ್ನು ಕರಗತಮಾಡಿಕೊಂಡರು. ಪ್ರದರ್ಶನಗಳಿಗೆ ಅವಕಾಶ ಲಭಿಸಿದವು. ಪ್ರೇಕ್ಷಕ ವಲಯ ವಿಸ್ತಾರಗೊಂಡಿತು. ಕರಾವಳಿಯ ಸರ್ವಾಂಗ ಸುಂದರ ಕಲೆಯಾದ ಯಕ್ಷಗಾನವು ಬೊಂಬೆಗಳ ಮೂಲಕ ರಂಗದಲ್ಲಿ ವಿಜೃಂಭಿಸಿದಾಗ ಕಲಾಸಕ್ತರು ಬೆರಗಾದರು. ಈ ತಂಡವು ಪಾಕಿಸ್ತಾನ, ಪ್ಯಾರಿಸ್, ಜೆಕೋಸ್ಲವಾಕಿಯಾ, ಚೀನಾ ಮೊದಲಾದೆಡೆಗಳಲ್ಲಿ ನಡೆದ ಜಾಗತಿಕ ಬೊಂಬೆಯಾಟ ಉತ್ಸವಗಳಲ್ಲಿ ಭಾಗವಹಿಸಿ ಯಕ್ಷಗಂಧರ್ವ ಲೋಕ ಸೃಷ್ಟಿಸಿತು. 'ದಿ ಬೆಸ್ಟ್ ಟ್ರೆಡಿಶನಲ್ ಪಪ್ಪೆಟ್ ಪರ್ಫೋರ್ಮರ್' ಎಂಬ ಅಂತಾರಾಷ್ಟ್ರೀಯ ಪ್ರಶಸ್ತಿ ಈ ಸಂಘಕ್ಕೆ ಲಭಿಸಿತು.

ಯಕ್ಷಗಾನ ಬಯಲಾಟದ ಪ್ರಸಂಗ ಸಾಹಿತ್ಯವನ್ನೇ ಬೊಂಬೆಯಾಟದಲ್ಲೂ ಅಳವಡಿಸಲಾಗುತ್ತದೆ. ಪುರಾಣ ಪ್ರಸಂಗಗಳೇ ಹೆಚ್ಚು. ಲಂಕಾದಹನ, ನರಕಾಸುರ ವಧೆ, ಇಂದ್ರಜಿತು ಕಾಳಗ, ವೀರಮಣಿ ಕಾಳಗ, ಪಂಚವಟಿ, ಗರುಡ ಗರ್ವಭಂಗ,

ದೇವೀಮಹಾತ್ಮೆ ಮೊದಲಾದ ಪ್ರಸಂಗಗಳನ್ನು ಪ್ರದರ್ಶಿಸಲಾಗುತ್ತದೆ. ಸುಶ್ರಾವ್ಯ ಭಾಗವತಿಕೆ, ಚೆಂಡೆಮದ್ದಳೆಗಳ ಶ್ರುತಿಮಧುರ ನಾದವೈಭವ ಕ್ಷಣಮಾತ್ರದಲ್ಲಿ ಯಕ್ಷಗಂಧರ್ವ ಲೋಕವನ್ನು ಸೃಷ್ಟಿಸುತ್ತದೆ. ಬೊಂಬೆ ಆರತಿ ಬೆಳಗುತ್ತದೆ. ಯಜ್ಞಯಾಗಾದಿಗಳನ್ನು ಮಾಡುತ್ತದೆ. ಪುಂಗಿಯೂದಿ ಹಾವನ್ನಾಡಿಸುತ್ತದೆ. ಕುದುರೆಯನ್ನೇರಿ ಜೈತ್ರಯಾತ್ರೆಗೆ ಹೊರಡುತ್ತದೆ. ಹುಲಿ, ಸಿಂಹದ ಮೇಲೆ ಕುಳಿತು ಸವಾರಿ ಮಾಡುತ್ತದೆ. ಗರುಡನ ಬೆನ್ನೇರಿ ಆಕಾಶ ಮಾರ್ಗದಲ್ಲಿ ಸಂಚರಿಸುತ್ತದೆ. ಯುದ್ಧ ಮಾಡುತ್ತದೆ, ಬಾಣ ಬಿಡುತ್ತದೆ, ಆರ್ಭಟಿಸುತ್ತದೆ.

ಬೊಂಬೆಗಳನ್ನು ಕುಂಬಳ, ಶಿವಣಿ, ಹಾಲೆ ಮೊದಲಾದ ಹಗುರವಾದ ಮರಗಳಿಂದ ನಿರ್ಮಿಸಲಾಗುತ್ತದೆ. ಒಂದು ಬೊಂಬೆಯ ತಯಾರಿಗೆ ನುರಿತ ಕಲಾವಿದನಿಗೆ ಸುಮಾರು ಒಂದು ತಿಂಗಳು ಕಾಲಾವಧಿ ಬೇಕಾಗುತ್ತದೆ.ಸಾಮಾನ್ಯವಾಗಿ ಒಂದೊಂದು ಬೊಂಬೆಗೂ ಆರು ಸೂತ್ರಗಳು. ಕೈಕಾಲುಗಳಿಗೆ ಒಂದೊಂದು ಜತೆ, ಸೊಂಟ ತಲೆಗೆ ಒಂದೊಂದರಂತೆ ಇರುತ್ತವೆ. ಬೊಂಬೆಗಳ ಕೈಯಲ್ಲಿ ಆಯುಧ, ದೊಂದಿ ಅಥವಾ ಇತರ ಉಪಕರಣಗಳು ಹಿಡಿಯಬೇಕೆಂದಿದ್ದಲ್ಲಿ ಪ್ರತ್ಯೇಕ ಸೂತ್ರವನ್ನು ಸೇರಿಸಬೇಕಾಗುತ್ತದೆ. ಆರು ಸೂತ್ರಗಳನ್ನು ಜೋಡಿಸಲು ಒಂದು ಅಡಿ ಉದ್ದದ ಮೂರು ಕೋಲುಗಳನ್ನು ಉಪಯೋಗಿಸಲಾಗುತ್ತದೆ. ಪ್ರತಿಯೊಂದು ಕೋಲಿನ ತುದಿಗೆ ಒಂದೊಂದರಂತೆ ದಾರದ ತುದಿಯನ್ನು ಕಟ್ಟುತ್ತಾರೆ.

ಯಕ್ಷಗಾನ ಬಯಲಾಟದ ರಂಗಸ್ಥಳಕ್ಕಿಂತ ತೀರಾ ಭಿನ್ನವಾದ ರಂಗಸ್ಥಳ ಬೊಂಬೆಯಾಟದ್ದು. ಹತ್ತು ಅಡಿ ಉದ್ದ,





ಹತ್ತು ಅಡಿ ಅಗಲ ಮತ್ತು ಐದರಿಂದ ಆರು ಅಡಿ ಎತ್ತರದ ವೇದಿಕೆಯನ್ನು ರಂಗಸ್ಥಳವಾಗಿ ಉಪಯೋಗಿಸಲಾಗುತ್ತದೆ. ರಂಗಸ್ಥಳದ ಮೂರು ಭಾಗಗಳನ್ನು ಪರದೆಗಳಿಂದ ಮುಚ್ಚಲಾಗುತ್ತದೆ. ರಂಗಸ್ಥಳದ ಎದುರು ಪರದೆಯಿಂದ ಎರಡು ಅಡಿ ಹಿಂದೆ ಇನ್ನೊಂದು ಕಿರಿದಾದ ಪರದೆ. ಇದರ ಅಳತೆ ಐದು ಅಡಿ ಉದ್ದ ಮತ್ತು ಮೂರು ಅಡಿ ಅಗಲವಾಗಿರುತ್ತದೆ. ಇದರಲ್ಲಿ ಐದು ಅಡಿ ಉದ್ದ ಮತ್ತು ಎರಡು ಅಡಿ ಅಗಲದ ಭಾಗ ಪ್ರೇಕ್ಷಕರಿಗೆ ಕಾಣುವಂತೆ ಇರುತ್ತದೆ. ಈ ಪರದೆಯ ಹಿಂದೆ ಮರೆಯಾಗಿ ನಿಂತು ಸೂತ್ರಧಾರ ಬೊಂಬೆಗಳನ್ನು ಕುಣಿಸುತ್ತಾನೆ. ಬೊಂಬೆಗಳು ಕುಣಿಯುತ್ತಿರುವುದು ಮಾತ್ರ ಪ್ರೇಕ್ಷಕರಿಗೆ ಕಾಣುತ್ತದೆ. ಯಕ್ಷಗಾನ ಕಲೆಯ ಅರಿವು ಮತ್ತು ಕುಣಿತವನ್ನು ಕರಗತ ಮಾಡಿದವರಿಗೆ ಮಾತ್ರ ಬೊಂಬೆಯಾಟದ ನಿರ್ವಹಣೆ ಸಾಧ್ಯ. ಬೊಂಬೆಯಾಟದಲ್ಲಿ ಬೊಂಬೆಗಳನ್ನು ಕುಣಿಸುವವನು ಸೂತ್ರಧಾರ.ಪಾತ್ರಕ್ಕೆ ತಕ್ಕಂತೆ ಮಾತುಗಳನ್ನು ಹಿನ್ನೆಲೆಯಿಂದ ಹೇಳುತ್ತಾರೆ.

ದೇಶವಿದೇಶಗಳ ಸಂಶೋಧಕರು, ಅಧ್ಯಯನಶೀಲರು, ಆಗಾಗ ರಮೇಶರನ್ನು ಸಂಪರ್ಕಿಸಿ ಮಾಹಿತಿ ಪಡೆಯುತ್ತಿದ್ದಾರೆ. ಯುರೋಪ್, ಅಮೇರಿಕಾ, ಫ್ರಾನ್ಸ್, ಚೀನಾ ದೇಶಗಳ ಪ್ರವಾಸಿಗಳು ಪಿಲಿಕುಂಜೆಯ ಪ್ರಶಾಂತ ವಾತಾವರಣದಲ್ಲಿ ಯಕ್ಷಗಾನದ ರಮ್ಯಾದ್ಭುತ ಸನ್ನಿವೇಶಗಳನ್ನು ವೀಕ್ಷಿಸುತ್ತಿದ್ದಾರೆ. ವಿದೇಶೀ ಕಲಾವಿದರು ಯಕ್ಷಗಾನ ಬೊಂಬೆಗಳ ವೇಷಭೂಷಣ, ಕುಣಿತದ ರೀತಿಯನ್ನು ಕಂಡು ಬೆರಗಾಗುತ್ತಿದ್ದಾರೆ. ಕೆಲವರು 'ಜಗತ್ತಿನಲ್ಲೇ ಇಂತಹ ಕಲೆ ಬೇರೊಂದಿಲ್ಲ' ಎಂಬ ಅಭಿಪ್ರಾಯ

ಅಚ್ಚಗನ್ನಡ ಪ್ರದೇಶವಾದ ಕಾಸರಗೋಡು ಪ್ರಕೃತ ಕೇರಳದಲ್ಲಿದ್ದರೂ ಕನ್ನಡದ ಬೇರು ಇಲ್ಲಿ ಗಟ್ಟಿಯಾಗಿದೆ. ಭಾಷೆ, ಸಂಸ್ಕೃತಿ ಜೀವಂತವಾಗಿದೆ. ಈ ಪ್ರದೇಶದಲ್ಲಿ ಶ್ರೀ ಕೆ.ವಿ. ರಮೇಶ ಅವರು ಅತಿಥಿಗೃಹ, ಮ್ಯೂಸಿಯಂ, ಸಭಾಂಗಣ ಗ್ರಂಥಾಲಯ ಮೊದಲಾದವುಗಳನ್ನೊಳಗೊಂಡ 'ಬೊಂಬೆಮನೆ' ಅಥವಾ 'ಯಕ್ಷಪುತ್ಥಳಿ ಸಮುಚ್ಚಯ' ನಿರ್ಮಿಸುತ್ತಿದ್ದಾರೆ. ಮ್ಯೂಸಿಯಂನಲ್ಲಿ ಸಾವಿರ ಬೊಂಬೆಗಳನ್ನಿರಿಸುವ ಯೋಜನೆಯಿದ್ದು ಸ್ವತಃ ರಮೇಶರೇ ಬೊಂಬೆಗಳನ್ನು ತಯಾರಿಸುತ್ತಿದ್ದಾರೆ. ಇತರ ಕಲೆಗಳಂತೆ ಸಂಪದ್ಭರಿತವಾದ ಯಕ್ಷಗಾನ ಬೊಂಬೆಯಾಟಕ್ಕೆ ನಮ್ಮ ಸಂಸ್ಕೃತಿಯ ಪ್ರಸಾರದಲ್ಲಿ ಗಮನಾರ್ಹ ಸ್ಥಾನವಿದೆ. ಅದನ್ನು ಉಳಿಸಿ, ಬೆಳೆಸಿ ಪ್ರಚಾರ ಮಾಡುವುದು ನಮ್ಮೆಲ್ಲರ ಪ್ರಧಾನ ಕರ್ತವ್ಯವಾಗಿದೆ.

## ಚಟುವಟಿಕೆಗಳು

### ಉತ್ತರಿಸಿರಿ

- ಸೂತ್ರದ ಬೊಂಬೆಯಾಟಕ್ಕೆ 'ಯಕ್ಷಗಾನ ಸೂತ್ರದ ಬೊಂಬೆಯಾಟ' ಎಂದು ಹೆಸರು ಬರಲು ಕಾರಣವೇನು?
- ಕಾಸರಗೋಡಿನಲ್ಲಿ ಬೊಂಬೆಯಾಟ ಪ್ರಾರಂಭವಾದ ಬಗೆ ಹೇಗೆ?
- ಯಕ್ಷಗಾನ ಬೊಂಬೆಯಾಟದ ವಿಶೇಷತೆಗಳೇನು?
- ಬೊಂಬೆಗೆ ಸೂತ್ರಗಳನ್ನು ಹೇಗೆ ಜೋಡಿಸುತ್ತಾರೆ?

### ಆಮಂತ್ರಣ ಪತ್ರಿಕೆ ತಯಾರಿಸಿರಿ

- ನಿಮ್ಮ ಶಾಲೆಯಲ್ಲಿ ಯಕ್ಷಗಾನ ಬೊಂಬೆಯಾಟವನ್ನು ಪ್ರದರ್ಶಿಸಬೇಕಾಗಿದೆ. ಅದಕ್ಕಾಗಿ ಆಮಂತ್ರಣ ಪತ್ರಿಕೆಯನ್ನು ತಯಾರಿಸಿರಿ.

### ಸಂಯುಕ್ತವಾಕ್ಯ ರಚಿಸಿರಿ

- ಎರಡು ವಾಕ್ಯಗಳನ್ನು ಸೇರಿಸಿ ಒಂದು ವಾಕ್ಯವಾಗಿ ಬರೆಯಬಹುದು. ಆದರೆ ಅರ್ಥ ವ್ಯತ್ಯಾಸ ಆಗುವುದಿಲ್ಲ. ಇದೇ ರೀತಿ ಇಲ್ಲಿ ನೀಡಿರುವ ವಾಕ್ಯಗಳನ್ನು ಮಾದರಿಯಂತೆ ಸಂಯುಕ್ತವಾಕ್ಯಗಳಾಗಿ ಬರೆಯಿರಿ.

  ಮಾದರಿ :

  ಪ್ರದರ್ಶನಗಳಿಗೆ ಅವಕಾಶ ಲಭಿಸಿತು. ಪ್ರೇಕ್ಷಕ ವಲಯ ವಿಸ್ತಾರಗೊಂಡಿತು.

  ಪ್ರದರ್ಶನಗಳಿಗೆ ಅವಕಾಶ ಲಭಿಸಿದಾಗ ಪ್ರೇಕ್ಷಕ ವಲಯ ವಿಸ್ತಾರಗೊಂಡಿತು.

ಪ್ರದರ್ಶನಗಳಿಗೆ ಅವಕಾಶ ಲಭಿಸಿದಾಗ ಪ್ರೇಕ್ಷಕ ವಲಯ ವಿಸ್ತಾರಗೊಂಡಿತು.

- ಆರು ಸೂತ್ರಗಳನ್ನು ಜೋಡಿಸಬೇಕಾಗುತ್ತದೆ. ಇದಕ್ಕೆ ಒಂದು ಅಡಿ ಉದ್ದದ ಮೂರು ಕೋಲುಗಳನ್ನು ಉಪಯೋಗಿಸಲಾಗುತ್ತದೆ.
- ಸೂತ್ರಧಾರ ಬೊಂಬೆಗಳನ್ನು ಕುಣಿಸುತ್ತಾನೆ. ಬೊಂಬೆಗಳು ಕುಣಿಯುತ್ತಿರುವುದು ಮಾತ್ರ ಪ್ರೇಕ್ಷಕರಿಗೆ ಕಾಣುತ್ತದೆ.
- ಪ್ರವಾಸಿಗಳು ಪಿಲಿಕುಂಜೆಯ ಪ್ರಶಾಂತ ವಾತಾವರಣಕ್ಕೆ ಬಂದರು. ಯಕ್ಷಗಾನದ ರಮ್ಯಾದ್ಭುತ ಸನ್ನಿವೇಶಗಳನ್ನು ವೀಕ್ಷಿಸಿದರು.
- ಬೊಂಬೆ ಆರತಿ ಬೆಳಗುತ್ತದೆ.ಯಜ್ಞಯಾಗಾದಿಗಳನ್ನು ಮಾಡುತ್ತದೆ.

## ವರದಿ ಬರೆಯಿರಿ.

- ನಿಮ್ಮ ಶಾಲೆಯಲ್ಲಿ ನಡೆದ ಬೊಂಬೆಯಾಟ ಪ್ರದರ್ಶನ ಅಥವಾ ಬೇರೆ ಯಾವುದಾದರೂ ಕಾರ್ಯಕ್ರಮದ ವರದಿಯನ್ನು ಬರೆಯಿರಿ.

## ಸಂದರ್ಶನ ಪ್ರಶ್ನಾವಳಿ ತಯಾರಿಸಿರಿ

- ನಿಮ್ಮ ಊರಿನ ಪ್ರಸಿದ್ಧ ಕಲಾವಿದರೊಬ್ಬರ ಸಂದರ್ಶನ ನಡೆಸುವುದಕ್ಕೆ ಸೂಕ್ತವಾದ ಪ್ರಶ್ನಾವಳಿಯನ್ನು ತಯಾರಿಸಿರಿ.

## ಟಿಪ್ಪಣಿ ತಯಾರಿಸಿರಿ

- ಯಕ್ಷಗಾನ ಬೊಂಬೆಯಾಟದ ವೇದಿಕೆಯ ಬಗ್ಗೆ ಒಂದು ಟಿಪ್ಪಣಿ ತಯಾರಿಸಿರಿ.

## ಆಲ್ಬಂ ತಯಾರಿಸಿರಿ

- ಜನಪದ ಕಲೆಗಳಿಗೆ ಸಂಬಂಧಿಸಿದ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿರಿ.

# ವಾತ್ಸಲ್ಯ



ಅಳುವ ಕಂದನ ಬಿಟ್ಟು ಹೊಳೆಯ ನೀರಿಗೆ ಹೋದ್ಲು
ಅಳದಿರು ಗಂಗೆ–ಗೌರಮ್ಮ–ನಿಮ್ಮವ್ವ
ಗಿಣಿಯ ಸಂತೈಸಿ ಬರುತಾಳೆ
ಮುದ್ದು ಕಂದಮ್ಮಗೆ ಗೆಜ್ಜೆ ಪಾಡಗ ಬೇಕು
ಒಡ್ಯಾಣ ಬೇಕು ನಡುವೀಗೆ–ಕಂದಮ್ಮನ
ದೊಡ್ಡೋರ ಮನೆಗೆ ಕೊಡಬೇಕು
ಸಂಜೇಯ ಹೊತ್ತಲ್ಲಿ ಕಂದನ್ನ ಬಯ್ಯದಿರು
ಬಂದ ದನಗಳಿಗೆ ಹೊಡೆಯದಿರು–ಕಾಮಧೇನುವ
ಕೊಂಬಲ್ಲಿ ಲಕ್ಷ್ಮಿ ಬರುತಾಳೆ
ಸಂಜೆ ದೇವತೆ ತಾಯೆ ಕಂದನ ತಲೆ ಕಾಯೇ
ಒಂದು ಬುದ್ಧಿಯನು ಅರಿಯದ–ಕಂದಯ್ಯನ
ಸಂಜೆ ದೇವತೆಯೆ ತಲೆಗಾಯೇ
ಬಾ ಎನ್ನ ಚಿನ್ನವೇ ಬಾ ಎನ್ನ ರನ್ನವೇ
ಬಾ ಎನ್ನ ಮುತ್ತು ಹವಳವೇ–ಬಾರೆಂದು
ತಾಯ್ತನ್ನ ಮಗನ ಕರೆದಾಳು.
ಹಸಿದಾವು ಪುಟ್ಹೊಟ್ಟೆ ಬಾಡ್ಯಾವು ನಗೆಮುಖ
ಹಸಿವ ಬಲ್ಲಮ್ಮ ಒಳಗಿಲ್ಲ–ಇದ್ದರೆ
ಕರೆದೆರೆವ್ವೊ ಹಸುವಿನ ನೊರೆಹಾಲ



## ಚಟುವಟಿಕೆಗಳು

### ಹಾಡಿರಿ

- ಈ ಹಾಡನ್ನು ಭಾವಪೂರ್ಣವಾಗಿ ಹಾಡಿರಿ.

### ಉತ್ತರಿಸಿರಿ

- ಮುದ್ದು ಕಂದಮ್ಮನಿಗೆ ಧರಿಸಲು ಬೇಕಾದ ಆಭರಣಗಳು ಯಾವುವು?
- ಸಂಜೆಯ ಹೊತ್ತಲ್ಲಿ ಹಸುಗಳಿಗೆ ಹೊಡೆಯಬಾರದು ಎಂದು ಹೇಳುತ್ತಾರೆ. ಯಾಕೆ?
- ತಾಯಿ ಮಗುವನ್ನು ಪ್ರೀತಿಯಿಂದ ಹೇಗೆ ಕರೆಯುತ್ತಾಳೆ?

### ಶಿಷ್ಟರೂಪ ಬರೆಯಿರಿ

- ಇಲ್ಲಿ ನೀಡಿರುವ ಪದಗಳ ಶಿಷ್ಟರೂಪ ಬರೆಯಿರಿ.

ಹೋದ್ಲು – ಹೋದಳು

ದೊಡ್ಡೋರ –

ಕಂದನ್ನ –

ಬಾಡ್ಯಾವು –

### ಸಾರಾಂಶ ಬರೆಯಿರಿ

- 'ವಾತ್ಸಲ್ಯ' ಜನಪದ ಗೀತೆಯ ಸಾರಾಂಶವನ್ನು ಬರೆಯಿರಿ.

### ಟಿಪ್ಪಣಿ ಬರೆಯಿರಿ

- ಈ ಜನಪದ ಗೀತೆಯಲ್ಲಿ ಗ್ರಾಮೀಣ ಜನರಲ್ಲಿರುವ ಕೆಲವು ನಂಬಿಕೆಗಳ ಬಗ್ಗೆ ಪ್ರಸ್ತಾಪಿಸಲಾಗಿದೆ –

  ಉದಾಹರಣೆ : ಸಂಜೆಯ ಹೊತ್ತಿನಲ್ಲಿ ಹಟ್ಟಿಗೆ ಬರುವ ಹಸುಗಳಿಗೆ ಹೊಡೆಯಬಾರದು. ಅವುಗಳ ಕೊಂಬುಗಳಲ್ಲಿ ಲಕ್ಷ್ಮಿ ನೆಲೆಸಿರುತ್ತಾಳೆ ಎಂಬ ನಂಬಿಕೆಯಿದೆ. ಈ ರೀತಿಯ ಹಲವು ನಂಬಿಕೆಗಳು ನಿಮ್ಮೂರಿನಲ್ಲೂ ಇರಬಹುದು. ಅವುಗಳ ಕುರಿತಾದ ವಿವರಗಳನ್ನು ಸಂಗ್ರಹಿಸಿ ಟಿಪ್ಪಣಿ ಬರೆಯಿರಿ.

### ಸಂಚಿಕೆ ತಯಾರಿಸಿರಿ

- ಜನಪದ ಗೀತೆಗಳನ್ನು ಸಂಗ್ರಹಿಸಿ ಸಂಚಿಕೆ ತಯಾರಿಸಿರಿ.

### ಸಾಲು ಗುರುತಿಸಿರಿ

- ಈ ಪದ್ಯದಲ್ಲಿ ನಿಮಗೆ ಇಷ್ಟವಾದ ಸಾಲುಗಳನ್ನು ಗುರುತಿಸಿ, ಯಾಕೆ ಇಷ್ಟವಾಯಿತೆಂದು ಬರೆಯಿರಿ.

### ಪದ ವಿಂಗಡಿಸಿರಿ

- ಈ ಪದಗಳನ್ನು ಸೂಕ್ತವಾಗಿ ವಿಂಗಡಿಸಿ ಬರೆಯಿರಿ

  ಒಳಗಿಲ್ಲ

  ತಲೆಗಾಯಿ

  ಹೊಡೆಯದಿರು

  ತಾಯ್ತನ್ನ

## ಕಲಿಕಾ ಸಾಧನೆಗಳು

- ಆಲಿಸಿ ಓದಿ ತಿಳಿದ ವಿಚಾರಗಳನ್ನು ತರ್ಕಬದ್ಧವಾಗಿ ವಿಶ್ಲೇಷಿಸಿ ಸ್ವಂತ ಅಭಿಪ್ರಾಯಗಳನ್ನು ವಾಚಿಕವಾಗಿ ಮತ್ತು ಲಿಖಿತವಾಗಿ ಪ್ರಕಟಿಸುವುದು.
- ಗದ್ಯ–ಪದ್ಯಗಳನ್ನು ಆಶಯ ಸ್ಪಷ್ಟತೆಯೊಂದಿಗೆ ನಿರರ್ಗಳವಾಗಿ ಮತ್ತು ಸ್ಫುಟತೆಯೊಂದಿಗೆ ಓದುವುದು ಮತ್ತು ಪ್ರಧಾನ ಆಶಯಗಳನ್ನು ಬಾಯ್ದೆರೆಯಾಗಿ ಮಂಡಿಸುವುದು.
- ಪದಗಳು, ಪದಪ್ರಯೋಗಗಳು, ಗಾದೆಗಳು, ಶೈಲಿಗಳು ಮೊದಲದ ಭಾಷಾ ಘಟಕಗಳನ್ನು ಅಳವಡಿಸಿ ಸಂದರ್ಭಾನುಸಾರವಾಗಿ ಮಾತನಾಡುವುದು. ಸ್ವಂತ ರಚನೆಗಳಲ್ಲಿ ಅವುಗಳನ್ನು ಸಂದರ್ಭಾನುಸಾರವಾಗಿ ಉಪಯೋಗಿಸುವುದು.
- ಜನಪದಗೀತೆ, ಕವಿತೆಗಳ ರಾಗ, ತಾಳ, ಭಾವ ಎಂಬಿವುಗಳನ್ನು ಆಸ್ವಾದಿಸುವುದು, ತಾಳದೊಂದಿಗೆ ಭಾವನಾತ್ಮಕವಾಗಿ ಹಾಡಿ ಮಂಡಿಸುವುದು. ಕಂಠಪಾಠ ಮಾಡುವುದು.
- ನೀಡಿದ ಸಂದರ್ಭಕ್ಕೆ ಸೂಕ್ತವಾದ ವ್ಯವಹಾರ ರೂಪಗಳನ್ನು ಕಂಡುಕೊಂಡು ರಚನೆಗಳನ್ನು ಮಾಡುವುದು.
- ವಿಭಿನ್ನ ರೀತಿಯ ವ್ಯವಹಾರ ರೂಪಗಳನ್ನು ತಯಾರಿಸುವುದು. ಅವುಗಳನ್ನು ಸಂಚಿಕೆ, ಭಿತ್ತಿಪತ್ರಿಕೆ, ಹಸ್ತಪತ್ರಿಕೆ, ನಿಯತಕಾಲಿಕಗಳಲ್ಲಿ ಪ್ರಕಟಿಸುವುದು.
- ಸೂಕ್ತ ಸೂಚಕಗಳನ್ನು ರೂಪಿಸಿ ತನ್ನ ಹಾಗೂ ಇತರರ ರಚನೆಗಳ ಮೌಲ್ಯ ನಿರ್ಣಯಿಸುವುದು.
- ಕೃತಿಯ ಕಥಾಪಾತ್ರಗಳು, ಸನ್ನಿವೇಶಗಳು, ಭಾಷಾಶೈಲಿ, ಮಂಡನೆಯ ರೀತಿ ಎಂಬಿತ್ಯಾದಿಗಳನ್ನು ಪರಿಗಣಿಸಿ ಓದಿದ ಕೃತಿಯ ಆಸ್ವಾದನ ಟಿಪ್ಪಣಿ ತಯಾರಿಸುವುದು.
- ವಿವಿಧ ಕವಿತೆಗಳನ್ನು ಕಂಠಪಾಠ ಮಾಡಿ ಸೂಕ್ತವಾದ ರಾಗ, ತಾಳಗಳೊಂದಿಗೆ ಭಾವಪೂರ್ಣವಾಗಿ ಹಾಡುವುದು.
- ಪದಶುದ್ಧಿ, ವಾಕ್ಯಶುದ್ಧಿ, ಲೇಖನಚಿಹ್ನೆ ಮೊದಲಾದ ಬರವಣಿಗೆಗೆ ಅಗತ್ಯವಾದ ಅಂಶಗಳನ್ನೊಳಗೊಂಡು ಮಾಡಿದ ರಚನೆಗಳ ಮೌಲ್ಯನಿರ್ಣಯ ಮಾಡುವುದರೊಂದಿಗೆ ಉತ್ತಮಗೊಳಿಸುವುದು.
- ಪಾಠಭಾಗದಲ್ಲಿರುವ ಪದಗಳನ್ನು ಅರ್ಥವ್ಯತ್ಯಾಸವಿಲ್ಲದೆ ವಿಂಗಡಿಸಿ ಬರೆಯುವುದು ಮತ್ತು ಸೇರಿಸಿ ಬರೆಯುವ ಚಟುವಟಿಕೆಯಲ್ಲಿ ತೊಡಗುವುದು.
- ಸ್ವಂತ ಆಶಯಗಳನ್ನು ಶಿಷ್ಟಭಾಷೆಯಲ್ಲಿ ತಪ್ಪಿಲ್ಲದೆ ಬರೆಯುವುದು.
- ಓದಿದ ವಿಚಾರಗಳನ್ನು ವಿಶ್ಲೇಷಿಸಿ ತನ್ನ ಅಭಿಪ್ರಾಯಗಳನ್ನು ಭಾಷಣ, ಪ್ರಬಂಧ ಮತ್ತು ಚರ್ಚೆಗಳ ಮೂಲಕ ಮಂಡಿಸುವುದು.



2

# ಹಸಿರೇ ಉಸಿರು

ನಮ್ಮದು ಕೃಷಿ ಪ್ರಧಾನವಾದ ದೇಶ. ತಲೆತಲಾಂತರಗಳಿಂದ ನಾವು ಕೃಷಿಯಲ್ಲಿ ಪಳಗಿದವರು. ನಮ್ಮ ಅನೇಕ ಕೃಷಿವಿಧಾನಗಳು ವೈಜ್ಞಾನಿಕವಾಗಿದ್ದು ಶ್ರೇಷ್ಠವಾದವುಗಳೆಂದು ಗುರುತಿಸಲ್ಪಟ್ಟಿವೆ. ಪರಿಶ್ರಮದ ದುಡಿಮೆಯಿಂದ ಬಂಜರು ಭೂಮಿಯನ್ನು ಫಲವತ್ತಾಗಿಸಬಹುದು ಎಂಬುದನ್ನು ಸಾಧಿಸಿದ ಮಹಾನ್ ಸಾಧಕರು ನಮ್ಮಲ್ಲಿದ್ದಾರೆ. ಇವರ ಸಾಧನೆಗಳು ನಮಗೆ ಪ್ರೇರಣೆಯಾಗಲಿ.

# ದುಡಿಮೆಯ ಫಲ

ರಾಮಪ್ಪಯ್ಯ ಮದ್ದೂರಿನ ಒಬ್ಬ ಉತ್ತಮ ರೈತನಾಗಿದ್ದನು. ಅವನ ಶ್ರಮದ ದುಡಿಮೆಗೆ ಉತ್ತಮ ಫಲ ದೊರಕುತ್ತಿತ್ತು. ಉಣ್ಣುವುದಕ್ಕೆ, ಉಡುವುದಕ್ಕೆ ಯಾವುದೇ ಕೊರತೆಯಿರಲಿಲ್ಲ. ಅವನಿಗೆ ಮೂವರು ಮಕ್ಕಳಿದ್ದರು. ರಾಮಪ್ಪಯ್ಯನು ಶ್ರಮವಹಿಸಿ ದುಡಿಯುತ್ತಿದ್ದರೂ ಮಕ್ಕಳು ಯಾವುದೇ ಕೆಲಸ ಮಾಡುತ್ತಿರಲಿಲ್ಲ. ಮಕ್ಕಳಲ್ಲವೇ ಎಂಬ ಮಮತೆಯಿಂದ ರಾಮಪ್ಪಯ್ಯನು ಅವರಿಂದ ಯಾವುದೇ ಕೆಲಸ ಮಾಡಿಸುತ್ತಿರಲಿಲ್ಲ.

ಹೀಗಿರುವಾಗ ರಾಮಪ್ಪಯ್ಯನಿಗೆ ಯಾವುದೋ ರೋಗ ಬಂದು ಹಾಸಿಗೆಹಿಡಿದನು. ಕೆಲವೇ ದಿನಗಳಲ್ಲಿ ರೋಗವು ಉಲ್ಬಣಿಸಿತು. ತನ್ನ ಸಂಪತ್ತೆಲ್ಲವನ್ನೂ ಮೂವರು ಮಕ್ಕಳಿಗೆ ಹಂಚಲು ತೀರ್ಮಾನಿಸಿದನು. ಅವನು ತನ್ನ ಮಕ್ಕಳನ್ನು ಬಳಿಗೆ ಕರೆದು, ಹಿರಿಯವನಿಗೆ ಉಳುವ ಎತ್ತುಗಳನ್ನು ಮತ್ತು ನೊಗನೇಗಿಲುಗಳನ್ನು ಕೊಟ್ಟನು. ಎರಡನೆಯವನಿಗೆ ಹೊನ್ನು ಬೆಳೆಯುವ ಭೂಮಿಯನ್ನು ತೆಗೆದುಕೊಳ್ಳಲು ಹೇಳಿದನು. ತನ್ನ ಕಿರಿಯ ಮಗನಿಗೆ ಕೃಷಿ ಮಾಡಲು ಬಳಸುವ ಹಾರೆ, ಪಿಕ್ಕಾಸು, ಗುದ್ದಲಿ ಇತ್ಯಾದಿ ಉಪಕರಣಗಳನ್ನು ಕೊಟ್ಟನು. ಮರಣಶಯ್ಯೆಯಲ್ಲಿದ್ದ ರಾಮಪ್ಪಯ್ಯನು ತನ್ನ ಮೂವರು ಮಕ್ಕಳು ಒಗ್ಗಟ್ಟಾಗಿ ಕೃಷಿ ಮಾಡುವರೆಂಬ ಆಸೆಯಿಂದಲೇ ಈ ರೀತಿ ಹಂಚಿದನು.

ಕೆಲವು ದಿನಗಳು ಕಳೆದಾಗ ತನ್ನ ಮಕ್ಕಳನ್ನು ಬಳಿಗೆ ಕರೆದು, "ಇಂದಿನಿಂದ ಮೂರು ದಿನಗಳೊಳಗೆ ಮಳೆ ಸುರಿಯುತ್ತದೆ. ಭೂಮಿ ತಣ್ಣಗಾಗುತ್ತದೆ. ಕೃಷಿ ಆರಂಭಿಸಲು ಉತ್ತಮ ಕಾಲ. ಆದುದರಿಂದ ನೀವು ಮೂವರೂ ಸೇರಿ ನೆಲವನ್ನು ಉತ್ತು ಗೊಬ್ಬರ ಸೇರಿಸಿ ಹದಮಾಡಿ ಬೀಜ ಬಿತ್ತಬೇಕು. ಕೃಷಿಯ ವಿಚಾರದಲ್ಲಿ ಉದಾಸೀನ ಸಲ್ಲದು. ಕೃಷಿಯನ್ನು ಅವಗಣಿಸಿದ್ದಾದರೆ ಉಪವಾಸ ಬಿದ್ದು ಸಾಯಬೇಕಾದೀತು" ಎಂದು ಹೇಳಿದನು.



ಮಾರನೇ ದಿನ ರಾಮಪ್ಪಯ್ಯನಿಗೆ ತನ್ನ ಮರಣ ಸಮೀಪಿಸಿತೆಂದು ತಿಳಿಯಿತು. ಮೂವರು ಮಕ್ಕಳು ತಂದೆಯ ಸಮೀಪವೇ ಕುಳಿತಿದ್ದರು. ಕೊನೆಯದಾಗಿ ರಾಮಪ್ಪಯ್ಯ "ನಮ್ಮ ಧಾನ್ಯದ ಉಗ್ರಾಣದಲ್ಲಿ ಮೂರು ಕೋಣೆಗಳಿವೆ. ಮೊದಲನೆಯ ಕೋಣೆಯಲ್ಲಿ ತುಂಬಾ ಧಾನ್ಯವಿದೆ. ಇನ್ನು ಬರುವ ಕೊಯ್ಲಿನ ತನಕ ಆಹಾರಕ್ಕಾಗಿ ಅದನ್ನು ಬಳಸಬಹುದು. ಎರಡನೆಯ ಕೋಣೆಯಲ್ಲಿ ಬಿತ್ತನೆಗಾಗಿರುವ ಧಾನ್ಯವಿದೆ. ಮೂರನೆ ಕೋಣೆಯಲ್ಲಿ......... ಮೂರನೇ ಕೋಣೆಯಲ್ಲಿ ............" ಈ ಮಾತು ಪೂರ್ತಿಗೊಳಿಸುವ ಮೊದಲೇ ರಾಮಪ್ಪಯ್ಯ ಪರಲೋಕವಾಸಿಯಾದನು.

ಮೂವರು ಮಕ್ಕಳಿಗೂ ಆಕಾಶವೇ ತಲೆಗೆ ಕಳಚಿಬಿದ್ದಂತಾಯಿತು. ಏನು ಮಾಡುವುದು? ಅಗಲಿಕೆಯ ನೋವನ್ನು ಸಹಿಸಲೇಬೇಕಲ್ಲವೇ? ತಂದೆಯ ಅಂತ್ಯಸಂಸ್ಕಾರಗಳನ್ನು ಎಲ್ಲರೂ ಸೇರಿ ವಿಧಿವತ್ತಾಗಿ ಮಾಡಿ ಮುಗಿಸಿದರು. ರಾಮಪ್ಪಯ್ಯ ಹೇಳಿದಂತೆ ಆ ದಿನ ಸಂಜೆ ಆಕಾಶ ಕಾರ್ಮೋಡಗಳಿಂದ ತುಂಬಿತು. ಗುಡುಗು ಗುಡುಗಿತು. ಮಿಂಚು ಮಿಂಚಿತು. ಧಾರಾಕಾರವಾಗಿ ಮಳೆ ಸುರಿಯಿತು. ತಂದೆ ಹೇಳಿದ ಮಾತು ನೆನಪಾಯಿತು. ಮಾರನೆ ದಿನವೇ ಬಯಲಿಗೆ ಹೋಗಲು ಮೂವರೂ ತೀರ್ಮಾನಿಸಿದರು.

ಮೂರು ಮಂದಿಯೂ ಎತ್ತುಗಳನ್ನೂ ನೊಗನೇಗಿಲುಗಳನ್ನೂ ಸಲಕರಣೆಗಳನ್ನೂ ತೆಗೆದುಕೊಂಡು ಗದ್ದೆಗೆ ಹೋದರು. ಅವರು ನೆಲವನ್ನು ಉಳಲೂ ಹದಮಾಡಲೂ ಆರಂಭಿಸಿದರು. ಮಳೆಸುರಿದ ಮರುದಿನದ ಬಿಸಿಲು ಬೆಂಕಿಯಂತೆ ಸುಡುತ್ತಿತ್ತು. ಇಷ್ಟರವರೆಗೆ ಸೋಮಾರಿಗಳಾಗಿ ತಿರುಗಾಡಿಕೊಂಡಿದ್ದ ಯುವಕರಿಗೆ ಸ್ವಲ್ಪದರಲ್ಲೇ ದಣಿವಾಯಿತು. ಎತ್ತುಗಳೊಂದಿಗೆ ನಡೆಯಲಾರದೆ ಬಸವಳಿದರು. ಮಣ್ಣಿನ ಹೆಂಟೆಗಳ ಎಡೆಯಲ್ಲಿ ನಡೆದಾಡಿ ಕಾಲು ಸೋತಿತು. ಹಿರಿಯ ಮಗ "ನನ್ನಿಂದ ಇನ್ನು ಸಾಧ್ಯವಿಲ್ಲ" ಎಂದು ಕುಳಿತನು. ಎರಡನೆಯವನು "ನನ್ನ ಕೈ ನೋಯುತ್ತಿದೆ" ಎಂದಾಗ ಮೂರನೆಯವನು "ಈ ಗದ್ದೆಯಲ್ಲಿ ನಡೆದು ನನ್ನ ಕಾಲುಗಳು ಸೋತುವು" ಎಂದು ಹೇಳಿದನು. ಮೂರು ಮಂದಿಯೂ ಒಂದಾಗಿ ಮನೆಯ ಕಡೆಗೆ ನಡೆದರು.



ಮನೆಯಲ್ಲಿಯೇ ಕುಳಿತು ಕೃಷಿ ಮಾಡುವುದರ ಕುರಿತು ಚರ್ಚಿಸಿದರು. ಆದರೆ ಕೆಲಸದ ಬಗ್ಗೆ ಯೋಚಿಸುವಾಗಲೇ ಅವರಿಗೆ ಆಲಸ್ಯವುಂಟಾಗುತ್ತಿತ್ತು. ಈಗ ತಿಂದುಣ್ಣಲು ಅವರಿಗೆ ಧಾರಾಳ ಆಹಾರ ಧಾನ್ಯಗಳಿತ್ತಲ್ಲವೇ? "ಕೂತು ಉಣ್ಣುವವನಿಗೆ ಕುಡಿಕೆ ಹೊನ್ನು ಸಾಲದು" ಎಂಬಂತೆ, ಒಂದನೇ ಕೋಣೆಯಲ್ಲಿದ್ದ ಧಾನ್ಯ ಕಡಿಮೆಯಾಗುತ್ತಾ ಬಂದು ಕೊನೆಗೆ ಮುಗಿದೇ ಹೋಯಿತು.

ಆಹಾರ ಧಾನ್ಯ ಮುಗಿದಾಗ ಎರಡನೆಯವನಿಗೆ ಒಂದು ಉಪಾಯ ಹೊಳೆಯಿತು. "ಕೃಷಿ ಕೆಲಸ ಮಾಡದ ನಮಗೆ ಕೃಷಿ ಸಲಕರಣೆಗಳೇಕೆ? ಅವುಗಳನ್ನು ಮಾರಿ ಆಹಾರ ಧಾನ್ಯಗಳನ್ನು ಕೊಳ್ಳೋಣವೇ?" ಎಂದು ಕೇಳಿದನು. ಮತ್ತೆ ತಡಮಾಡಲಿಲ್ಲ. ಅವುಗಳನ್ನು ಮಾರಿ ಸ್ವಲ್ಪ ಆಹಾರಧಾನ್ಯಗಳನ್ನು ಕೊಂಡರು. ಅದೂ ಮುಗಿಯಿತು. ನಿಧಾನವಾಗಿ ಬಿತ್ತನೆಗಾಗಿರಿಸಿದ್ದ ಧಾನ್ಯವೂ ಖಾಲಿಯಾಯಿತು. ಆಗ ಮೂರನೆಯವನು, "ಬಿತ್ತನೆಗೆ ಧಾನ್ಯವಿಲ್ಲದ ಮೇಲೆ ಎತ್ತುಗಳೂ ನೊಗ ನೇಗಿಲುಗಳೂ ಏತಕ್ಕೆ? ಇವನ್ನೂ ಮಾರೋಣ" ಎಂದು ಹೇಳಿದನು. ಎತ್ತುಗಳನ್ನು ಯಾರೋ ಕೊಂಡುಕೊಂಡರು. ಆದರೆ ಹಳೆಯ ನೊಗ ನೇಗಿಲುಗಳನ್ನು ಯಾರೂ ಕೊಳ್ಳಲಿಲ್ಲ. ಎತ್ತುಗಳನ್ನು ಮಾರಿದ ಹಣದಿಂದ ಆಹಾರ ಧಾನ್ಯಗಳನ್ನು ಕೊಂಡುಕೊಂಡು ನೊಗ ನೇಗಿಲುಗಳೊಂದಿಗೆ ಹಿಂತಿರುಗಿದರು.

ಮೂವರೂ ಹಸಿವಿನಿಂದ ಕಂಗೆಟ್ಟರು. ಅವರು ಪರಸ್ಪರ ದೂರಲು ಪ್ರಾರಂಭಿಸಿದರು. ಕಿರಿಯವರಿಬ್ಬರೂ ಅಣ್ಣನೊಡನೆ "ಹಿರಿಯವನಿಗೆ ತಂದೆಯ ಸ್ಥಾನವಿದೆ. ಎಲ್ಲವನ್ನೂ ನೋಡಿ ನಡೆಸಬೇಕಾದುದು ಹಿರಿಯ ಮಗ. ಈಗಿನ ಈ ಅವಸ್ಥೆಗೆ ನೀನೇ ಕಾರಣ" ಎಂದು ಹೇಳಿದರು. ಆಗ ಹಿರಿಯವ, "ನೀವು ಹೇಳಿಯೇ ಬಿತ್ತನೆಯ ಧಾನ್ಯಗಳನ್ನು ಆಹಾರವಾಗಿ ಬಳಸಿದುದು. ಎತ್ತುಗಳನ್ನು ಮಾರಲು ನೀವೇ ಕಾರಣ" ಎಂಬುದಾಗಿ ಹೇಳಿದನು. ಆದರೆ ಹಸಿವೆಯಿಂದ ಕಂಗೆಟ್ಟ ಅವರಿಗೆ ಹೆಚ್ಚು ಜಗಳವಾಡಲೂ ಶಕ್ತಿ ಇರಲಿಲ್ಲ. ನಿದ್ರಿಸಲು ಮಲಗಿದ ಹಿರಿಯ ಮಗನಿಗೆ "ಕೃಷಿಯನ್ನು ಅವಗಣಿಸಿದ್ದಾದರೆ ಉಪವಾಸದಿಂದ ಸಾಯಬೇಕಾದೀತು .ಮೂರನೆಯ ಕೋಣೆಯಲ್ಲಿ........ ತಂದೆಯ ಕೊನೆಯ ಮಾತುಗಳು ನೆನಪಾದುವು.

ಕೂಡಲೇ ಅವನು ತಮ್ಮಂದಿರನ್ನು ಎಬ್ಬಿಸಿ "ಉಗ್ರಾಣದ ಮೂರನೆಯ ಕೋಣೆಯನ್ನು ತೆರೆಯೋಣವೇ?" ಎಂದು ಕೇಳಿದನು. ಆಗ ಕಿರಿಯವ "ಆದರೆ ಅಪ್ಪ ಅದರ ಕುರಿತು ಏನೂ ಹೇಳಲಿಲ್ಲವಲ್ಲ ಎಂದನು."ಅಪ್ಪ ಏನನ್ನೋ ಹೇಳಲು ಭಾವಿಸಿದ್ದರಲ್ಲವೇ? ತೆರೆಯಬೇಡಿರೆಂದು ಹೇಳಲಿಲ್ಲವಲ್ಲ!" ಎಂದ ಹಿರಿಯವ.

"ಆ ಕೋಣೆಯನ್ನು ತೆರೆಯೋಣ" ಎಂದ ಎರಡನೆಯವ. ಮೂವರೂ ಸೇರಿ ಮೂರನೆಯ ಕೋಣೆಯನ್ನು ನಿಧಾನವಾಗಿ ತೆರೆದರು. ಅಲ್ಲಿ ತುಂಬಿದ ಮೂರು ಗೋಣಿಚೀಲಗಳಿದ್ದುವು. ಒಂದನೆಯ ಗೋಣಿಚೀಲದಲ್ಲಿ ಬಿತ್ತನೆಯ ಧಾನ್ಯವೂ, ಎರಡನೆಯ ಗೋಣಿಚೀಲದಲ್ಲಿ ಗೊಬ್ಬರವೂ ಇತ್ತು. ಮೂರನೇ ಗೋಣಿ ಚೀಲದಲ್ಲಿ ಸ್ವಲ್ಪ ಧಾನ್ಯವಿತ್ತು.

ಅದನ್ನು ನೋಡಿ ಮೂವರಿಗೂ ಹಿಡಿಸಲಾರದ ಸಂತೋಷವಾಯಿತು. ಏನೋ ಒಂದು ಹೊಸ ಚೈತನ್ಯ ಅವರಲ್ಲುಂಟಾಯಿತು. ಮೊದಲು ತಮ್ಮ ಹಸಿವನ್ನು ನೀಗಿಸಿದರು. ಬಳಿಕ ಹಿರಿಯವನು "ಇಂದಿನಿಂದ ನಾವು ಶ್ರಮಪಟ್ಟು ದುಡಿಯೋಣ. ನಮಗೆ ಬಿತ್ತನೆಯ ಧಾನ್ಯವಿದೆ. ನೊಗ ನೇಗಿಲುಗಳೂ ಇವೆ. ಇನ್ನು ನಾವು ಸೋಮಾರಿಗಳಾಗಬಾರದು" ಎಂದು ಹೇಳಿದನು. ತಮ್ಮಂದಿರಿಬ್ಬರೂ ಅವನ ಮಾತಿಗೆ ತಲೆದೂಗಿದರು.

ಆಕಾಶದಲ್ಲಿ ಪುನಃ ಕಾರ್ಮೋಡಗಳು ಕಾಣಿಸಿಕೊಂಡವು. ಮೂವರ ಮುಖದಲ್ಲೂ ಮಂದಹಾಸ ಮೂಡಿತು.

## ಚಟುವಟಿಕೆಗಳು

### ಚರ್ಚಿಸಿರಿ

- "ಕೃಷಿಯನ್ನು ಅವಗಣಿಸಿದ್ದಾದರೆ ಉಪವಾಸ ಬಿದ್ದು ಸಾಯಬೇಕಾದೀತು" ರಾಮಪ್ಪಯ್ಯನ ಈ ಮಾತಿನ ಬಗ್ಗೆ ನಿಮ್ಮ ಅಭಿಪ್ರಾಯವೇನು? ಚರ್ಚಿಸಿರಿ. ಬಳಿಕ ಚರ್ಚಿಸಿದ ವಿಚಾರಗಳನ್ನು ಟಿಪ್ಪಣಿ ರೂಪದಲ್ಲಿ ಬರೆಯಿರಿ.

### ಉತ್ತರಿಸಿರಿ

- ರಾಮಪ್ಪಯ್ಯನು ತನ್ನ ಸಂಪತ್ತನ್ನು ಮೂವರು ಮಕ್ಕಳಿಗೆ ಹೇಗೆ ಹಂಚಿದನು?
- ರಾಮಪ್ಪಯ್ಯನು ತೀರಿಕೊಂಡಾಗ ಅವನ ಮಕ್ಕಳಿಗೆ ದಿಕ್ಕೇ ತೋಚದಂತಾಗಲು ಕಾರಣವೇನು?
- ಗದ್ದೆ ಕೆಲಸಕ್ಕಿಳಿದ ಮೂವರೂ ಅರ್ಧದಿಂದಲೇ ಮನೆಗೆ ಹಿಂತಿರುಗಲು ಕಾರಣವೇನು?
- ಮೂರನೇ ಕೋಣೆಯಲ್ಲಿ ಏನೇನು ಇದ್ದುವು?

### ಸಂಭಾಷಣೆ ರಚಿಸಿರಿ

- ಮೂವರು ಹಸಿವಿನಿಂದ ಕಂಗೆಟ್ಟು ಪರಸ್ಪರ ದೂರಲು ತೊಡಗಿದ ಸಂದರ್ಭವನ್ನು ಸಂಭಾಷಣೆಯ ರೂಪದಲ್ಲಿ ಬರೆಯಿರಿ.

### ಸಂದರ್ಭ ಬರೆಯಿರಿ

- ಈ ಮಾತುಗಳನ್ನು ಹೇಳಿದ ಸಂದರ್ಭವನ್ನು ಬರೆಯಿರಿ.
  - "ಬಿತ್ತನೆಗೆ ಧಾನ್ಯವಿಲ್ಲದ ಮೇಲೆ ಎತ್ತುಗಳು, ನೊಗ ನೇಗಿಲುಗಳು ಏತಕ್ಕೆ?"
  - "ಉಗ್ರಾಣದ ಮೂರನೆಯ ಕೋಣೆಯನ್ನು ತೆರೆಯೋಣವೇ?"

### ಗಾದೆ ವಿಸ್ತರಿಸಿರಿ

- "ಕೂತು ಉಣ್ಣುವವನಿಗೆ ಕುಡಿಕೆ ಹೊನ್ನು ಸಾಲದು" ಎಂಬ ಗಾದೆ ಮಾತು ಪಾಠದಲ್ಲಿ ಬಂದಿದೆ. ಈ ಗಾದೆಯ ಆಶಯವನ್ನು ಕತೆಯ ಆಧಾರದಲ್ಲಿ ವಿಸ್ತರಿಸಿ ಬರೆಯಿರಿ.

### ಕತೆ ವಿಸ್ತರಿಸಿ ಬರೆಯಿರಿ

- ಕೆಳಗೆ ಒಂದು ಕತೆಯ ಹಂದರವನ್ನು ಕೊಡಲಾಗಿದೆ. ಅದನ್ನು ವಿಸ್ತರಿಸಿ ಬರೆಯಿರಿ.

ರೈತ – ಮೂವರು ಮಕ್ಕಳು – ಪರಸ್ಪರ ಕಚ್ಚಾಡು – ಬುದ್ಧಿ ಹೇಳು – ಪ್ರಯೋಜನವಿಲ್ಲ – ಉಪಾಯ ಹೂಡು – ಮಕ್ಕಳಲ್ಲಿ ಒಂದೊಂದು ಕೋಲು ತರಲು ಹೇಳು – ಮುರಿಯಲು ಹೇಳು – ಬಳಿಕ ಮೂರು ಕೋಲುಗಳ ಒಂದು ಕಟ್ಟು ನೀಡು – ಮುರಿಯಲು ಹೇಳು – ಮುರಿಯಲು ಕಷ್ಟಪಡು – ಒಗ್ಗಟ್ಟಿನಲ್ಲಿ ಬಲವಿದೆ – ತಿಳಿ.

### ಸಮಾನಾರ್ಥ ಪದ ಹುಡುಕಿ ಬರೆಯಿರಿ

- ಕೆಳಗೆ ನೀಡಿದ ಗದ್ಯಭಾಗದಲ್ಲಿ ಕೆಲವು ಪದಗಳಿಗೆ ಅಡಿಗೆರೆ ಎಳೆಯಲಾಗಿದೆ. ಆ ಪದಗಳ ಸಮಾನಾರ್ಥ ಪದಗಳನ್ನು ಆವರಣದಿಂದ ಆರಿಸಿ ಅವುಗಳ ಸೂಕ್ತವಾದ ರೂಪ ಬಳಸಿ ಗದ್ಯಭಾಗವನ್ನು ಬರೆಯಿರಿ.

ರಂಗರಾಯರು ಪೇಟೆಯಿಂದ ಬಂದವರೇ <u>ಆಯಾಸಗೊಂಡು</u> ಕುಸಿದರು. ಇದನ್ನು ಕಂಡ ಪತ್ನಿ ಕಮಲಮ್ಮ ಗಾಬರಿಗೊಂಡು “ಮಗಾ” ಎಂದು ಕೂಗಿದರು. ಮಗ ಪ್ರಕಾಶನು <u>ಉದಾಸೀನ</u> ಮಾಡದೆ ಅಪ್ಪನನ್ನು ಆಸ್ಪತ್ರೆಗೆ ಒಯ್ದನು. ವೈದ್ಯರು ರಂಗರಾಯರನ್ನು ಪರೀಕ್ಷಿಸಿ “ಇವರ ಕಾಯಿಲೆ <u>ತೀವ್ರ</u>ಗೊಂಡಿದೆ. ತುರ್ತುಚಿಕಿತ್ಸೆಯ ಅಗತ್ಯವಿದೆ” ಎಂದರು. ಪ್ರಕಾಶನು ವೈದ್ಯರ ಮಾತನ್ನು <u>ಕಡೆಗಣಿಸದೆ</u> ಸೂಕ್ತ ಚಿಕಿತ್ಸೆಯನ್ನು ಕೊಡಿಸಿದನು. ದಿನ ಕಳೆದಂತೆ ರಂಗರಾಯರ ಆರೋಗ್ಯ <u>ಚೇತರಿಸತೊಡಗಿತು</u>. ಕಮಲಮ್ಮನ ಮುಖದಲ್ಲಿ <u>ಮುಗುಳುನಗೆ</u> ಮೂಡಿತು.

(ಉಲ್ಬಣಿಸು, ಆಲಸ್ಯ, ಅವಗಣಿಸು, ಸುಧಾರಿಸು, ಬಳಲಿಕೆ, ಮಂದಹಾಸ)

### ವಾಕ್ಯ ಬರೆಯಿರಿ

- ಕೆಳಗೆ ನೀಡಲಾದ ವಾಕ್ಯಗಳಲ್ಲಿ ಅಡಿಗೆರೆ ಎಳೆದ ನಾಮಪದಗಳು ಮತ್ತು ಸರ್ವನಾಮ ಪದಗಳು ಏಕವಚನದಲ್ಲಿವೆ. ಅವುಗಳನ್ನು ಬಹುವಚನಕ್ಕೆ ಬದಲಾಯಿಸಿ, ವಾಕ್ಯಗಳನ್ನು ಅರ್ಥಪೂರ್ಣವಾಗಿ ಬರೆಯಿರಿ.

<u>ರೈತನು</u> ಶ್ರಮಪಟ್ಟು ದುಡಿದು ಆಹಾರ ಧಾನ್ಯಗಳನ್ನು ಬೆಳೆಸುತ್ತಾನೆ.
<u>ಅವನಿಗೆ</u> ತನ್ನ ಕಾಯಕದಲ್ಲಿ ಸಂತೃಪ್ತಿ ಸಿಗುತ್ತದೆ.
ಇಂದು ಸರಕಾರವು <u>ಬೇಸಾಯಗಾರನಿಗೆ</u> ಹಲವು ಸೌಲಭ್ಯಗಳನ್ನು ಒದಗಿಸುತ್ತದೆ.
ಆದರೆ <u>ಇದು</u> ಎಲ್ಲಾ ರೈತರಿಗೆ ತಲುಪುವುದಿಲ್ಲ.
<u>ಕೃಷಿಕನು</u> ದೇಶದ ಆಧಾರ ಸ್ತಂಭವಾಗಿದ್ದಾನೆ.
<u>ನಾನು</u> ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬಿಯಾಗಬೇಕು

### ಗಾದೆಗಳನ್ನು ಸಂಗ್ರಹಿಸಿರಿ

- ದುಡಿಮೆಗೆ ಸಂಬಂಧಿಸಿದ ಗಾದೆಮಾತುಗಳನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ಭಿತ್ತಿಪತ್ರಿಕೆಯಲ್ಲಿ ಪ್ರದರ್ಶಿಸಿರಿ.

# ರೈತ




ಕಾಯಕ ತತ್ವದಿ
ದೇವನ ನೆನೆಯುತ
ಕರ್ಮದ ಮಹಿಮೆಯ ಸಾರುವನು
ಬೆವರಿನ ಹನಿಯೊಳು
ಮೈಮನ ತೊಳೆಯುತ
ಆಲಸ್ಯದ ಕೊಳೆ ಕಳೆಯುವನು ।

ಇಳೆಯೊಳು ರೈತನು
ಅನ್ನದ ದಾತನು
ಎಲ್ಲರ ಒಡಲನು ತಣಿಸುವನು
ಪ್ರಾಣಿಯ ಬದುಕಿಗೆ
ಹಕ್ಕಿಯ ಗುಟುಕಿಗೆ
ರೈತನೆಯಾಸರೆಯಾಗಿಹನು ।

ಹಟ್ಟಿಯ ತುಂಬಿರೆ
ದನಗಳ ಮೇಳವು
ಮನದಲಿ ಮುದವನು ಹೊಂದುವನು
ಹಾಲನು ಕರೆಯಲು
ಗೋವನು ಕರೆಯುತ
ಗೋಪಿಯ ಕಂದನ ಹೋಲುವನು ।

ರಾಟೆಯ ತಿರುಗಿಸಿ
ಮೈಯನು ಮುಚ್ಚುತ
ಮನುಜನ ಮಾನವ ಕಾಯುವನು
ದೇಶದ ಆಟವು
ಇವನೊಳು ನಿಂತಿದೆ
ಕ್ಷೇಮವ ಶಾಂತಿಯ ಬೆಳೆಸುವನು ।

ರೈತನು ನಕ್ಕರೆ
ದೇಶವೆ ನಗುವುದು
ಎಂಬುವ ತತ್ವವ ತಿಳಿಯೋಣ
ರೈತನು ಅತ್ತರೆ
ದೇಶವು ಉಳಿಯದು
ಎಂಬುವ ಸತ್ಯವ ಸಾರೋಣ ।



ವಿಠಲ ವಿ. ಗಾಂವಕರ್



**ವಿಠಲ ವಿ. ಗಾಂವಕರ್**

ಶ್ರೀಯುತ ವಿಠಲ ವಿ. ಗಾಂವಕರ್ ಅವರು ಕರ್ನಾಟಕ ವಿಶ್ವವಿದ್ಯಾಲಯದಿಂದ ಕನ್ನಡ ಸಾಹಿತ್ಯದಲ್ಲಿ ಎಂ.ಎ, ಬಿ.ಎಡ್ ಪದವಿ ಪಡೆದಿದ್ದಾರೆ. ಕನ್ನಡ ವ್ಯಾಕರಣ ಮತ್ತು ತತ್ಸಮ– ತದ್ಭವ ಕೈಪಿಡಿ, ಪರಿಸರ ಪ್ರಬಂಧಗಳು, ಪ್ರಬಂಧ ಹಾಗೂ ಭಾಷಣಕಲೆ, ಎಂಬ ಕೃತಿಗಳನ್ನೂ ಬದುಕು, ಹೂಬಾಣ ಮುಂತಾದ ಕವನ ಸಂಕಲನಗಳನ್ನೂ ರಚಿಸಿದ್ದಾರೆ. ಅತ್ಯುತ್ತಮ ಶಿಕ್ಷಕ, ರಾಜ್ಯ ಮಟ್ಟದ ಉತ್ತಮ ಶಿಕ್ಷಕ ಮುಂತಾದ ಪ್ರಶಸ್ತಿಗಳು ಇವರಿಗೆ ಲಭಿಸಿವೆ.

## ಚಟುವಟಿಕೆಗಳು

### ಹಾಡಿರಿ

- ಕವಿತೆಯನ್ನು ರಾಗವಾಗಿ ಹಾಡಿರಿ.

### ಚರ್ಚಿಸಿರಿ

- 'ರೈತನು ನಕ್ಕರೆ ದೇಶವೆ ನಗುವುದು' ಎಂಬ ಕವಿವಾಣಿಯ ಬಗ್ಗೆ ನಿಮ್ಮ ಅಭಿಪ್ರಾಯವೇನು? ಚರ್ಚಿಸಿರಿ.

### ಉತ್ತರಿಸಿರಿ

- ರೈತನು ಉದಾಸೀನವೆಂಬ ಕೊಳೆಯನ್ನು ಹೇಗೆ ಹೋಗಲಾಡಿಸುವನು?
- ರೈತನು ಯಾರಿಗೆ ಆಸರೆಯಾಗಿದ್ದಾನೆ?
- ಕವಿ ರೈತನನ್ನು 'ಗೋಪಿಯ ಕಂದ' ಎಂದು ಕರೆಯಲು ಕಾರಣವೇನು?
- ಈ ಕವಿತೆಯ ಮೂಲಕ ಕವಿ ನೀಡುವ ಸಂದೇಶವೇನು?

### ಸ್ವಾರಸ್ಯ ಬರೆಯಿರಿ

- ಇಲ್ಲಿ ನೀಡಿರುವ ಪದ್ಯದ ಸಾಲುಗಳ ಸ್ವಾರಸ್ಯವನ್ನು ಬರೆಯಿರಿ.

ದೇಶದ ಆಟವು
ಇವನೊಳು ನಿಂತಿದೆ
ಕ್ಷೇಮವ ಶಾಂತಿಯ ಬೆಳೆಸುವನು

### ಪ್ರಾಸ ಪದ ಬರೆಯಿರಿ

- ಈ ಕವಿತೆಯಲ್ಲಿ  ಅಂತ್ಯಪ್ರಾಸ ಇರುವ ಪದಗಳನ್ನು ಕಂಡುಹಿಡಿದು ಬರೆಯಿರಿ.

### ಆಸ್ವಾದನ ಟಿಪ್ಪಣಿ ತಯಾರಿಸಿರಿ

- ಈ ಕವಿತೆಯ ಆಸ್ವಾದನ ಟಿಪ್ಪಣಿಯನ್ನು ತಯಾರಿಸಿ ತರಗತಿಯಲ್ಲಿ ಮಂಡಿಸಿರಿ.

### ಪ್ರಬಂಧ ತಯಾರಿಸಿರಿ

- 'ನಮ್ಮ ಊರಿನ ಬೆಳೆಗಳು' ಎಂಬ ವಿಷಯದ ಕುರಿತು ತರಗತಿಯಲ್ಲಿ ವಿಚಾರ ಸಂಕಿರಣ ನಡೆಸಲು  ಪ್ರಬಂಧವೊಂದನ್ನು ತಯಾರಿಸಿರಿ.

### ಸಂಚಿಕೆ ತಯಾರಿಸಿರಿ

- ದುಡಿಮೆಗೆ ಸಂಬಂಧಿಸಿದ ಕವಿತೆಗಳನ್ನು ಸಂಗ್ರಹಿಸಿ ಸಂಚಿಕೆ ತಯಾರಿಸಿರಿ.

### ಪೂರ್ತಿಗೊಳಿಸಿರಿ

- ಕೆಳಗೆ ನೀಡಲಾದ ಕವಿತೆಯಲ್ಲಿ ಬಿಟ್ಟುಹೋದ ಸಾಲುಗಳನ್ನು ಸೂಕ್ತವಾಗಿ ಪೂರ್ತಿಗೊಳಿಸಿರಿ.

ಟಪ್ ಟಪ್ ಸದ್ದು ಮಾಡಿ

ವೈದ್ಯರಿಲ್ಲಿ ಬಂದರು

ನಗುವ ಚೆಲ್ಲಿ ರೋಗಿಯಲ್ಲಿ

....................................

ಕಣ್ಣು ಬಾಯಿ ತೆರೆದು ನೋಡಿ

.......................................

ಹರಯ ಭಾರವನ್ನು ತಿಳಿದು

.......................................

# ಹಸಿರು ಚಿನ್ನ

ನಾನು ಹುಟ್ಟಿದ್ದು ಕೊಡಗಿನಲ್ಲಿ. ಹುಟ್ಟಿದ ಎರಡೇ ತಿಂಗಳಿಗೆ ಅಪ್ಪನನ್ನು ಕಳೆದುಕೊಂಡೆ. ಅಮ್ಮನೂ ಅಪ್ಪನ ದಾರಿಯನ್ನೇ ಹಿಡಿದಳು. ಅನಾಥನಾದ ನನ್ನನ್ನು ಅಕ್ಕ–ಭಾವ ಸಾಕಿದರು. ಐದನೇ ತರಗತಿಯ ವರೆಗೆ ಕಲಿತ ನಾನು ಕೈಮಗ್ಗದ ಕೆಲಸವನ್ನು ಆರಂಭಿಸಿದೆ. ಆ ಸಮಯದಲ್ಲಿ ಆಹಾರಕ್ಕೆ ಬರ ಉಂಟಾಯಿತು. ಆಗ ಗಾಂಧೀಜಿಯವರು "ಬಟ್ಟೆ ಮಾತ್ರವಲ್ಲ, ಅನ್ನವನ್ನೂ ಅವರವರೇ ಉತ್ಪಾದಿಸಿಕೊಳ್ಳಿ"ಎಂದು ಉಪದೇಶಿಸಿದರು. ಗಾಂಧೀಜಿಯ ಉಪದೇಶ ನನಗೂ ಸರಿ ಅನ್ನಿಸಿತು. ಮೂಡಬಿದಿರೆಯಲ್ಲಿದ್ದ ಉದ್ಯೋಗ ತೊರೆದು ಚೇರ್ಕಾಡಿಗೆ ಬಂದೆ. ಒಂದು ಕಡೆ ಕೈಮಗ್ಗದ ಕೆಲಸವನ್ನು ಮಾಡುತ್ತಾ ಕೃಷಿ ಆರಂಭಿಸಿದೆ.

ನನಗೀಗ ಎಪ್ಪತ್ತೆರಡರ  ಹರಯ. ಈಗಲೂ ನಾನು ಇಪ್ಪತ್ತರ ಯುವಕನಂತೆ ಕೆಲಸಮಾಡುತ್ತಿದ್ದೇನೆ. ನಾನು ಬರುವಾಗ ಇದೊಂದು ಬರಡು ಭೂಮಿಯಾಗಿತ್ತು. ಅಲ್ಲಲ್ಲಿ ಸ್ವಲ್ಪಸ್ವಲ್ಪ ಹುಲ್ಲು ಬೆಳೆದಿತ್ತು. ಒಟ್ಟಾರೆ ಹತ್ತಾರು ಮರಗಳು ಇದ್ದುವು ಅಲ್ಲಿದೆ ನೋಡಿ, ಮಾವು, ಆ ಕಡೆ ಹಲಸು. ಉಳಿದಂತೆ ಎಲ್ಲವೂ ಬಟ್ಟಬಯಲು. ಅಲ್ಲಲ್ಲಿ ಇದ್ದ ಹಸಿರು ಹುಲ್ಲನ್ನು ತೆಗೆದು ಹಸುವಿಗೆ ಹಾಕಿದೆ. ಅದರ ಸೆಗಣಿಯನ್ನು ನೀರು ಮಾಡಿ ಕರಿಮೆಣಸಿನ ಬಳ್ಳಿಗೆ ಹಾಕಿದೆ. ಅದರಲ್ಲಿ ಉತ್ತಮ ಫಸಲು ಬಂತು. 'ಈ ಪ್ರಕೃತಿಯಲ್ಲಿ ಎಲ್ಲವೂ ಒಂದಕ್ಕೊಂದು ಕೊಂಡಿ' ಎಂಬುದು ತಿಳಿಯಿತು. ಈ ಸಂಬಂಧದ ಮರ್ಮವೇ ನನಗೆ ಬದುಕನ್ನು ಕಲಿಸಿತು.



ನನಗೆ ಹೆಚ್ಚೇನೂ ಜಾಗವಿಲ್ಲ. ಉದ್ದ–ಅಗಲ, ಒಟ್ಟಾರೆ ಇರುವುದು ಎರಡು – ಎರಡೂವರೆ ಎಕರೆ ಭೂಮಿ. ಈಗ ಇಲ್ಲಿಗೆ ಬಂದವರು "ಇಲ್ಲಿ ಇಲ್ಲದ್ದು ಏನೂ ಇಲ್ಲವಲ್ಲ!" ಎನ್ನುತ್ತಾರೆ. ಇಲ್ಲಿ ಇರುವುದು ಮಾವು, ಹಲಸು, ತೆಂಗು, ಬಾಳೆ, ಶುಂಠಿ, ಅರಸಿನ, ಗೇರು, ಹಲಸು, ಹತ್ತಿ, ಭತ್ತ, ಅನನಾಸು....ಹೀಗೆ ಸ್ವಲ್ಪಸ್ವಲ್ಪ. ಇನ್ನೂ ಏನೇನೋ ನೆಡಬೇಕಿದೆ. ನಾನು ಯಾವುದಕ್ಕೂ ಆಯ–ಪಾಯ ಮಾಡಿಲ್ಲ. ಸಾಲು ಕಣಿಯಿಲ್ಲ. ಇದೊಂದು ಬರೀ ಹಾಡಿ. ಇದೇ ನನ್ನ ಪ್ರಪಂಚ.

ನಾನಿಲ್ಲಿ ನೆಮ್ಮದಿಯಿಂದಿದ್ದೇನೆ. ನನ್ನಿಂದ ರಾಷ್ಟ್ರಕ್ಕೆ ಯಾವುದೇ ನಷ್ಟವೂ ಇಲ್ಲ, ಭಾರವೂ ಇಲ್ಲ. ನಾನು "ಕರೆಂಟ್ ಕೊಡಿ, ಫೋನು ಕೊಡಿ, ಸಾಲ ಕೊಡಿ, ಭೂಮಿ ಕೊಡಿ" ಎಂದು ಕೇಳುವುದಿಲ್ಲ. ಯಾಕೆಂದರೆ ನಾನು ಭೂದೇವಿಯ ಅನುಗ್ರಹದಿಂದ ತುಂಡು ಭೂಮಿಯಲ್ಲಿ ನೆಮ್ಮದಿಯಲ್ಲಿದ್ದೇನೆ. ಇಲ್ಲಿ ನನಗೆ ಯಾರೂ ಕೆಲಸದವರಿಲ್ಲ, ನನಗೆ ನಾನೆ ಕೆಲಸದವನು. ನಾನೇ ಯಜಮಾನ. ಈ ಭೂಮಿ ನೊರೆಹಾಲು ಕೊಡುವ ಕೆಚ್ಚಲು. ಯಾರಿಗೂ ಅದನ್ನು ಕುಡಿದು ಅನುಭವಿಸಿ ಸುಖ ಪಡಬಹುದು. ಅದಕ್ಕೆ ಮನಸ್ಸು ಮತ್ತು ಶ್ರಮ ಬೇಕು.

1961 ರ ಕನ್ನೆ ತಿಂಗಳ ಒಂದು ದಿನ. ಮಾವಿನ ಮರದ ಸಮೀಪ ನಡೆದಾಗ ಮೆಣಸಿನ ಸಾಲಿನಲ್ಲಿ ಒಂದೇ ಒಂದು ಭತ್ತದ ಸಸಿ ಕಂಡೆನು. ಅದು16 ಕವಲಾಗಿ ತೆನೆ ಬಿಟ್ಟಿತ್ತು. ಅಷ್ಟರಲ್ಲಿ ಅರ್ಧ ಪಾವು ಭತ್ತವಾಯಿತು. ಇದರಿಂದ ನನಗೆ ಜ್ಞಾನೋದಯವಾಯಿತು. ಇದೇ ಬೀಜವನ್ನು ನಾನು ಬಿತ್ತಿದೆ. ಒಂದು ಸೆಂಟ್ ಜಾಗದಲ್ಲಿ 21 ಕೆ.ಜಿ. ಭತ್ತ ದೊರೆಯಿತು. ಮರುವರ್ಷ ೩೫೦ ಸೆಂಟ್ಸ್ ಜಾಗದಲ್ಲಿ ಬೆಳೆಸಿ ಮೂವತ್ತು ಮುಡಿ ಭತ್ತ ಕ್ಯೊದೆ. ನಮ್ಮ ಅಗತ್ಯಕ್ಕೆ ಬೇಕಾದುದನ್ನು ಇಟ್ಟು ಉಳಿದುದನ್ನು ಮಾರಿದೆ. ನೋಡಿ, ಇದು ದೇಶದ ಅನ್ನದ ಸಮಸ್ಯೆಗೊಂದು ಉತ್ತರ. ಇಂದು ಜನರಿಗೆ ಕೃಷಿ ಮಾಡಲು ಫಲವತ್ತಾದ ಭೂಮಿ ಬೇಕು, ಸಮೃದ್ಧ ನೀರು ಬೇಕು. ಅದನ್ನು ಭೂಮಿಯ ಮೇಲೆ ಎತ್ತಿ ಹಾಕಲು ಪಂಪು ಬೇಕು. ಪಂಪಿಗೆ ಕರೆಂಟು ಬೇಕು. ಸುಧಾರಿತ ತಳಿಯ ಬೀಜ ಬೇಕು. ಬ್ಯಾಂಕಿನಿಂದ ಇದಕ್ಕೆಲ್ಲ ಬಡ್ಡಿರಹಿತ ಸಾಲ–ಸಬ್ಸಿಡಿ ಬೇಕು– ಎಂದು ಬೊಬ್ಬೆ ಹೊಡೆಯುತ್ತಾ ಕಾಲಹರಣ ಮಾಡುವ ಬದಲು ಯಾವ ನೆಲದಲ್ಲೂ ಹಾರೆ–ಗುದ್ದಲಿ ಬಳಸಿ ಶ್ರಮ ವಹಿಸಿದರೆ 'ಹಸಿರು ಚಿನ್ನ' ಬೆಳೆಸಬಹುದು. ನಮಗೆ ಈ ಪ್ರಕೃತಿ 'ಒಂದು ಹೊಟ್ಟೆಗೆ ಎರಡು ಕೈಗಳನ್ನು ಕೊಟ್ಟಿದೆ' ಮನಸ್ಸು ಮಾಡಿದರೆ ನಾವು ಅದರಿಂದ ಎಷ್ಟು ಬೇಕಾದರೂ ಸಂಪಾದಿಸಬಹುದು.



ನಾನು ಪ್ರಕೃತಿಯೊಂದಿಗೆ ಪ್ರಕೃತಿಯೇ ಆಗಿದ್ದೇನೆ. ಅದನ್ನು ಬಗ್ಗಿಸುವುದಿಲ್ಲ,

ಬಡಿಯುವುದಿಲ್ಲ. ಬುಡಗಳಿಗೆ ವಿಷ ಸುರಿಯುವುದಿಲ್ಲ. ಆ ಮರಗಳು ಉದುರಿಸಿದ ತರಗೆಲೆ, ಕಸಮಸಗಳನ್ನೇ ಸುಟ್ಟು ಬೂದಿ, ಸುಡುಮಣ್ಣು ಮಾಡಿ ಬುಡಬುಡಗಳಿಗೆ ಹಾಕುತ್ತೇನೆ. ಬಾವಿಯಿಂದ ನಿತ್ಯ ನೀರೆತ್ತಿ ಬುಡಬುಡಗಳಿಗೆ ಸುರಿಯುತ್ತೇನೆ. ನಾವು ಏನೂ ಮಾಡದೆ ಅವು ಏನೂ ಕೊಡುವುದಿಲ್ಲ.

ಈ ಭೂಮಿ ಒಂದು ಆಕಾಶವಾಣಿ ಇದ್ದಂತೆ. ಆಕಾಶವಾಣಿಯಲ್ಲಿ ನಿರಂತರ ಕಾರ್ಯಕ್ರಮಗಳು ಇರುತ್ತವೆ. ಆದರೆ ನಾವು ಕೇಳಬೇಕಾದರೆ 'ಸ್ವಿಚ್ ಓನ್' ಮಾಡಬೇಕು. ಈ ಭೂಮಿಯಲ್ಲಿಯೂ ನಿರಂತರ ಕಾರ್ಯಕ್ರಮಗಳು ತುಂಬಿರುತ್ತವೆ. ಅವು ನಮಗೆ ಅರ್ಥವಾಗಬೇಕಾದರೆ, ಕೇಳಬೇಕಾದರೆ ಗಿಡ, ಮರ, ಬಳ್ಳಿಗಳಂತಹ 'ಸ್ವಿಚ್' ಬೇಕು. ಅಂತಹ ಒಂದೇ ಒಂದು ಬಳ್ಳಿ ಪ್ರಕೃತಿಯ ಪರಿಸ್ಥಿತಿ, ಅಂತರಂಗವನ್ನು ಪ್ರಕಟಿಸಬಹುದು.

ನೋಡಿ, ತಾಯಿ ತನ್ನ ಮಗು ಅಳುವಾಗ ಬೆಲ್ಲದ ತುಂಡು ಕೊಟ್ಟು ಸಮಾಧಾನಮಾಡುವಂತೆ, ಭೂಮಿ ತಾಯಿ ಎಲ್ಲಾ ಕಾಲದಲ್ಲೂ ಯಾವುದಾದರೂ ಒಂದು ಹಣ್ಣನ್ನು ಕೊಟ್ಟು ನಮ್ಮನ್ನು ತಣಿಸುತ್ತಾಳೆ. ಇಲ್ಲಿ ಎಂಟು ಹತ್ತು ಅಲ್ಫಾನ್ಸೊ, ಹೊನ್ನೆಬೆಟ್ಟು, ಮಾವಿನ ಮರಗಳಿವೆ. ಇವನ್ನು ಗುತ್ತಿಗೆಗೆ ಕೊಡುತ್ತೇನೆ. ವರ್ಷಕ್ಕೆ ನಾಲ್ಕೈದು ಸಾವಿರ ರೂ. ಆದಾಯ ದೊರಕುತ್ತದೆ. ಬಾಳೆ ಬರೀ ಮಳೆಯ ನೀರಿನಿಂದ ಬೆಳೆದು ವರ್ಷಕ್ಕೆ ಸಾವಿರ ರೂಪಾಯಿಯಷ್ಟು ಆದಾಯ ಕೊಡುತ್ತದೆ. ವರ್ಷಕ್ಕೆ ನಾಲ್ಕೈದು ಕ್ವಿಂಟಾಲ್ ಗೇರುಬೀಜ, ಎರಡೂವರೆ ಸಾವಿರ ತೆಂಗಿನಕಾಯಿ ಸಿಗುತ್ತದೆ.

ಆಳದ ಬಾವಿಯಿಂದ ನೀರೆತ್ತಲು ನಾನೇ ಸ್ವತಃ ಸಂಶೋಧನೆ ಮಾಡಿದ, ನೀರೆತ್ತುವ ಯಂತ್ರ–ಇಲ್ಲಿದೆ ನೋಡಿ. ಆರಂಭದಲ್ಲಿ ಪಂಪು ಕೊಳ್ಳಲು ಹಣವಿರಲಿಲ್ಲ. ಖಾದಿಗ್ರಾಮದಲ್ಲಿನ ನನ್ನ ಅನುಭವದಿಂದ ರಾಟೆ ಬಳಸಿ ನೀರೆತ್ತುವ ಯಂತ್ರ ತಯಾರಿಸಿದೆ. ಇದಕ್ಕೆ 'ಸರ್ವೋದಯ ರಾಟೆ' ಎಂದೇ ಹೆಸರಿಟ್ಟಿದ್ದೇನೆ. ಈ ಯಂತ್ರದಲ್ಲಿ 20 ನಿಮಿಷಗಳಲ್ಲಿ ಸುಮಾರು 100 ಕೊಡ ನೀರೆತ್ತಲು ಸಾಧ್ಯ. ನಾನು ಮರದ ಬುಡ ಬುಡಗಳಿಗೆ ತರಗೆಲೆ, ಕಸಕಡ್ಡಿಗಳನ್ನು ಹಾಸಿಗೆ ರೀತಿ ಮುಚ್ಚಿಟ್ಟಿದ್ದೇನೆ. ಆದಕಾರಣ ಮರದ ಬುಡದಲ್ಲಿ ಚೆನ್ನಾಗಿ ತಂಪು ತಂಪು ನೀರಿನ ಪಸೆಯಿದೆ. ನನಗೆ ಶ್ರೀ. ಟಿ. ಎ.ಪೈ ಅವರು ಉದಾರವಾಗಿ ಪಂಪ್‌ಸೆಟ್ ಕೊಡಲು ಮುಂದೆ ಬಂದರು. ನಾನೇ ನಿರಾಕರಿಸಿದೆ. ಯಾಕೆಂದರೆ ಈಗ ಎಪ್ರಿಲ್–ಮೇ ತಿಂಗಳಲ್ಲಿ ಧಾರಾಳ ನೀರಿದೆ. ಇಲ್ಲವಾದರೆ ಮೂರೇ ತಿಂಗಳಲ್ಲಿ ಬಾವಿ ತಳ ಕಾಣುತ್ತಿತ್ತು.

ಒಮ್ಮೆ ನನ್ನ ಭತ್ತದ ಕೃಷಿಯನ್ನು ನೋಡಲು ಕಲೆಕ್ಟರ್ ಬಂದಿದ್ದರು. ಅವರು ಒಬ್ಬ ಅಧಿಕಾರಿಯನ್ನು ಕರೆದು "ಇಲ್ಲಿ ಬೇರೆ ಎಲ್ಲಾದರೂ ಸರಕಾರಿ ಜಾಗ ಉಂಟೋ?" ಎಂದು ಕೇಳಿದರು. ಅಧಿಕಾರಿ "ತುಂಬಾ ಇದೆ ಸಾರ್" ಎಂದು ಹೇಳಿದರು. ತಕ್ಷಣ ಕಲೆಕ್ಟರ್ "ಆ ಜಾಗವನ್ನೆಲ್ಲ ಇವರಿಗೆ ಕೊಡಲು ಏರ್ಪಾಡು ಮಾಡಿ" ಎಂದು ಹೇಳಿದರು. ಅದಕ್ಕೆ ನಾನು "ಸ್ವಾಮೀ, ನನಗೆ ಇದೇ ಸಾಕು. ಏನೂ ಭೂಮಿ ಇಲ್ಲದವರಿಗೆ ಅದನ್ನು ಒಂದು, ಒಂದೂವರೆ ಎಕರೆಯಂತೆ ಕೊಡಿ". ಎಂದೆ. ಈ ನೀರು, ಗಾಳಿ ಯಾರೊಬ್ಬರಿಗೂ ಸೇರಿದ್ದಲ್ಲ. ಅದನ್ನು ಒಬ್ಬರೇ ಇಟ್ಟುಕೊಂಡರೆ ಉಳಿದವರು ಏನು

ಮಾಡಬೇಕು? ಈ ಭೂಮಿಯಲ್ಲಿ ನನಗೆ 365 ದಿನವೂ ಮಾಡಲು ಕೆಲಸವಿದೆ. ಈ ಭೂಮಿಯಿಂದ ನನಗೆ ಸಾಕಷ್ಟು ಹಣ ದೊರೆತಿದೆ. ನನ್ನೆಲ್ಲಾ ಖರ್ಚು ಕಳೆದು ಲಕ್ಷಗಳು ಬ್ಯಾಂಕಿನಲ್ಲಿ ಠೇವಣಿ ಇಟ್ಟಿದ್ದೇನೆ.



'ಕೃಷಿಯಿಂದ ಪೂರ್ಣ ಸ್ವಾವಲಂಬಿಯೂ ಆಗಬೇಕು. ಅನಿರೀಕ್ಷಿತ ಅನಾಹುತಗಳಿಗೆ ಎದೆಯೊಡ್ಡುವ ಮನಸ್ಸೂ ಬೇಕು.' ಇಂದು ಬೇಕಾದಷ್ಟು ಹಡಿಲು ಭೂಮಿ ಇಟ್ಟುಕೊಂಡು 600–700 ರೂಪಾಯಿಗಳ ಸಂಬಳಕ್ಕೆ ನಮ್ಮ ಯುವಕ–ಯುವತಿಯರು ಅಲ್ಲಿಲ್ಲಿ ಅಲೆಯುತ್ತಿದ್ದಾರೆ. ಇವರೆಲ್ಲ ಇತರರ ಆಳಾಗಿ ದುಡಿಯದೆ, ಸ್ವಂತ ಭೂಮಿಯಲ್ಲಿ ಆಳಾಗಿ ದುಡಿದರೆ ತಾವೇ ಯಜಮಾನರಾಗಿರಬಹುದಲ್ಲವೇ? ಹೀಗೆ ಹೇಳಿದವರು 'ಚೇರ್ಕಾಡಿ' ಎಂದೇ ಹೆಸರುವಾಸಿಯಾದ ಶ್ರೀ ರಾಮಚಂದ್ರರಾಯರು. ಬಂಜರು ಭೂಮಿಯಲ್ಲಿಯೂ ಚಿನ್ನವನ್ನು ಬೆಳೆಯಬಹುದು ಎಂದೂ ಸಾಧಿಸಿ ತೋರಿಸಿದ್ದಾರೆ. ಇವರ ಜೀವನ ಶೈಲಿ ಯುವಜನಾಂಗಕ್ಕೊಂದು ಮಾದರಿಯಾಗಿರಲಿ.

*'ಚೇರ್ಕಾಡಿ' ಆತ್ಮಕಥನದಿಂದ*

## ಚಟುವಟಿಕೆಗಳು

### ಚರ್ಚಿಸಿರಿ

- 'ರಟ್ಟೆ ಮುರೀಬೇಕು ರೊಟ್ಟಿ ತಿನ್ನಬೇಕು'
  'ಹೊನ್ನು ವಂಚಿಸಿದರೂ ಮಣ್ಣು ವಂಚಿಸದು'
  ಈ ಗಾದೆ ಮಾತುಗಳು ಚೇರ್ಕಾಡಿ ರಾಮಚಂದ್ರರಾಯರ ಕೃಷಿ ಜೀವನಕ್ಕೆ ಹೇಗೆ ಹೊಂದಿಕೆಯಾಗುತ್ತವೆ ಎಂಬುದನ್ನು ಚರ್ಚಿಸಿರಿ.

### ಉತ್ತರಿಸಿರಿ

- 'ಪ್ರಕೃತಿಯಲ್ಲಿರುವ ಜೀವಜಾಲಗಳು ಪರಸ್ಪರ ಅವಲಂಬಿಸಿವೆ' ಎಂಬುದು ಚೇರ್ಕಾಡಿಯವರಿಗೆ ಹೇಗೆ ತಿಳಿಯಿತು?
- ಚೇರ್ಕಾಡಿಯವರು ಭತ್ತದ ಉತ್ಪಾದನೆಯನ್ನು ಅಧಿಕಗೊಳಿಸಿದುದು ಹೇಗೆ?
- ಭೂಮಿಯನ್ನು ಆಕಾಶವಾಣಿಗೆ ಹೋಲಿಸಿದ ಬಗೆ ಹೇಗೆ?
- ಸರ್ವೋದಯ ರಾಟೆ ಎಂದರೆ ಯಾವುದು?
- ಕಲೆಕ್ಟರರು ನೀಡಲು ತೀರ್ಮಾನಿಸಿದ ಸರಕಾರಿ ಭೂಮಿಯನ್ನು ಚೇರ್ಕಾಡಿಯವರು ಬೇಡವೆನ್ನಲು ಕಾರಣವೇನು?

## ಟಿಪ್ಪಣಿ ತಯಾರಿಸಿರಿ

- "ನಾವು ಇತರರ ಆಳಾಗಿ ದುಡಿಯದೆ, ಸ್ವಂತ ಭೂಮಿಯಲ್ಲಿ ಆಳಾಗಿ ದುಡಿದರೆ ನಾವೇ ಯಜಮಾನರಾಗಿರಬಹುದು". ಚೇರ್ಕಾಡಿಯವರ ಈ ಮಾತಿನ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಟಿಪ್ಪಣಿ ರೂಪದಲ್ಲಿ ಬರೆಯಿರಿ.

## ಅಭಿನಂದನ ಪತ್ರ ತಯಾರಿಸಿರಿ

- ಚೇರ್ಕಾಡಿ ರಾಮಚಂದ್ರರಾಯರು ತಮ್ಮ ಕೃಷಿಭೂಮಿಯಲ್ಲಿ ಕಷ್ಟಪಟ್ಟು ದುಡಿದು ಉತ್ತಮ ಕೃಷಿಕರೆನಿಸಿಕೊಂಡಿದ್ದಾರೆ ಎಂಬುದನ್ನು ಅವರ ಆತ್ಮಕಥೆಯಿಂದ ತಿಳಿದಿರುವಿರಿ. ಅವರ ಸಾಧನೆಗೆ ಅಭಿನಂದನೆಯನ್ನು ಸಲ್ಲಿಸಲು ಒಂದು ಅಭಿನಂದನ ಪತ್ರ ತಯಾರಿಸಿರಿ.

## ವ್ಯಕ್ತಿ ಪರಿಚಯ ಬರೆಯಿರಿ

- ಒಬ್ಬರು ಕೃಷಿಕರ ಕುರಿತಾದ ಮಾಹಿತಿಗಳನ್ನು ಇಲ್ಲಿ ನೀಡಲಾಗಿದೆ.ಅದರ ಆಧಾರದಲ್ಲಿ ವ್ಯಕ್ತಿ ಪರಿಚಯವನ್ನು ಬರೆದು ಮಂಡಿಸಿರಿ.

| | | |
|---|---|---|
| ಹೆಸರು | : | ಅಬೂಬಕ್ಕರ್ |
| ಜನನ | : | 16.05.1977 |
| ಜನ್ಮಸ್ಥಳ | : | ಪೆರ್ಲ ಸಮೀಪದ ಸರವು |
| ತಂದೆ | : | ಹಸೈನಾರ್ ಹಾಜಿ |
| ತಾಯಿ | : | ರಷೀದಾ |
| ಪತ್ನಿ | : | ಮಿಸಿರಿಯಾ |
| ವೃತ್ತಿ | : | ಕೃಷಿ ಮತ್ತು ಹೈನುಗಾರಿಕೆ |
| ಸಾಧನೆಗಳು | : | 50 ದನಗಳಿಂದ ದಿನಕ್ಕೆ 300ರಿಂದ 400 ಲೀಟರ್ ವರೆಗೆ ಹಾಲು ಉತ್ಪಾದಿಸುತ್ತಾರೆ. ಇದಕ್ಕಾಗಿ ಏಳು ಎಕರೆ ಬಂಜರು ಭೂಮಿಯಲ್ಲಿ ಹುಲ್ಲು ಬೆಳೆಸುತ್ತಾರೆ. ಬಯೋಗ್ಯಾಸಿನಿಂದ ಮನೆಗೆ ಬೇಕಾದ ಇಂಧನ ಪಡೆಯುತ್ತಾರೆ. ಅವರಿಂದ ಐದು ಮಂದಿಗೆ ನಿರಂತರ ಉದ್ಯೋಗ ಲಭಿಸಿದೆ. |
| ಪ್ರಶಸ್ತಿಗಳು | : | 1. ತಿರುವನಂತಪುರದ ಕಲ್ಲಕ್ಕಾಡು ಫೌಂಡೇಶನ್‌ನವರು ನೀಡಿದ ರಾಜ್ಯಮಟ್ಟದ ಪುರಸ್ಕಾರ.<br>2. ಬ್ಲೋಕ್ ಮಟ್ಟದಲ್ಲಿ ಸತತ ನಾಲ್ಕು ವರ್ಷಗಳಿಂದ 'ಅತ್ಯುತ್ತಮ ಹೈನುಗಾರಿಕೆ'ಪ್ರಶಸ್ತಿ. |
| ಮುಂದಿನ ಯೋಜನೆಗಳು | : | ಸಾಕುವ ದನಗಳ ಸಂಖ್ಯೆಯನ್ನು 150ರ ವರೆಗೆ ಏರಿಸುವುದು. |

### ಪದ ರಚಿಸಿರಿ

- ಕೋಣೆಗಳಲ್ಲಿರುವ ಅಕ್ಷರಗಳನ್ನು ಕ್ರಮೀಕರಿಸಿದರೆ ಅರ್ಥಪೂರ್ಣ ಪದಗಳಾಗುತ್ತವೆ. ಅವುಗಳನ್ನು ಕಂಡುಹಿಡಿದು ಬರೆಯಿರಿ.

| | | | | |
|---|---|---|---|---|
| ದ | ಉ | ನೆ | ತ್ಪಾ | |
| ಸು | ರಿ | ಮೆ | ಕ | ಣ |
| ನೋ | ಯ | ಜ್ಞಾ | ದ | |

| | | | | |
|---|---|---|---|---|
| ಭಿ | ನೆ | ನಂ | ಅ | ದ |
| ಶ | ಕಾ | ಆ | ಣಿ | ವಾ |
| ತ | ನಿ | ಕ್ಷ | ಅ | ರೀ |

### ಪದ ಹುಡುಕಿ ಬರೆಯಿರಿ

- ಕೆಳಗಿನ ವಾಕ್ಯಗಳಲ್ಲಿ ಅಡಿಗೆರೆ ಎಳೆದ ಪದಗಳನ್ನು ಗಮನಿಸಿರಿ.
  - ನಾನು ಕರೆಂಟು ಕೊಡಿ, ಫೋನು ಕೊಡಿ, ಸಾಲ ಕೊಡಿ, ಭೂಮಿ ಕೊಡಿ ಎಂದು ಕೇಳುವುದಿಲ್ಲ.
  - ರೇಡಿಯೋ ಕೇಳಬೇಕಾದರೆ ಸ್ವಿಚ್ ಆನ್ ಮಾಡಬೇಕು.
  - ಮೇಜಿನ ಮೇಲೆ ಲ್ಯಾಂಪ್ ಇದೆ.
- ಅಡಿಗೆರೆ ಎಳೆದ ಪದಗಳು ಕನ್ನಡ ಪದಗಳಲ್ಲ. ಬೇರೆ ಭಾಷೆಗಳಿಂದ ಕನ್ನಡ ಭಾಷೆಗೆ ಬಂದು ಸೇರಿದ ಪದಗಳಾಗಿವೆ. ಇಂತಹ ಪದಗಳನ್ನು ಅನ್ಯದೇಶೀಯ ಪದಗಳು ಎನ್ನುತ್ತೇವೆ. ಬಸ್ಸು, ಕಾರು, ಫ್ಯಾನ್, ಟಿ.ವಿ. ಇವೆಲ್ಲವೂ ಅನ್ಯದೇಶೀಯ ಪದಗಳಾಗಿವೆ.

  ಇದೇ ರೀತಿಯ ಅನ್ಯದೇಶೀಯ ಪದಗಳಿರುವ ವಾಕ್ಯಗಳನ್ನು ಪಾಠದಿಂದ ಆರಿಸಿ ಬರೆಯಿರಿ.

### ವಾಕ್ಯ ರಚಿಸಿರಿ

- ಈ ವಾಕ್ಯಗಳಲ್ಲಿ ಅಡಿಗೆರೆ ಎಳೆದ ಪದಗಳನ್ನು ಗಮನಿಸಿರಿ.

  ಅಲ್ಲಲ್ಲಿ ಸ್ವಲ್ಪಸ್ವಲ್ಪ ಹುಲ್ಲು ಬೆಳೆದಿತ್ತು.

  ಅಲ್ಲಲ್ಲಿ ಇದ್ದ ಹಸಿರು ಹುಲ್ಲನ್ನು ತೆಗೆದು ಹಸುವಿಗೆ ಹಾಕಿದೆ. ಬಾವಿಯಿಂದ ನಿತ್ಯ ನೀರೆತ್ತಿ ಬುಡಬುಡಗಳಿಗೆ ಸುರಿಯುತ್ತೇನೆ.

  ಅಡಿಗೆರೆ ಎಳೆದ ಪದಗಳಲ್ಲಿ ಮೊದಲ ಪದದ ಆವರ್ತನೆಯಾಗಿದೆ.

  ಉದಾ : ಸ್ವಲ್ಪಸ್ವಲ್ಪ , ಬುಡಬುಡ

  ಇಂತಹ ಪದಗಳನ್ನು 'ದ್ವಿರುಕ್ತಿಗಳು' ಎನ್ನುತ್ತೇವೆ.


  ಇಂತಹ ದ್ವಿರುಕ್ತಿ ಪದಗಳು ಈ ಪಾಠದಲ್ಲಿ ಬಂದಿವೆಯೋ ಎಂಬುದನ್ನು ನೋಡಿರಿ. ಇದ್ದರೆ ಅವುಗಳನ್ನು ಬಳಸಿ ವಾಕ್ಯಗಳನ್ನು ರಚಿಸಿರಿ.

## ಕಲಿಕಾ ಸಾಧನೆಗಳು

- ಆಲಿಸಿ ಓದಿ ತಿಳಿದ ವಿಚಾರಗಳನ್ನು ತರ್ಕಬದ್ಧವಾಗಿ ವಿಶ್ಲೇಷಿಸಿ ಸ್ವಂತ ಅಭಿಪ್ರಾಯಗಳನ್ನು ವಾಚಿಕವಾಗಿ ಮತ್ತು ಲಿಖಿತವಾಗಿ ಪ್ರಕಟಿಸುವುದು.
- ಗದ್ಯ–ಪದ್ಯಗಳನ್ನು ಆಶಯ ಸ್ಪಷ್ಟತೆಯೊಂದಿಗೆ ನಿರರ್ಗಳವಾಗಿ ಮತ್ತು ಸ್ಪುಟತೆಯೊಂದಿಗೆ ಓದುವುದು ಮತ್ತು ಪ್ರಧಾನ ಆಶಯಗಳನ್ನು ಬಾಯ್ದೆರೆಯಾಗಿ ಮಂಡಿಸುವುದು.
- ಪದಗಳು, ಪದಪ್ರಯೋಗಗಳು, ಗಾದೆಗಳು, ಶೈಲಿಗಳು ಮೊದಲದ ಭಾಷಾ ಘಟಕಗಳನ್ನು ಅಳವಡಿಸಿ ಸಂದರ್ಭಾನುಸಾರವಾಗಿ ಮಾತನಾಡುವುದು. ಸ್ವಂತ ರಚನೆಗಳಲ್ಲಿ ಅವುಗಳನ್ನು ಸಂದರ್ಭಾನುಸಾರವಾಗಿ ಉಪಯೋಗಿಸುವುದು.
- ಜನಪದಗೀತೆ, ಕವಿತೆಗಳ ರಾಗ, ತಾಳ, ಭಾವ ಎಂಬಿವುಗಳನ್ನು ಆಸ್ವಾದಿಸುವುದು, ತಾಳದೊಂದಿಗೆ ಭಾವನಾತ್ಮಕವಾಗಿ ಹಾಡಿ ಮಂಡಿಸುವುದು. ಕಂಠಪಾಠ ಮಾಡುವುದು.
- ನೀಡಿದ ಸಂದರ್ಭಕ್ಕೆ ಸೂಕ್ತವಾದ ವ್ಯವಹಾರ ರೂಪಗಳನ್ನು ಕಂಡುಕೊಂಡು ರಚನೆಗಳನ್ನು ಮಾಡುವುದು.
- ವಿಭಿನ್ನ ರೀತಿಯ ವ್ಯವಹಾರ ರೂಪಗಳನ್ನು ತಯಾರಿಸುವುದು. ಅವುಗಳನ್ನು ಸಂಚಿಕೆ, ಭಿತ್ತಿಪತ್ರಿಕೆ, ಹಸ್ತಪತ್ರಿಕೆ, ನಿಯತಕಾಲಿಕಗಳಲ್ಲಿ ಪ್ರಕಟಿಸುವುದು.
- ಸೃಜನಾತ್ಮಕ ರಚನೆಗಳನ್ನು ಓದಿ, ಅವುಗಳ ಪ್ರಧಾನ ಆಶಯ ಕೆಡದಂತೆ ಸಂಕ್ಷಿಪ್ತವಾಗಿ ಬರೆಯುವುದು.
- ಕೃತಿಯ ಕಥಾಪಾತ್ರಗಳು, ಸನ್ನಿವೇಶಗಳು, ಭಾಷಾಶೈಲಿ, ಮಂಡನೆಯ ರೀತಿ ಎಂಬಿತ್ಯಾದಿಗಳನ್ನು ಪರಿಗಣಿಸಿ ಓದಿದ ಕೃತಿಯ ಆಸ್ವಾದನ ಟಿಪ್ಪಣಿ ತಯಾರಿಸುವುದು.
- ವಿವಿಧ ಕವಿತೆಗಳನ್ನು ಕಂಠಪಾಠ ಮಾಡಿ ಸೂಕ್ತವಾದ ರಾಗ, ತಾಳಗಳೊಂದಿಗೆ ಭಾವಪೂರ್ಣವಾಗಿ ಹಾಡುವುದು.
- ಪದಶುದ್ಧಿ, ವಾಕ್ಯಶುದ್ಧಿ, ಲೇಖನಚಿಹ್ನೆ ಮೊದಲಾದ ಬರವಣಿಗೆಗೆ ಅಗತ್ಯವಾದ ಅಂಶಗಳನ್ನೊಳಗೊಂಡು ಮಾಡಿದ ರಚನೆಗಳ ಮೌಲ್ಯನಿರ್ಣಯ ಮಾಡುವುದರೊಂದಿಗೆ ಅವುಗಳನ್ನು ಉತ್ತಮಗೊಳಿಸುವುದು.
- ಓದಿದ ವಿಚಾರಗಳನ್ನು ವಿಶ್ಲೇಷಿಸಿ ತನ್ನ ಅಭಿಪ್ರಾಯಗಳನ್ನು ಭಾಷಣ, ಪ್ರಬಂಧ ಮತ್ತು ಚರ್ಚೆಗಳ ಮೂಲಕ ಮಂಡಿಸುವುದು.
- ದೃಶ್ಯ–ಶ್ರಾವ್ಯ ಮಾಧ್ಯಮಗಳ ಮೂಲಕ ಗಳಿಸಿದ ವಿಚಾರಗಳನ್ನು ತನ್ನ ರಚನೆಯಲ್ಲಿ ಬಳಸುವುದು.

3

# ತಾಣ – ಯಾನ



‘ದೇಶ ಸುತ್ತು ಕೋಶ ಓದು’ ಎಂಬ ನಾಣ್ಣುಡಿಯೊಂದಿದೆ. ನಾವು ಪರವೂರಿಗೆ ಹೋದಾಗ ಅಲ್ಲಿಯ ಜನರ ಜೀವನ ವಿಧಾನ, ಆಹಾರ–ವಿಹಾರ, ಉಡುಗೆ–ತೊಡುಗೆ ಮಾತ್ರವಲ್ಲದೆ ಅಲ್ಲಿನ ಪ್ರಕೃತಿ ರಮಣೀಯ ದೃಶ್ಯಗಳನ್ನು ನೋಡಿದಾಗ ನಮಗೆ ಅವಿಸ್ಮರಣೀಯವಾದ ಅನುಭವಗಳಾಗುತ್ತವೆ.

# ಹೊಸ ಕಾರಿನ ಓಟ



ಹಳೆಯ ಲಾರಿಯು ಹೀಗೆ ಹೊರಟಿರಲು
ಟಾರು ರಸ್ತೆಯ ಮೇಲೆ,
ಬಳಿಯಲಿ ಓಡಿದ ಹೊಸ ಕಾರೊಂದು
ತೆಗೆಯಿತು ಅದರೊಡನೆ ರಗಳೆ

ಓ ಮುದಿ ಲಾರಿಯೆ ಹಿಮ್ಮೆಟ್ಟುವೆಯಾ
ರೇಸಲಿ ನನ್ನನು ನೀನು?
ಮುದಿ ಆಮೆಯು ಸಹ ಹಿಮ್ಮೆಟ್ಟಿಸುವುದು
ನಿನ್ನೊಡನೋಟದಿ ತಾನು

ಕಾರು ಮೂದಲಿಸೆ ಲಾರಿಯು ನಗುತ
ಹೀಗೆ ಸಾಗಿರಲು ಹಿಂದೆ,
ಕಾರು ತಾ ಮರಕೆ ಡಿಕ್ಕಿ ಹೊಡೆಯುತ
ನಿಂತುದ ಕಂಡಿತು ಮುಂದೆ



ಕಾರನು ಕಂಡು ಲಾರಿಯು ನುಡಿಯಿತು,
ತಪ್ಪನು ಅರಿತೆಯಾ ಈಗ?
ನಿನಗಿಂತಲೂ ನಾ ರಭಸದಿ ಓಡಿಹೆ
ನಾನು ಹೊಸದಿರುವಾಗ

ಅಪಘಾತದಲಿ ಪಾಠವ ಕಲಿಯುತ
ಮೆಲ್ಲನೆ ಹೊರಡುವೆ ಈಗ
ಸಾವಧಾನದಲಿ ನೋವು ತಾ ಕಡಿಮೆ
ಇದನು ಅರಿಯಲೋ ಬೇಗ

ಹೀಗೆ ಹೇಳುತ ಹಗ್ಗದಿ ಬಿಗಿದು
ಕಾರನು ಎಳೆಯುತ ತಂದು,
ರಿಪೇರಿ ಸ್ಥಳದಲಿ ನಿಲ್ಲಿಸುತದನು
ರಿಪೇರಿ ಆಗಲಿ ಎಂದು

ಲಾರಿಯು ಮಾಡಿದ ಸಹಾಯ ನೆನೆದು
ಪಶ್ಚಾತ್ತಾಪದಿ ಬೆಂದು
ಹಿರಿಯನೆ ನಿನ್ನನು ಅರಿಯದೆ ಜರಿದೆ
ಎಂದಿತು ಕಾರು ನೊಂದು

*ಗುರುರಾಜ ಬೆಣಕಲ್*



## ಚಟುವಟಿಕೆಗಳು

### ಹಾಡಿರಿ

- ಈ ಕವಿತೆಯನ್ನು ಹಾಡಿರಿ.

### ಚರ್ಚಿಸಿರಿ

- 'ಸಾವಧಾನದಲಿ ನೋವು ತಾ ಕಡಿಮೆ' ಎಂಬ ಕವಿವಾಣಿಯನ್ನು ನೀವು ಓದಿದಿರಲ್ಲವೇ? ಇದರ ಕುರಿತು ನಿಮ್ಮ ಅಭಿಪ್ರಾಯವೇನು? ಚರ್ಚಿಸಿ ಟಿಪ್ಪಣಿ ತಯಾರಿಸಿರಿ.

### ಸಂಭಾಷಣೆ ಬರೆಯಿರಿ

- ಪದ್ಯದಲ್ಲಿ ಬಂದಿರುವ ಹಳೆಯ ಲಾರಿ ಮತ್ತು ಹೊಸ ಕಾರಿನ ನಡುವೆ ನಡೆದ ಮಾತುಕತೆಯನ್ನು ಸಂಭಾಷಣೆಯ ರೂಪದಲ್ಲಿ ಬರೆಯಿರಿ.

### ಸಾರಾಂಶ ಬರೆಯಿರಿ

- ಕವಿತೆಯನ್ನು ಓದಿ ಆಸ್ವಾದಿಸಿದಿರಲ್ಲವೇ? ಕವಿತೆಯ ಸಾರಾಂಶವನ್ನು ಬರೆಯಿರಿ.

### ಅನ್ಯದೇಶೀಯ ಪದ ಗುರುತಿಸಿರಿ

- ಕವಿತೆಯಲ್ಲಿ ಬಂದಿರುವ ಅನ್ಯದೇಶೀಯ ಪದಗಳನ್ನು ಬರೆಯಿರಿ.
  ಉದಾ : ಕಾರು, ಲಾರಿ, .......

### ಪ್ರಾಸಪದ ಬರೆಯಿರಿ

- ಕವಿತೆಯಲ್ಲಿ ಕಂಡುಬರುವ ಅಂತ್ಯಪ್ರಾಸ ಪದಗಳನ್ನು ಬರೆಯಿರಿ.

### ಸೂಚನಾ ಫಲಕ ತಯಾರಿಸಿರಿ

- ರಸ್ತೆ ಸುರಕ್ಷತೆಯ ಬಗ್ಗೆ ಜನ ಜಾಗೃತಿ ಮೂಡಿಸಲು ಸಹಾಯಕವಾದ ಸೂಚನಾ ಫಲಕಗಳನ್ನು ತಯಾರಿಸಿರಿ.
  ಉದಾ : ನಿಧಾನವೇ ಪ್ರಧಾನ

### ಸಂಗ್ರಹಿಸಿರಿ

- ಸಾರಿಗೆ ಸಂಪರ್ಕ ವ್ಯವಸ್ಥೆಗೆ ಸಂಬಂಧಿಸಿದ ಕವಿತೆಗಳನ್ನು ಸಂಗ್ರಹಿಸಿ ಸಂಚಿಕೆ ತಯಾರಿಸಿರಿ.

### ಟಿಪ್ಪಣಿ ತಯಾರಿಸಿರಿ

- ನಾವು ಪ್ರತಿದಿನವೂ ವಾಹನ ಅಪಘಾತಗಳ ಸುದ್ದಿಗಳನ್ನು ವೃತ್ತಪತ್ರಿಕೆಗಳಲ್ಲಿ ಓದುತ್ತೇವೆ. ವರ್ಷದಿಂದ ವರ್ಷಕ್ಕೆ ರಸ್ತೆ ಅಪಘಾತಗಳು ಹೆಚ್ಚಾಗುತ್ತಿವೆ ಎಂಬುದನ್ನು ಅಂಕಿ ಅಂಶಗಳು ತಿಳಿಸುತ್ತವೆ. ರಸ್ತೆ ಅಪಘಾತಗಳು ಹೆಚ್ಚಾಗಲು ಕಾರಣಗಳೇನು? ಟಿಪ್ಪಣಿ ತಯಾರಿಸಿರಿ.

# ಕಾಶ್ಮೀರದ ಸರೋವರಗಳ ತೀರದಲ್ಲಿ

"ಅದೋ....! ಅಲ್ಲಿದೆ ನೋಡಿ, ನಾವು ತಲುಪಬೇಕಾದ ಸ್ಥಳ" ಎಂದು ಜೊತೆಗಿದ್ದ ಮಾರ್ಗದರ್ಶಿ ಕಣಿವೆಯ ಕಡೆ ಕೈತೋರಿಸಿ ನುಡಿದ. ನಾವು ಏದುಸಿರುಬಿಡುತ್ತಾ ಪರ್ವತಶ್ರೇಣಿಯೊಂದರ ಅಂಚಿನಲ್ಲಿ ನಿಂತಿದ್ದೆವು. ಸುತ್ತಲೂ ಹಸಿರು ಉಡುಗೆಯುಟ್ಟ ಪರ್ವತಸಾಲುಗಳು, ಅವುಗಳಿಂದ ಕೆಳಗೆ ಹರಿಯುವ ಸ್ಫಟಿಕದಂತಹ ನೀರ ಝರಿಗಳು. ನಯನಮನೋಹರ ಕಣಿವೆಗಳು, ಬೆಳ್ಳಿಬೆಟ್ಟಗಳ ಸಾಲು, ತೇಲಿಬಿಡುವ ಮೋಡಗಳ ಜೊತೆಗೆ 'ಸುಂಯ್' ಎಂದು ಬೀಸುವ ತಂಪಾದ ಗಾಳಿ, ನಿಜಕ್ಕೂ ಇದು ಸ್ವರ್ಗ ಸದೃಶ ಚಿತ್ರಗಳು. ನಾವು 'ಭೂಮಿಯ ಮೇಲಿನ ಸ್ವರ್ಗ' ಎಂದು ನಾಮಾಂಕಿತಗೊಂಡಿರುವ ಕಾಶ್ಮೀರದ ಕಣಿವೆಯಲ್ಲಿ ಅದ್ಭುತ ಸರೋವರಗಳೆಡೆಗೆ ಚಾರಣ ಕೈಗೊಂಡಿದ್ದೆವು.

ರಾಜಧಾನಿ ಶ್ರೀನಗರದ ಪ್ರಮುಖ ವೀಕ್ಷಣೀಯ ತಾಣಗಳಾದ 'ದಾಲ್ ಸರೋವರ, ಶಾಲೀಮಾರ್‌ಭಾಗ್, ಪರೀಮಹಲ್' ವೀಕ್ಷಿಸಿ ಮೂರು ಗಂಟೆಯ ಸುದೀರ್ಘ ಪ್ರಯಾಣದ ಅನಂತರ 'ಸೋನ್‌ಮಾರ್ಗ್' ತಲುಪಿದೆವು. ಸಮುದ್ರ ಮಟ್ಟದಿಂದ 7800 ಅಡಿ ಎತ್ತರದಲ್ಲಿರುವ ಈ ಪ್ರದೇಶ ಝಿಲಂ ನದಿಯ ಉಪನದಿಯಾದ 'ಸಿಂಧುನುಲ್ಲಾ' ತಟದಲ್ಲಿರುವ ಪ್ರಾಕೃತಿಕ ಸುಂದರ ತಾಣ.

ವಿವಿಧ ರಾಜ್ಯಗಳಿಂದ ಚಾರಣಕ್ಕೆ ಆಗಮಿಸಿದ್ದ ಒಟ್ಟು 24 ಸದಸ್ಯರು ನಮ್ಮ ಗುಂಪಿನಲ್ಲಿದ್ದರು. ಮರುದಿನ ನಿಗದಿತ ಸಮಯಕ್ಕೆ ನಮ್ಮ ಚಾರಣ ಪ್ರಾರಂಭವಾಯಿತು. ಜುಳುಜುಳು ನಿನಾದದೊಂದಿಗೆ ಹರಿಯುವ ಸಿಂಧೂನದಿಯ ತಟದಲ್ಲಿ ನಡಿಗೆ ಆರಂಭಿಸಿದೆವು. ಮುಗಿಲೆತ್ತರಕ್ಕೆ ಬೆಳೆದು ನಿಂತ ಹಿಮಾಲಯನ್ 'ಪೈನ್' ಮತ್ತು 'ಚೀನಾರ್' (ಮೇಪಲ್) ವೃಕ್ಷಗಳ ದಟ್ಟ ಕಾಡಿನ ಮಧ್ಯೆ ನಡೆಯುವುದು ಒಂದು ಮೋಜಿನ ಅನುಭವವೇ. ಕಣಿವೆಯ ಕೊನೆಯ ಹಿಮಾಚ್ಛಾದಿತ ಶಿಖರಗಳಾದ ಸಿರಬಲ್, ಕೋಡೊಲ್ಲೈ, ಅಮರನಾಥ ಹಾಗೂ ಮಾಚೋಯ್-ಶಿಖರ ಪಂಕ್ತಿಗಳು ಮಿರಿಮಿರಿ ಮಿಂಚುತ್ತಿದ್ದವು.



ಸ್ವಲ್ಪ ದೂರದವರೆಗೆ ನಡೆದು ಬಳಿಕ ಕಣಿವೆಗೆ ಇಳಿಯತೊಡಗಿದೆವು. ಸುಮಾರು ಮೂರು ಗಂಟೆಗಳ ಕಾಲ್ನಡಿಗೆಯ ಬಳಿಕ 'ಶೇಖ್ ದೂರ್' ಎಂಬ ಪ್ರದೇಶ ಕಾಣಿಸಿತು. ಅಲ್ಲಿಂದ ಮುಂದಕ್ಕೆ 'ಭೂರ್ಜಪತ್ರ' ಮರಗಳ ಸಮೂಹವಿರುವ ನದಿ ತಟದಲ್ಲಿ 'ನಿಚನೈ' ಎಂಬ ಸ್ಥಳವಿದೆ. ಅದು ಸಮುದ್ರ ಮಟ್ಟದಿಂದ 11500 ಅಡಿ ಎತ್ತರದಲ್ಲಿದೆ. ಹಿಮ ಪರ್ವತಗಳಿಂದ ಸುತ್ತುವರಿದ  ಈ ಪ್ರದೇಶ ಅತ್ಯಂತ ಸೊಗಸಾಗಿದೆ. ಸಂಜೆಯಾದ ಬಳಿಕ ಚಳಿ ಹೆಚ್ಚಾಗತೊಡಗಿತು.ಆವತ್ತಿನ ನಡಿಗೆಯನ್ನು ಅಲ್ಲಿಗೇ ನಿಲ್ಲಿಸಿ ಬೇಗ ನಿದ್ರೆಗೆ ಶರಣಾದೆವು.

ಮರುದಿನ ಹೆಚ್ಚಿನ ದಾರಿ ಸವೆಸಬೇಕಾದ್ದರಿಂದ ಸ್ವಲ್ಪ ಮುಂಚಿತವಾಗಿಯೇ ಬಿಡಾರದಿಂದ ಹೊರಟೆವು. ಶುಭ್ರವಾದ ಗಾಳಿ ಹಾಗೂ ಹಿತವಾದ ವಾತಾವರಣ ಮನೋಲ್ಲಾಸಕರವಾಗಿತ್ತು. ಮತ್ತೆ ಸಿಂಧೂ ನದಿ ದಾಟಿ, ನದಿಯ ಮಾರ್ಗದಲ್ಲಿಯೇ ನಡೆದೆವು. ಎರಡು ತಾಸಿನ ನಂತರ ಕಣಿವೆಯೊಂದನ್ನು ಏರಿ ಎತ್ತರದ ಸ್ಥಳ 'ನಿಚನೈ' ತಲುಪಿದೆವು. ಸಾಕಷ್ಟು ವಿಶಾಲವಾಗಿದ್ದ ಈ ಸ್ಥಳ ಹಾಗೂ ಇಲ್ಲಿಂದ ಕಾಣುವ ದೃಶ್ಯ ನಯನಮನೋಹರವಾಗಿದೆ.

ಸ್ವಲ್ಪ ಹೊತ್ತು ವಿಶ್ರಮಿಸಿ ನಂತರ ಕೆಳಮುಖವಾಗಿ ನಡೆಯಲಾರಂಭಿಸಿದೆವು. ಇಲ್ಲಿ ನಡಿಗೆ ಎಂದರೆ ಒಂದೋ ಹತ್ತುವುದು



ಇಲ್ಲವೇ ಇಳಿಯುವುದು! ದಾರಿಗೆ ಅಡ್ಡಲಾಗಿ ಹಲವೆಡೆ ಹರಿಯುವ ತೊರೆಗಳಿದ್ದವು. ಅವುಗಳನ್ನು ದಾಟಿದರೆ ಹಸಿರಿನ ಮೈದಾನಗಳು. ಸಂಜೆಯ ವೇಳೆಗೆ ನಮ್ಮ ತಂಡ 'ವಿಷನ್‌ಸಾರ್' ಸರೋವರ ತಲುಪಿತು.

ಸರೋವರವನ್ನು ಸುತ್ತುವರಿದ ಬೆಟ್ಟಸಾಲುಗಳು. ಸರೋವರದ ಸುತ್ತಲೂ ಕೆಂಪು, ಬಿಳಿ, ಹಳದಿ ಬಣ್ಣದ ಹೂಗಳು ಗಮನಸೆಳೆದುವು. ಬೀಸುವ ಗಾಳಿಗೆ ತಲೆದೂಗುತ್ತಾ ಛಾಯಾಗ್ರಾಹಕರನ್ನು ಈ ಹೂಗಳು ಕೈಬೀಸಿ ಕರೆಯುತ್ತಿದ್ದವು. ಒಂದೊಂದು ಹೂವೂ ವಿಭಿನ್ನ ಹಾಗೂ ಆಕರ್ಷಕ. 'ವಿಷನ್‌ಸಾರ್' ಸರೋವರದ ಸುತ್ತಲೂ ಅಡ್ಡಾಡುತ್ತ ವಿವಿಧ ಕೋನಗಳಲ್ಲಿ ಛಾಯಾಗ್ರಹಣದಲ್ಲಿ ತೊಡಗಿದ್ದೆವು. ಈ ವಿಶಾಲವಾದ ಸರೋವರವನ್ನು ಕ್ಯಾಮೆರಾದ ಒಂದೇ ಫ್ರೇಮ್‌ನಲ್ಲಿ ಹಿಡಿದಿಡುವುದು ಬಹಳ ಕಷ್ಟ. ಪ್ರತಿಯೊಬ್ಬರಿಗೂ ದಕ್ಕಿದ್ದು ಅವರವರಿಗೆ ಇಷ್ಟವಾದ ಒಂದೊಂದು ಭಾಗ. ಕತ್ತಲಾಗುವವರೆಗೂ ಮನದಣಿಯೆ ಸುತ್ತಾಡಿದೆವು. ಆ ಬಳಿಕ ಬಿಡಾರಗಳನ್ನು ಹೊಕ್ಕೆವು.

ಎತ್ತರವಾದ ಪರ್ವತಗಳಿಂದ ಸುತ್ತುವರಿದ ಪ್ರದೇಶವಾದ್ದರಿಂದ ಸೂರ್ಯನ ಬೆಳಕು ನೆಲ ಮುಟ್ಟುವುದು ತಡವಾಗಿಯೇ. ಸೂರ್ಯ ಮೇಲೆ ಬರುವ ಹೊತ್ತಿಗೆ ದೂರದಿಂದ ಗೋಚರಿಸುವ 'ಕಿಶನ್‌ಸಾರ್' ಶಿಖರದ ಪ್ರತಿಬಿಂಬ ಸರೋವರದಲ್ಲಿ ಮೂಡಿ ಎಲ್ಲರ ಗಮನ ಸೆಳೆಯುತ್ತಿತ್ತು.

ಇಲ್ಲಿಂದ ಹೊರಟು ಎರಡು ಗಂಟೆಯ ಕಾಲ ಏರುದಾರಿಯ ನಡಿಗೆ. ಆ ಬಳಿಕ ತಲುಪಿದ್ದು 'ಗಡ್‌ಸಾರ್' ಸರೋವರ. ಅಲ್ಲಿಗೆ ಅನತಿ ದೂರದಲ್ಲೇ 'ಕಿಶನ್‌ಸಾರ್' ಸರೋವರ ಇದೆ. ಬಿಸಿಲಿನಲ್ಲಿ ಸರೋವರದ ನೀರು ತಿಳಿ ನೀಲಿ ಹಾಗೂ ಹಸಿರು ಬಣ್ಣಗಳಲ್ಲಿ ಕಂಗೊಳಿಸುತ್ತಿತ್ತು. ಸುತ್ತಲಿನ ಪರ್ವತಗಳು ಹಾಗೂ ಸ್ವಚ್ಛಂದ ಪರಿಸರ ಕ್ಯಾಲೆಂಡರ್‌ನ ಯಾವುದೋ ಅದ್ಭುತ ಚಿತ್ರದಂತೆ ಮನದಲ್ಲಿ ಅಚ್ಚೊತ್ತಿ ನಿಲ್ಲುತ್ತದೆ.



ಅವಳಿ ಸರೋವರಗಳನ್ನು ವೀಕ್ಷಿಸಿ ಮತ್ತೆ ಏರುದಾರಿಯಲ್ಲಿ ನಡೆದು ಕಣಿವೆಯ ತುತ್ತತುದಿಯಾದ 'ಗಡ್‌ಸಾರ್ ಪಾಸ್' (1300 ಅಡಿ) ತಲುಪಿದೆವು. ಇಲ್ಲಿಂದ ಅದ್ಭುತವಾದ ದೃಶ್ಯಕಾವ್ಯವೊಂದು ಕಾಣಸಿಗುತ್ತದೆ. ಸುತ್ತಲಿನ ಕಣಿವೆ, ಪರ್ವತಗಳು ಹಾಗೂ ನಡುವೆ ಸರೋವರ! ಈ ಸ್ಥಳ ಚಾರಣದ ಹಾದಿಯಲ್ಲಿ ಅತ್ಯಂತ ಎತ್ತರದ ಪ್ರದೇಶವಾಗಿದ್ದು ದೇಶದ ರಕ್ಷಣಾ ದೃಷ್ಟಿಯಿಂದ ಪ್ರಮುಖ ಸ್ಥಳವಾಗಿದೆ. ಇಲ್ಲಿ ರಕ್ಷಣಾ ಸಿಬ್ಬಂದಿ ಬಿಡಾರ ಹೂಡಿದ್ದು, ಮುಂದೆ ಸಾಗಲು ಅವರ ಅನುಮತಿ ಪತ್ರ ಹಾಗೂ ಗುರುತಿನ ಚೀಟಿ ಅತ್ಯಗತ್ಯ. ಅವರು ನಮ್ಮೆಲ್ಲರನ್ನೂ ಸ್ವಾಗತಿಸಿ ಬಿಸಿ ಚಹಾ ಕೊಟ್ಟರು. ಜತೆಗೆ ಈ ಪ್ರದೇಶಕ್ಕೆ ಸಂಬಂಧಿಸಿದ ಮಾಹಿತಿಗಳನ್ನೂ ನೀಡಿದರು.

ಮರುದಿನ ಚಾರಣದ ಅತ್ಯಂತ ಕಠಿಣವಾದ ದಿನ. ಬೃಹದಾಕಾರದ ಕಲ್ಲುಗಳ ಮೇಲೆ ಏರುತಗ್ಗುಗಳ ಹಾದಿಯನ್ನು ಸವೆಸಿ 'ಸತ್‌ಸಾರ್' ಎಂಬ ಸರೋವರ ತಲುಪಿದೆವು. ಸುಮಾರು 13400 ಅಡಿ ಎತ್ತರದಿಂದ ಕಣಿವೆಯ ಮತ್ತೊಂದು ಬದಿಯಲ್ಲಿನ ಅವಳಿ ಸರೋವರಗಳಾದ 'ಗಂಗಾಬಾಲ್ ಮತ್ತು ನುಂದ್‌ಖೋಲ್' ಸರೋವರಗಳ ವಿಹಂಗಮ ನೋಟ ಕಾಣಿಸುತ್ತಿತ್ತು. ಇವುಗಳಲ್ಲಿ 'ಗಂಗಾಬಾಲ್' ಸರೋವರ ಅತ್ಯಂತ ವಿಶಾಲವಾದದ್ದು. ಎರಡೂ ಸರೋವರಗಳ ಮಧ್ಯೆ ಸಣ್ಣದೊಂದು ಝರಿ ಸದಾಕಾಲ ಹರಿಯುತ್ತಿರುತ್ತದೆ. ತಿಳಿ ನೀಲಿ ಬಣ್ಣದ ಈ ಸರೋವರಗಳಲ್ಲಿ 'ಟ್ರಾಂಟ್' ಎಂಬ ಮೀನುಗಳು ಹೇರಳವಾಗಿ ಕಾಣಸಿಗುತ್ತವೆ. ಹಿಮಾಲಯದ ಅತ್ಯಂತ ಎತ್ತರದ ಈ ಪ್ರದೇಶದಲ್ಲಿ ಮೈ ಮರಗಟ್ಟಿಸುವ ಚಳಿಯಲ್ಲೂ ಮೀನುಗಳು ಜೀವಿಸುತ್ತವೆ ಎನ್ನುವುದನ್ನು ನೋಡಿ ನಮಗೆ ನಿಜಕ್ಕೂ ಸೋಜಿಗವಾಯಿತು.

ಸೂರ್ಯೋದಯ ಹಾಗೂ ಸೂರ್ಯಾಸ್ತದ ಸಮಯದಲ್ಲಿ ಬದಲಾಗುವ ನೀರಿನ ಬಣ್ಣದ ಮಧ್ಯೆ ನೀರಿನಿಂದ ಮೇಲಕ್ಕೆ ಪುಟಿದೇಳುವ ಮೀನುಗಳನ್ನು ನೋಡುವುದು ಒಂದು ಅದ್ಭುತ ಅನುಭವವೇ. ಹೀಗೆ ಪುಟಿಯುವ ಮೀನುಗಳನ್ನು ಹೊಂಚು ಹಾಕುತ್ತಾ ಆಕಾಶದಲ್ಲಿ ಲಾಮಾಗೆಯರ್ ಪಕ್ಷಿಗಳು ಹಾರಾಡುತ್ತಿದ್ದುವು. ನಾವು ರಾತ್ರಿ ಅಲ್ಲಿಯೇ ತಂಗಿ ಮರುದಿನ 'ದೇವದಾರು' ಮರಗಳ ಕಾಡಿನಲ್ಲಿ ನಡೆದು ಹಸಿರು ಮೈದಾನ ತಲುಪಿದೆವು. ಇಲ್ಲಿನ 'ನರಾನಾಗ್' ಮಂದಿರವನ್ನು ವೀಕ್ಷಿಸಿದೆವು. ಅಲ್ಲಿಗೆ ನಮ್ಮ ಚಾರಣದ ದಾರಿ ಕೊನೆಗೊಂಡಂತೆಯೇ.

ಎರಡು ದಿನಗಳ ಈ ಚಾರಣದಲ್ಲಿ ನೋಡಿದ ಪ್ರಕೃತಿ ಸೌಂದರ್ಯವನ್ನು ಶಬ್ದಗಳಲ್ಲಿ ವರ್ಣಿಸುವುದು ಕಷ್ಟ. ಈ ಸೌಂದರ್ಯ, ಶುದ್ಧ ತಂಗಾಳಿ ನಮ್ಮ ಮೈಮನಸ್ಸನ್ನು ತಂಪಾಗಿಸಿದ್ದು ನಿಜ. ಅನನ್ಯ ಸರೋವರಗಳ ಮನಮೋಹಕ ನೋಟಗಳು ನಮ್ಮ ಅರಿವಿನ ಪರಿಧಿಯನ್ನೂ ವಿಸ್ತರಿಸಿದುವು. ಮನಸ್ಸಿನ ತುಂಬಾ ವರ್ಣಿಸಲಾಗದ ತೃಪ್ತಿ. ಸಂತೋಷದ ಅನುಭೂತಿ.

ಕಾಶ್ಮೀರದಿಂದ ಆಗಾಗ್ಗೆ ಅಶಾಂತಿಯ ಸುದ್ದಿಗಳೇ ಹೆಚ್ಚಾಗಿ ಕೇಳಿಬರುತ್ತವೆ. ಹೀಗಾಗಿ ಇಲ್ಲಿನ ಬಹುಭಾಗದ ಸೌಂದರ್ಯ ಪ್ರವಾಸಿಗರಿಂದ ಮರೆಯಾಗಿಯೇ ಉಳಿದಿದೆ.

ಸಾಧಾರ

## ಚಟುವಟಿಕೆಗಳು

### ಚರ್ಚಿಸಿರಿ

- "ಕಾಶ್ಮೀರದ ಸರೋವರಗಳ ತೀರದಲ್ಲಿ" ಎಂಬ ಪ್ರವಾಸಕಥನವನ್ನು ಓದಿದಿರಲ್ಲವೇ? "ಕಾಶ್ಮೀರವು ಭೂಲೋಕದ ಸ್ವರ್ಗ" ಈ ಮಾತಿನ ಬಗ್ಗೆ ನಿಮ್ಮ ಅಭಿಪ್ರಾಯವೇನು? ಚರ್ಚಿಸಿ ಟಿಪ್ಪಣಿ ಬರೆಯಿರಿ.

## ಉತ್ತರಿಸಿರಿ

- ಶ್ರೀನಗರದ ಪ್ರೇಕ್ಷಣೀಯ ಸ್ಥಳಗಳು ಯಾವುವು?
- ಚಾರಣದ ಮೊದಲ ದಿನ ನೋಡಿದ ಸ್ಥಳದ ವಿಶೇಷತೆಯೇನು?
- 'ವಿಷನ್ ಸಾರ್' ಸರೋವರದ ಸುತ್ತುಮುತ್ತಲಿನ ಪ್ರಕೃತಿ ಹೇಗೆ ಕಂಗೊಳಿಸುತ್ತಿತ್ತು?
- ಚಾರಣದ ಕೊನೆಯ ದಿನದ ಅನುಭವವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

## ಕ್ರಮೀಕರಿಸಿ ಬರೆಯಿರಿ

- ಕೆಳಗೆ ನೀಡಲಾದ ವಾಕ್ಯಗಳಲ್ಲಿ ಪದಗಳು ಅಸ್ತವ್ಯಸ್ತವಾಗಿವೆ. ಅವುಗಳನ್ನು ಯೋಗ್ಯ ರೀತಿಯಲ್ಲಿ ಕ್ರಮೀಕರಿಸಿ ಅರ್ಥಪೂರ್ಣ ವಾಕ್ಯ ಬರೆಯಿರಿ.
    - ನಮ್ಮ ಆರಂಭವಾಯಿತು ಸಮಯಕ್ಕೆ ಚಾರಣ ನಿಗದಿತ
    - ಅಲ್ಲಿಗೇ ನಿಲ್ಲಿಸಿ ನಡಿಗೆಯನ್ನು ಶರಣಾದೆವು ನಿದ್ರೆಗೆ ಬೇಗ ಆವತ್ತಿನ
    - ಸರೋವರಗಳ ಸಣ್ಣದೊಂದು ಸದಾಕಾಲ ಎರಡು ಝರಿ ಮಧ್ಯೆ ಹರಿಯುತ್ತದೆ
    - ಪ್ರದೇಶವಾದ್ದರಿಂದ ಸುತ್ತುವರಿದ ಎತ್ತರವಾದ ತಡವಾಗಿ ಬೆಳಕು ಮುಟ್ಟುವುದು ಸೂರ್ಯನ ಪರ್ವತಗಳಿಂದ

## ಪತ್ರ ಬರೆಯಿರಿ

- ನೀವು ಕೈಗೊಂಡ ಪ್ರವಾಸದ ಅನುಭವದ ಕುರಿತು ಗೆಳೆಯ ಅಥವಾ ಗೆಳತಿಗೆ ಒಂದು ಪತ್ರವನ್ನು ಬರೆಯಿರಿ.

## ವರ್ಣನೆ ಬರೆಯಿರಿ

- ಹಿಮಾಲಯದ ಸುತ್ತಮುತ್ತಲಿನ ಕಣಿವೆ, ಬೆಟ್ಟ, ಸರೋವರಗಳ ವರ್ಣನೆಯನ್ನು ಓದಿ ತಿಳಿದಿರುವಿರಿ. ಇದೇ ರೀತಿ ನೀವು ಕಂಡ ತೊರೆ ಅಥವಾ ನದಿಯ ಬಗ್ಗೆ ವರ್ಣಿಸಿ ಬರೆಯಿರಿ.

## ಆಲ್ಬಂ ತಯಾರಿಸಿರಿ

- ಪ್ರಕೃತಿ ರಮಣೀಯವಾದ ಸ್ಥಳಗಳ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿರಿ.

# ಬದುಕಿನ ಸತ್ಯ

ಹಿಂದೆ ಬಹುದೂರದ ಪಶ್ಚಿಮದೇಶವೊಂದರಲ್ಲಿ ನೂಲುವ ಉದ್ಯಮದಲ್ಲಿ ತೊಡಗಿದ್ದ ಶ್ರೀಮಂತನೊಬ್ಬನಿದ್ದ. ಅವನಿಗೆ ಫಾತಿಮ ಎಂಬ ಮಗಳಿದ್ದಳು. ಒಂದು ದಿನ ಅವನು ಫಾತಿಮಳನ್ನು ಬಳಿಗೆ ಕರೆದು ಕೂರಿಸಿಕೊಂಡು "ಮಗಳೇ, ಮಧ್ಯಸಾಗರದ ದ್ವೀಪಗಳಲ್ಲಿ ನನ್ನ ವಹಿವಾಟಿದೆ. ಆ ಕಾರಣ ನಾನು ಅಲ್ಲಿಗೆ ಪ್ರಯಾಣ ಬೆಳೆಸುವವನಿದ್ದೇನೆ. ನೀನು ಒಬ್ಬಂಟಿಯಾಗಿ ಇಲ್ಲಿರುವುದು ಕ್ಷೇಮವಲ್ಲ. ಇಬ್ಬರೂ ಜೊತೆಯಲ್ಲಿ ಹೊರಡೋಣ. ನಿನಗೆ ಅನುರೂಪನಾದ ಶ್ರೀಮಂತ ಯುವಕನು ಎಲ್ಲಿಯಾದರೂ ಕಂಡುಬಂದರೆ ನಿನ್ನ ಮದುವೆಯನ್ನು ಮಾಡಿ ಮುಗಿಸುವೆ" ಎಂದು ಹೇಳಿದನು.

ಅವರು ಅಲ್ಲಿಂದ ಹೊರಟು ಹಲವಾರು ದ್ವೀಪಗಳನ್ನು ಸುತ್ತಾಡಿದರು. ತಂದೆಯು ತನ್ನ ವ್ಯಾಪಾರದಲ್ಲಿ ತಲ್ಲೀನನಾಗಿರುತ್ತಿದ್ದ. ಫಾತಿಮ ತನಗೆ ಅನುರೂಪನಾದ ಯುವಕನ ಕನಸನ್ನು ಕಟ್ಟಿಕೊಂಡು ತಂದೆಯನ್ನು ಹಿಂಬಾಲಿಸುತ್ತಿದ್ದಳು. ಒಂದು ದಿನ ಅವರು ಕ್ರೀಟ್ ನಗರಕ್ಕೆ ಸಾಗುತ್ತಿದ್ದ ಹಡಗಿನಲ್ಲಿ ಪ್ರಯಾಣಿಸುತ್ತಿದ್ದರು. ಭಾರೀ ಚಂಡಮಾರುತವೆದ್ದು ಹಡಗು ನುಚ್ಚುನೂರಾಯಿತು. ದುರಂತದಲ್ಲಿ ಸಮುದ್ರವು ತಂದೆಯನ್ನು ನುಂಗಿ ಹಾಕಿತು. ಫಾತಿಮ ಬದುಕುಳಿದು ನಿರಾಶ್ರಿತಳಾಗಿ ಅರೆಪ್ರಜ್ಞಾವಸ್ಥೆಯಲ್ಲಿ ಅಲೆಕ್ಸಾಂಡ್ರಿಯಾದ ಕಡಲತೀರದಲ್ಲಿ ಬಿದ್ದಳು.

ಚೇತರಿಸಿಕೊಂಡು ಕಡಲ ತೀರದ ಮರಳ ಮೇಲೆ ಅಲೆದಾಡುತ್ತಿರುವಾಗ ನೇಯ್ಗೆ ವೃತ್ತಿಯಲ್ಲಿ ತೊಡಗಿದ್ದ ಕುಟುಂಬವೊಂದು ಸಂಪರ್ಕಕ್ಕೆ ಬಂತು. ಅದು ಶ್ರೀಮಂತ ಕುಟುಂಬವೇನಾಗಿರಲಿಲ್ಲ. ಆದರೂ ಅವಳ ಸ್ಥಿತಿಗತಿಯನ್ನು ಕಂಡು ಕನಿಕರಗೊಂಡು ಅವಳನ್ನು ತಮ್ಮ ಮನೆಯಲ್ಲಿಯೇ ಉಳಿಸಿಕೊಂಡರು. ಅವರ ಜೊತೆ ಕೆಲಸಮಾಡುತ್ತಾ ಫಾತಿಮ



ನೇಯ್ಗೆ ವೃತ್ತಿಯನ್ನು ಕಲಿತುಕೊಂಡಳು. ಅವಳ ಬದುಕು ಮರುಹುಟ್ಟು ಪಡೆಯಿತು. ಒಂದೆರಡು ವರ್ಷಗಳ ಸುಖದ ದಿವಸಗಳು ಹಿಂದಿನ ದಿನಗಳ ಕಹಿಯನ್ನು ಮರೆಸಿದುವು. ಆದರೆ ಅದು ಬಹುಕಾಲ ಉಳಿಯಲಿಲ್ಲ. ಒಂದು ದಿನ ಅವಳು ಕಡಲತೀರದಲ್ಲಿರುವಾಗ ಹಡಗಿನಿಂದ ಇಳಿದ ಗುಲಾಮ ವ್ಯಾಪಾರಿಗಳ ತಂಡವೊಂದು ಅವಳನ್ನು ಬಂಧಿಸಿ ಇತರ ಗುಲಾಮ ಬಂದಿಗಳೊಡನೆ ಕೊಂಡೊಯ್ದಿತು. ಫಾತಿಮ ತನ್ನ ನತದೃಷ್ಟ ಬದುಕಿನ ಬಗ್ಗೆ ಹೇಳಿಕೊಂಡು ಎಷ್ಟು ಕಣ್ಣೀರಿಟ್ಟರೂ ಅವರ ಮನಸ್ಸು ಕರಗಲಿಲ್ಲ. ನಿರ್ದಯಿಗಳಾದ ಅವರು ಅವಳನ್ನು 'ಇಸ್ತಾಂಬುಲ್' ನಗರದ ಗುಲಾಮ ಪೇಟೆಯಲ್ಲಿ ಮಾರಿಬಿಟ್ಟರು.



ಅವಳ ಜಗತ್ತು ಎರಡನೇ ಬಾರಿಗೆ ಕಳಚಿಬಿದ್ದಂತಾಗಿತ್ತು. ಸಮಾಧಾನದ ಮಾತೆಂದರೆ ಗುಲಾಮ ಪೇಟೆಯಲ್ಲಿ ವ್ಯಾಪಾರವು ಆಶಾದಾಯಕವಾಗಿರಲಿಲ್ಲ. ಕೆಲವೇ ಗಿರಾಕಿಗಳು ಬಂದಿದ್ದರು. ಒಬ್ಬನು ಹಡಗುಗಳಿಗೆ ಮರಗಂಬವನ್ನು ತಯಾರಿಸುವ ಮರದ ಕೋಠಿಯಲ್ಲಿ ಜೀತ ಮಾಡಲು ಒಬ್ಬ ಗುಲಾಮನನ್ನು ಕೊಳ್ಳಲು ಬಂದಿದ್ದ. ಹತಾಶಳಾದ ಫಾತಿಮಳ ದುಸ್ಥಿತಿಯನ್ನು ನೋಡಿ ಅವನಿಗೆ ಕನಿಕರ ಮೂಡಿತು. 'ಅವಳನ್ನು ತಾನು ಕೊಂಡುಕೊಂಡರೆ ಕನಿಷ್ಠ ಬೇರೆಯವರಿಗಿಂತ ಉತ್ತಮವಾದ ಬದುಕನ್ನು ನೀಡಬಹುದು' ಎಂದು ಯೋಚಿಸಿದ ಅವನು ಫಾತಿಮಳನ್ನು ತನ್ನ ಗುಲಾಮಳಾಗಿ ಕೊಂಡುಕೊಂಡನು.

ತನ್ನನ್ನು ಕಾಪಾಡಿದ ಮಾಲಿಕನಿಗೆ ಕೃತಜ್ಞಳಾದ ಫಾತಿಮ ಶ್ರಮವಹಿಸಿ ಹಗಲುರಾತ್ರಿ ದುಡಿದಳು. ಅವಳ ಪ್ರಾಮಾಣಿಕತೆ ಮತ್ತು ಶ್ರಮವನ್ನು ಮೆಚ್ಚಿಕೊಂಡ ಮಾಲಿಕನು ಅವಳನ್ನು ಜೀತದಿಂದ ಮುಕ್ತಗೊಳಿಸಿದನು. ಸ್ವಾತಂತ್ರ್ಯ ಪಡೆದ ಫಾತಿಮ ಅವನ ನಂಬಿಕೆಯ ಕೆಲಸಗಾರಳಾಗಿ ಅಲ್ಲಿಯೇ ಮುಂದುವರಿದಳು. ಹಿಂದಿನ ಸಂದರ್ಭಕ್ಕಿಂತ ಭಿನ್ನವಾಗಿ ಸಂತೋಷದ ಬದುಕು ಅವಳಿಗೆ ಅಲ್ಲಿ ದೊರಕಿತು.

ಒಂದು ದಿನ ಅವನು ಅವಳನ್ನು ಕರೆದು, "ಫಾತಿಮ, ಜಾವಾ ದ್ವೀಪಕ್ಕೆ ಸರಕಿನ ಹಡಗು ಹೊರಡಲಿದೆ. ಅದರಲ್ಲಿ ಹಾಯಿಗಂಬಗಳನ್ನು ಹಾಕುತ್ತೇನೆ. ಈ ಬಾರಿ ನನ್ನ ಬದಲಿಗೆ ನೀನು ಹೋಗು. ಒಳ್ಳೆಯ ಬೆಲೆಗೆ ಮಾರಾಟ ಮಾಡಿಕೊಂಡು ಬಾ" ಎಂದು ಹೇಳಿದನು. ಫಾತಿಮ ಪ್ರಯಾಣ ಬೆಳೆಸಿದಳು. ಹಡಗು ಚೀನಾ ದೇಶವನ್ನು ಸಮೀಪಿಸುತ್ತಿದ್ದಂತೆ ಭಯಂಕರ ಚಂಡಮಾರುತ ಎದ್ದು ಹಡಗನ್ನು ಛಿದ್ರಗೊಳಿಸಿತು. ಫಾತಿಮ ಮೊದಲಿನಂತೆಯೇ ಯಾವುದೋ ಅಪರಿಚಿತ ದ್ವೀಪದ ತೀರದಲ್ಲಿ ಬಂದು ಬಿದ್ದಳು. ಜೀವನದಲ್ಲಿ ತಾನು ಬಯಸಿದ ಏನೊಂದೂ ಕೈಹತ್ತದೆ ಕಣ್ಣೀರಲ್ಲಿ ಕೈತೊಳೆಯುವ ತನ್ನ

ದುಸ್ಥಿತಿಯನ್ನು ನೆನೆದು ದುಃಖಿತಳಾದಳು. "ನಾನು ಏನು ಮಾಡಲು ಹೊರಟರೂ ಅದು ಹೀಗಾಗುತ್ತದೆ. ಎಲ್ಲಾ ಕೆಡುಕುಗಳು ನನ್ನನ್ನೇ ಏಕೆ ಹಿಂಬಾಲಿಸುತ್ತಿವೆ?" ಎಂದು ಗೋಳಾಡಿದಳು. ಆದರೆ ಇದಾವುದಕ್ಕೂ ಉತ್ತರವಿರಲಿಲ್ಲ. ಕೆಲದಿನಗಳ ನಂತರ ಫಾತಿಮ ಜನವಸತಿಯ ತಾಣ ಹುಡುಕುತ್ತಾ ಅಲ್ಲಿಂದ ನಡೆದಳು. ಹಲವು ದಿನಗಳ ಅಲೆದಾಟದ ಬಳಿಕ ತಾನು ಚೀನಾದೇಶದಲ್ಲಿರುವ ಸಂಗತಿಯನ್ನು ಅವಳು ಮನಗಂಡಳು. ಅಲ್ಲಿ ಎಲ್ಲವೂ ಅವಳಿಗೆ ಅಪರಿಚಿತವಾಗಿದ್ದುವು.

ಆಗಿನ ಕಾಲಕ್ಕೆ ಚೀನಾದೇಶದಲ್ಲಿ ಗುಡಾರ ತಯಾರಿಸುವ ಕಸುಬು ತಿಳಿದಿರಲಿಲ್ಲ. ಅಪರಿಚಿತಳಾದ ಮಹಿಳೆಯೊಬ್ಬಳು ವಿದೇಶದಿಂದ ಆಗಮಿಸುವಳೆಂದೂ ತಮ್ಮ ಮಹಾರಾಜನಿಗೆ ಒಂದು ಗುಡಾರವನ್ನು ತಯಾರಿಸಿಕೊಡುವಳೆಂದೂ ಚೀನಾದಲ್ಲಿ ದಂತಕಥೆಯೊಂದು ಪ್ರಚಲಿತವಾಗಿತ್ತು. ರಾಜ್ಯವಾಳಿದ ಮಹಾರಾಜರುಗಳು ಅಂತಹ ಸದಾವಕಾಶ ಕೈತಪ್ಪಿ ಹೋಗದಿರಲೆಂದು ತಲೆಮಾರುಗಳಿಂದ ಎಚ್ಚರವಹಿಸುತ್ತಾ ಬಂದಿದ್ದರು. ಯಾರಾದರೂ ವಿದೇಶೀ ಮಹಿಳೆಯರ ಆಗಮನ ಗಮನಕ್ಕೆ ಬಂದರೆ ಕೂಡಲೇ ಅವಳನ್ನು ಆಸ್ಥಾನಕ್ಕೆ ತರುವಂತೆ ದೇಶದ ಮೂಲೆಮೂಲೆಗೂ ದೂತರ ಮೂಲಕ ಪ್ರಚಾರ ಮಾಡುತ್ತಿದ್ದರು.

ಫಾತಿಮಳ ಆಕಸ್ಮಿಕ ಆಗಮನ ಅವರಿಗೆ ಅಂತಹ ಸಂದರ್ಭ ಪ್ರತ್ಯಕ್ಷವಾದಂತೆನಿಸಿತು. ಆಸ್ಥಾನಕ್ಕೆ ಅವಳನ್ನು ಬರಮಾಡಿಕೊಂಡ ಮಹಾರಾಜರು, "ನಮಗಾಗಿ ಒಂದು ಗುಡಾರವನ್ನು ತಯಾರಿಸಿ ಕೊಡುವೆಯಾ?" ಎಂದು ಕೇಳಿದನು.

"ಸಂತೋಷದಿಂದ" ಎಂದುತ್ತರಿಸಿದಳು ಫಾತಿಮ.

ಹಗ್ಗ ಬೇಕೆಂದಳು. ಹಗ್ಗವು ಆಗಿನ್ನೂ ಅಲ್ಲಿ ಅಪರಿಚಿತ ವಸ್ತುವಾಗಿತ್ತು. ಹಿಂದೆ ನೂಲುವ ವೃತ್ತಿಯಲ್ಲಿದ್ದಾಗ ಹಗ್ಗದ ಹುರಿ ಹೆಣೆಯುವುದನ್ನು ಕಲಿತಿದ್ದಳು. ನಾರನ್ನು ತರಿಸಿ ಅದರಿಂದ ಹಗ್ಗವನ್ನು ತಯಾರಿಸಿಕೊಂಡಳು. ನಂತರ ದಪ್ಪದ ಬಟ್ಟೆಯನ್ನು ಕೇಳಿದಳು. ಅಂತಹ ಬಟ್ಟೆಯನ್ನು ಚೀನಾದೇಶದಲ್ಲಿ ಆಗ ಯಾರೂ ತಯಾರಿಸುತ್ತಿರಲಿಲ್ಲ. ಅಲೆಕ್ಸಾಂಡ್ರಿಯದಲ್ಲಿರುವಾಗ ನೇಯ್ಗೆಯನ್ನು ಕಲಿತಿದ್ದಳು. ಆ ಅನುಭವದಿಂದ ಗುಡಾರಕ್ಕೆ ಬೇಕಾಗುವ ವಿಶೇಷ ಬಟ್ಟೆಯನ್ನು ತಯಾರಿಸಿಕೊಂಡಳು. ಗುಡಾರವನ್ನು ನಿಲ್ಲಿಸಲು ಬೇಕಾದ ಕಂಬಗಳು ಕೂಡಾ ಚೀನಾದೇಶದಲ್ಲಿ ಅಪರಿಚಿತವಾಗಿದ್ದುವು. ಹಾಯಿಗಂಬ ನಿರ್ಮಾಣ ಅವಳಿಗೆ ಮೊದಲೇ ತಿಳಿದಿತ್ತು. ದೇಶಾಂತರ ಪ್ರಯಾಣಿಸುತ್ತಿದ್ದಾಗ ಬಗೆಬಗೆಯ ಗುಡಾರಗಳನ್ನು ಆಕೆ ನೋಡಿದ್ದಳು. ಹೀಗೆ ತನ್ನ ಹಿಂದಿನ ವೃತ್ತಿಗಳ ಅನುಭವಗಳನ್ನೆಲ್ಲಾ ಸಮೀಕರಿಸಿ ಗುಡಾರವನ್ನು ತಯಾರಿಸಿ ಮಹಾರಾಜನಿಗೆ ಅರ್ಪಿಸಿದಳು. ಚೀನಾದೇಶದ ಮೊದಲ ಗುಡಾರವು ಹೀಗೆ ತಯಾರಾಯಿತು.

ಮಹಾರಾಜನಿಗೆ ಅದು ನಂಬಲಾಗದ ಪವಾಡವೇ ಆಗಿತ್ತು. ಅವನು ಸಂತುಷ್ಟಗೊಂಡು, "ನಿನಗಿಷ್ಟವಾದ ಏನನ್ನಾದರೂ ಕೇಳು, ಕೊಡುತ್ತೇನೆ" ಎಂದನು. ಆ ದೇಶದಲ್ಲಿ ವಾಸವಾಗಿರಲು ಫಾತಿಮ ಅನುಮತಿ ಕೇಳಿದಳು. ಕಾಲಕ್ರಮೇಣ ಅಲ್ಲಿನ ರಾಜಕುಮಾರನನ್ನು ಮದುವೆಯಾಗಿ ಕೊನೆಯವರೆಗೂ ಸುಖದ ಜೀವನ ಸಾಗಿಸಿದಳು.

ಹಿಂದಿನ ಕಹಿ ಅನುಭವಗಳೇ ಅನಂತರದ ಸುಖ ಜೀವನಕ್ಕೆ ತಳಹದಿಯಾದದ್ದನ್ನು ಫಾತಿಮ ಆಗಾಗ್ಗೆ ನೆನಪು ಮಾಡಿಕೊಳ್ಳುತ್ತಿದ್ದಳು.

*ಶೇಖ್ ಮೊಹಮ್ಮದ್ ಜಮಾಲುದ್ದೀನ್*

## ಚಟುವಟಿಕೆಗಳು

### ಓದಿರಿ

- 'ಬದುಕಿನ ಸತ್ಯ' ಕತೆಯಲ್ಲಿ ನಿಮಗೆ ಇಷ್ಟವಾದ ಭಾಗವನ್ನು ತರಗತಿಯಲ್ಲಿ ಗಟ್ಟಿಯಾಗಿ ಓದಿರಿ. ಯಾಕೆ ಇಷ್ಟವಾಯಿತೆಂದು ಹೇಳಿರಿ.

### ಚರ್ಚಿಸಿರಿ

- ಫಾತಿಮಳ ಬದುಕಿನಲ್ಲಿ 'ಹಿಂದಿನ ಕಹಿ ಅನುಭವಗಳೇ ಮುಂದಿನ ಸುಖ ಜೀವನಕ್ಕೆ ತಳಹದಿಯಾದುವು.' ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು? ತರಗತಿಯಲ್ಲಿ ಚರ್ಚಿಸಿರಿ.

### ಉತ್ತರಿಸಿರಿ

- ತಂದೆ ಫಾತಿಮಳನ್ನು ಬಳಿಗೆ ಕರೆದು ಏನೆಂದು ಹೇಳಿದರು?
- ಅಲೆಕ್ಸಾಂಡ್ರಿಯಾದ ಕುಟುಂಬವು ಫಾತಿಮಳನ್ನು ಹೇಗೆ ನೋಡಿಕೊಂಡಿತು?
- ಚೀನಾದ ರಾಜನು ಸಂತುಷ್ಟಗೊಂಡು ಫಾತಿಮಳಲ್ಲಿ ಏನೆಂದು ಹೇಳಿದನು?
- ಚೀನಾ ದೇಶದಲ್ಲಿ ಪ್ರಚಲಿತವಾಗಿದ್ದ ದಂತಕತೆ ಯಾವುದು?
- ಚೀನಾ ದೇಶದ ಮೊದಲ ಗುಡಾರ ಹೇಗೆ ತಯಾರಾಯಿತು?

### ಕ್ರಮೀಕರಿಸಿ ಬರೆಯಿರಿ

- ಈ ಕೆಳಗಿನ ವಾಕ್ಯಗಳನ್ನು ಕ್ರಮೀಕರಿಸಿ ಬರೆಯಿರಿ.
  - "ನಮಗಾಗಿ ಒಂದು ಗುಡಾರವನ್ನು ತಯಾರಿಸಿಕೊಡುವೆಯಾ" ಎಂದು ಚೀನಾದೇಶದ ಮಹಾರಾಜನು ಕೇಳಿಕೊಂಡನು.
  - ಮಹಾರಾಜನು "ನಿನಗಿಷ್ಟವಾದ ಏನನ್ನಾದರೂ ಕೇಳು ಕೊಡುತ್ತೇನೆ" ಎಂದನು.
  - "ಎಲ್ಲಾ ಕೆಡುಕುಗಳು ನನ್ನನ್ನೇ ಯಾಕೆ ಹಿಂಬಾಲಿಸುತ್ತಿವೆ" ಎಂದು ಫಾತಿಮಳು ಗೋಳಾಡಿದಳು.
  - ದುರಂತದಲ್ಲಿ ಸಮುದ್ರವು ತಂದೆಯನ್ನು ನುಂಗಿ ಹಾಕಿತು.
  - ನಿನಗೆ ಅನುರೂಪನಾದ ಶ್ರೀಮಂತ ಯುವಕನು ಎಲ್ಲಿಯಾದರೂ ಕಂಡುಬಂದರೆ ನಿನ್ನ ಮದುವೆಯನ್ನು ಮಾಡಿ ಮುಗಿಸುವೆ.
  - ಫಾತಿಮಳ ಪ್ರಾಮಾಣಿಕತೆ ಮತ್ತು ಶ್ರಮವನ್ನು ಮೆಚ್ಚಿಕೊಂಡ ಮಾಲಿಕನು ಅವಳನ್ನು ಜೀತದಿಂದ ಮುಕ್ತಗೊಳಿಸಿದನು.
  - ಚೀನಾ ದೇಶದ ರಾಜಕುಮಾರನನ್ನು ಮದುವೆಯಾಗಿ ಕೊನೆಯ ವರೆಗೂ ಸುಖದಿಂದ ಇದ್ದಳು.

## ಸ್ವಂತವಾಕ್ಯ ಬರೆಯಿರಿ

- ಅಡಿಗೆರೆ ಎಳೆದ ಪದಗಳನ್ನು ಉಪಯೋಗಿಸಿ ಸ್ವಂತವಾಕ್ಯಗಳನ್ನು ರಚಿಸಿರಿ.
  - ರಮೇಶನು ತನ್ನ ನೇಯ್ಗೆ ಕೆಲಸದಲ್ಲಿ ತಲ್ಲೀನನಾಗಿರುತ್ತಿದ್ದನು.
  - ಫಾತಿಮಾಳಿಗೆ ಚಂಡಮಾರುತದ ಅಬ್ಬರವನ್ನು ಕಂಡಾಗ ಆಕಾಶವೇ ಕಳಚಿ ಬಿದ್ದಂತಾಯಿತು.
  - ಅಪರಿಚಿತರನ್ನು ಕಂಡು ಮಾತನಾಡಿಸುವಾಗ ಬಹಳ ಜಾಗರೂಕರಾಗಿರಬೇಕು.
  - ಕಾಡಿನ ದಾರಿಯಲ್ಲಿ ಹೋಗುತ್ತಿದ್ದಾಗ ಇದ್ದಕ್ಕಿದ್ದಂತೆ ಆನೆಯೊಂದು ಪ್ರತ್ಯಕ್ಷವಾಯಿತು.

## ಕತೆ ಪೂರ್ಣಗೊಳಿಸಿರಿ

- ಕೆಳಗಿನ ಅಪೂರ್ಣ ಕತೆಯನ್ನು ಮುಂದುವರಿಸಿ ಬರೆಯಿರಿ.

ಮಕ್ಕಳಿಗೆ ಸಮುದ್ರ ತೀರದಲ್ಲಿ ಆಡಿಆಡಿ ಹೊತ್ತು ಕಳೆದುದೇ ತಿಳಿಯಲಿಲ್ಲ. ಅಧ್ಯಾಪಕರು ಸೀಟಿ ಊದಿದರು. ಒಲ್ಲದ ಮನಸ್ಸಿನಿಂದ ಮಕ್ಕಳು ಬಸ್ಸಿನ ಕಡೆಗೆ ಹೆಜ್ಜೆಹಾಕಿದರು. ಅಧ್ಯಾಪಕರು ಒಬ್ಬೊಬ್ಬರ ಹೆಸರನ್ನು ಕರೆದು ಬಸ್ಸಿಗೆ ಹತ್ತಿಸತೊಡಗಿದರು. 'ನೂತನ್' ಎಂದು ಕರೆದಾಗ ಪ್ರತಿಕ್ರಿಯೆ ಬರಲಿಲ್ಲ. ಪುನಃ ಗಟ್ಟಿಯಾಗಿ ಕೂಗಿದರು. ಊಹುಂ, "ಮಕ್ಕಳೇ, ನೂತನ್ ಎಲ್ಲಿ?" ಅಧ್ಯಾಪಕರು ಮಕ್ಕಳಲ್ಲಿ ಪ್ರಶ್ನಿಸಿದರು. "ನೂತನ್ ಬರಲಿಲ್ಲವೇ? ನಮ್ಮೊಡನೆ ಸಮುದ್ರ ತೀರಕ್ಕೆ ಆಡಲು ಬಂದಿದ್ದನು. ಸ್ವಲ್ಪ ಹೊತ್ತಿನಲ್ಲಿ ನೀರು ಕುಡಿದು ಬರುತ್ತೇನೆಂದು ಹೊರಟಿದ್ದನು. ಮುಂದೇನಾಯಿತೋ ಎಂದು ನಮಗೆ ಗೊತ್ತಿಲ್ಲ" ವಾಣಿ ಮತ್ತು ಅರುಣ್ ಹೇಳಿದರು..........................................................................

..........................................................................................................................................

## ಊಹಿಸಿ ಬರೆಯಿರಿ

- ಅಲೆಕ್ಸಾಂಡ್ರಿಯಾದ ಕಡಲ ತೀರದಲ್ಲಿ ಅರೆಪ್ರಜ್ಞಾವಸ್ಥೆ ಸ್ಥಿತಿಯಿಂದ ಎಚ್ಚೆತ್ತ ಫಾತಿಮಳ ಮನಸ್ಸಿನಲ್ಲಿ ಮೂಡಿದ ಭಾವನೆಗಳು ಏನಾಗಿರಬಹುದು? ಊಹಿಸಿ ಬರೆಯಿರಿ.

## ಸಂದರ್ಶನ ವರದಿ ತಯಾರಿಸಿರಿ

- ನಿಮ್ಮ ಪ್ರದೇಶದಿಂದ ವಿದೇಶಗಳಿಗೆ ಹೋಗಿ ನೌಕರಿ ಮಾಡುವವರೋ, ವಾಹನಗಳಲ್ಲಿ ನೌಕರರಾಗಿ ದುಡಿಯುವವರೋ ಇರಬಹುದಲ್ಲವೇ? ಅವರನ್ನು ಸಂದರ್ಶಿಸಿ ವರದಿ ತಯಾರಿಸಿರಿ.

## ಕಲಿಕಾ ಸಾಧನೆಗಳು

- ಆಲಿಸಿ ಓದಿ ತಿಳಿದ ವಿಚಾರಗಳನ್ನು ತರ್ಕಬದ್ಧವಾಗಿ ವಿಶ್ಲೇಷಿಸಿ ಸ್ವಂತ ಅಭಿಪ್ರಾಯಗಳನ್ನು ವಾಚಿಕವಾಗಿ ಮತ್ತು ಲಿಖಿತವಾಗಿ ಪ್ರಕಟಿಸುವುದು.
- ಗದ್ಯ–ಪದ್ಯಗಳನ್ನು ಆಶಯ ಸ್ಪಷ್ಟತೆಯೊಂದಿಗೆ ನಿರರ್ಗಳವಾಗಿ ಮತ್ತು ಸ್ಫುಟತೆಯೊಂದಿಗೆ ಓದುವುದು ಮತ್ತು ಪ್ರಧಾನ ಆಶಯಗಳನ್ನು ಬಾಯ್ದೆರೆಯಾಗಿ ಮಂಡಿಸುವುದು.
- ಜನಪದಗೀತೆ, ಕವಿತೆಗಳ ರಾಗ, ತಾಳ, ಭಾವ ಎಂಬಿವುಗಳನ್ನು ಆಸ್ವಾದಿಸುವುದು, ತಾಳದೊಂದಿಗೆ ಭಾವನಾತ್ಮಕವಾಗಿ ಹಾಡಿ ಮಂಡಿಸುವುದು. ಕಂಠಪಾಠ ಮಾಡುವುದು.
- ಸ್ವಂತ ಅಭಿರುಚಿಗೆ ತಕ್ಕಂತೆ ಕಥೆ, ಕವಿತೆ, ನಾಟಕ, ಪ್ರವಾಸಕಥನ ಮೊದಲಾದ ವಿಭಿನ್ನ ವಿಭಾಗಗಳಲ್ಲಿ ಒಳಗೊಂಡ ಪುಸ್ತಕಗಳನ್ನು ಗುರುತಿಸಿ ಓದುವುದು ಮತ್ತು ಓದಿ ತಿಳಿದ ವಿಚಾರಗಳನ್ನು ವಿವಿಧ ರೀತಿಯಲ್ಲಿ ಪ್ರಕಟಪಡಿಸುವುದು.
- ಪರಿಚಿತವಾದ ವಿಷಯಗಳನ್ನು ವಸ್ತುವಾಗಿರಿಸಿಕೊಂಡು ಕಥೆ, ಕವಿತೆ ಮೊದಲಾದ ಸೃಜನಾತ್ಮಕ ರಚನೆಗಳನ್ನು ಮಾಡುವುದು.
- ನೀಡಿದ ಸಂದರ್ಭಕ್ಕೆ ಸೂಕ್ತವಾದ ವ್ಯವಹಾರ ರೂಪಗಳನ್ನು ಕಂಡುಕೊಂಡು ರಚನೆಗಳನ್ನು ಮಾಡುವುದು.
- ವಿಭಿನ್ನ ರೀತಿಯ ವ್ಯವಹಾರ ರೂಪಗಳನ್ನು ತಯಾರಿಸುವುದು. ಅವುಗಳನ್ನು ಸಂಚಿಕೆ, ಭಿತ್ತಿಪತ್ರಿಕೆ, ಹಸ್ತಪತ್ರಿಕೆ, ನಿಯತಕಾಲಿಕಗಳಲ್ಲಿ ಪ್ರಕಟಿಸುವುದು.
- ಸೃಜನಾತ್ಮಕ ರಚನೆಗಳನ್ನು ಓದಿ, ಅವುಗಳ ಪ್ರಧಾನ ಆಶಯ ಕೆಡದಂತೆ ಸಂಕ್ಷಿಪ್ತವಾಗಿ ಬರೆಯುವುದು.
- ಕಥೆ, ಕವಿತೆಗಳಲ್ಲಿ ಕಥಾಪಾತ್ರಗಳ ಮಾನಸಿಕ ಸ್ಥಿತಿ, ಅವುಗಳಿಗಿರುವ ಸ್ಥಾನ ಇತ್ಯಾದಿಗಳನ್ನು ಗುರುತಿಸಿ ಬಾಯ್ದೆರೆಯಾಗಿ ಮತ್ತು ಲಿಖಿತವಾಗಿ ಪಾತ್ರಚಿತ್ರಣ ಮಾಡುವುದು.
- ವಿವಿಧ ಕವಿತೆಗಳನ್ನು ಕಂಠಪಾಠ ಮಾಡಿ ಸೂಕ್ತವಾದ ರಾಗ, ತಾಳಗಳೊಂದಿಗೆ ಭಾವಪೂರ್ಣವಾಗಿ ಹಾಡುವುದು.
- ಪದಶುದ್ಧಿ, ವಾಕ್ಯಶುದ್ಧಿ, ಲೇಖನಚಿಹ್ನೆ ಮೊದಲಾದ ಬರವಣಿಗೆಗೆ ಅಗತ್ಯವಾದ ಅಂಶಗಳನ್ನೊಳಗೊಂಡು ಮಾಡಿದ ರಚನೆಗಳ ಮೌಲ್ಯನಿರ್ಣಯ ಮಾಡುವುದರೊಂದಿಗೆ ಉತ್ತಮಗೊಳಿಸುವುದು.
- ಸ್ವಂತ ಆಶಯಗಳನ್ನು ಶಿಷ್ಟಭಾಷೆಯಲ್ಲಿ ತಪ್ಪಿಲ್ಲದೆ ಬರೆಯುವುದು.
- ಸೃಜನಾತ್ಮಕ ರಚನೆಗಳ ಭಾವವನ್ನು ಅರ್ಥೈಸಿಕೊಂಡು ನಾಟಕ, ಭಾವಾಭಿನಯ ಮತ್ತು ಮೂಕಾಭಿನಯಗಳ ಮೂಲಕ ಮಂಡಿಸುವುದು.
- ಓದಿದ ವಿಚಾರಗಳನ್ನು ವಿಶ್ಲೇಷಿಸಿ ತನ್ನ ಅಭಿಪ್ರಾಯಗಳನ್ನು ಭಾಷಣ, ಪ್ರಬಂಧ ಮತ್ತು ಚರ್ಚೆಗಳ ಮೂಲಕ ಮಂಡಿಸುವುದು.
- ಪರಿಚಿತವಾದ ಕವಿತೆಗಳಲ್ಲಿರುವ ಬಿಂಬಕಲ್ಪನೆ, ವರ್ಣನೆ ಎಂಬಿವುಗಳನ್ನು ಗುರುತಿಸುವುದು ಮತ್ತು ವಾಚಿಕವಾಗಿ ಮಂಡಿಸುವುದು.
- ದೃಶ್ಯ–ಶ್ರಾವ್ಯ ಮಾಧ್ಯಮಗಳ ಮೂಲಕ ಗಳಿಸಿದ ವಿಚಾರಗಳನ್ನು ತನ್ನ ರಚನೆಯಲ್ಲಿ ಬಳಸುವುದು.

4

# ಜೀವನ ಕಲೆ

“ಪರೋಪಕಾರವೇ ಪುಣ್ಯ, ಪರಪೀಡೆಯೇ ಪಾಪ” ಎಂಬ ಒಂದು ಮಾತಿದೆ. ಮಾನವರ ಮಾತಿನಲ್ಲಿ ನಯವಿನಯ, ಹಿರಿಯರಲ್ಲಿ ಭಕ್ತಿಗೌರವ, ಕಿರಿಯರಲ್ಲಿ ಪ್ರೀತಿವಾತ್ಸಲ್ಯ ಇತ್ಯಾದಿ ಸದ್ಗುಣಗಳು ಇರಬೇಕಾದುದು ಅತಿ ಅಗತ್ಯ. ಇತಿಹಾಸಪೂರ್ವ ಕಾಲದಿಂದಲೇ ತಮ್ಮ ಉತ್ತಮ ಗುಣ ನಡತೆಗಳಿಂದ ಆದರ್ಶಪ್ರಾಯರಾದವರು ಎಷ್ಟೋಮಂದಿ. ಅಂಥವರು ತೋರಿಸಿದ ಹಾದಿಯಲ್ಲಿ ನಾವು ಮುನ್ನಡೆಯೋಣ.



# ತೋಳ ಮತ್ತು ಕೊಕ್ಕರೆ

ಅಡವಿಯೊಳಗೆ ಬೇಟೆಯನ್ನು
ಹುಡುಕಿಹುಡುಕಿಯೊಂದು ತೋಳ
ಕಡೆಗೆ ನೋಡಿ ಹಿಡಿದುದೊಂದು ಹುಲ್ಲೆ ಮರಿಯನು
ಒಡನೆಯದನು ತಿನ್ನುತಿರಲು
ತಡೆದು ನಿಂತಿತೊಂದು ಎಲುಬು
ನಡುವೆ ಗಂಟಲೊಳಗೆ ಬಹಳ ನೋವನೆಸಗುತ
ಎತ್ತಿ ಕುತ್ತಿಗೆಯನು ತಾನು
ಅತ್ತ ಇತ್ತ ಸುತ್ತಿಸುತ್ತಿ
ಎತ್ತ ಹೋದರೊಬ್ಬರಾದರದನು ನೋಡರು
ಸತ್ತೆನಯ್ಯೊ ನೋವಿನಿಂದ
ಇತ್ತು ತಿನಿಸ ಹರುಷಗೊಳಿಪೆ
ಕತ್ತಿನೊಳಗೆ ತಡೆದು ನಿಂತ ಎಲುಬ ತೆಗೆವರ
ಬಿದ್ದುಯೆದ್ದು ಕೂಗಲಿಂತು
ಉದ್ದ ಕಾಲ ಬಕನು ತಾನು
ಸದ್ದು ಕೇಳಿ ಬಂದು ಎಲುಬು ತೆಗೆಯಲೊಪ್ಪಿದ
ಉದ್ದವಾದ ತನ್ನ ಕೊಕ್ಕ
ನುದ್ದವಾಗಿ ನೀಡಿ ಬಾಯೊ
ಳಿದ್ದ ಎಲುಬ ಹೊರಗೆ ತೆಗೆದು ತಿನಿಸ ಕೇಳಿದ
ಸಾಕು ! ಸಾಕು! ಗಳಹ ಬೇಡ
ಕಾಕು ಕೋಳಿ ! ಸಾಕು ನಿನ್ನ
ಕೊಕ್ಕು ಹೊರಗೆ ತೆಗೆಯಬಿಟ್ಟುದೊಂದು ಸಾಲದೆ?
ಏಕೆ ಕಾಡುತಿರುವೆ ನನ್ನ !
ಜೋಕೆ ಹೆಚ್ಚು ಮಾತನಾಡೆ
ಸೊಕ್ಕನಿಳಿಪೆ ಮುಕ್ಕಿ ತಿನುವೆನೆಂದ ತೋಳನು
ಕೆಟ್ಟ ಜನರು ತಾವು ಬೀಳೆ
ಕಷ್ಟದೊಳಗೆ ಭಾಷೆ ಕೊಡುವ
ರಿಷ್ಟ ವರವನೀವೆವೆಂದು ಬಾಗಿ ನಮಿಸುತ
ಕಷ್ಟದಿಂದ ದಾಟಲಾಗಿ
ದಿಟ್ಟತನವ ತೋರ್ಪರವರು
ದುಷ್ಟ ಜನರ ಇಷ್ಟವರಕೆ ಮೆಚ್ಚಬೇಡಲೊ



*ಕೊರಡ್ಕಲ್ ಶ್ರೀನಿವಾಸ ರಾವ್*

## ಕೊರಡ್ಕಲ್ ಶ್ರೀನಿವಾಸ ರಾವ್

ಶ್ರೀನಿವಾಸ ರಾವ್ 1895 ರಲ್ಲಿ ಶೃಂಗೇರಿ ಸಮೀಪದ ಕೊರಡ್ಕಲ್ ಎಂಬ ಪುಟ್ಟ ಗ್ರಾಮದಲ್ಲಿ ಜನಿಸಿದರು.ಇವರ ತಂದೆ ವೆಂಕಟಾಚಲಯ್ಯ, ತಾಯಿ ಸುಬ್ಬಮ್ಮ. ಇವರು ಉಡುಪಿಯ ಪ್ರೌಢ ಶಾಲೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿರುವರು. ಧರ್ಮಸಂಕಟ, ಸುಂದರ ಆನಂದ ಪ್ರಭಾವಳಿ, ಮುದುಕನ ಹೆಂಡತಿ ಮುಂತಾದ ಅನೇಕ ಕೃತಿಗಳನ್ನು ರಚಿಸಿದ್ದಾರೆ. 1948 ಜೂನ್‌ತಿಂಗಳ 15ರಂದು ಅವರು ನಿಧನರಾದರು.

## ಚಟುವಟಿಕೆಗಳು

### ಹಾಡಿರಿ

- ಈ ಕಥನಕವನವನ್ನು ರಾಗವಾಗಿ ಹಾಡಿರಿ.

### ಉತ್ತರಿಸಿರಿ

- ತೋಳಕ್ಕೆ ಬಂದ ಸಂದಿಗ್ಧ ಪರಿಸ್ಥಿತಿ ಯಾವುದು?
- ತನ್ನ ಗಂಟಲಲ್ಲಿ ಸಿಲುಕಿದ ಎಲುಬನ್ನು ತೆಗೆದ ಕೊಕ್ಕರೆಗೆ ತೋಳವು ಏನೆಂದು ಹೇಳಿತು?
- ಈ ಕವನವು ನೀಡುವ ಸಂದೇಶವೇನು?

### ಕಾರಣ ಬರೆಯಿರಿ

- 'ತೋಳ ಮತ್ತು ಕೊಕ್ಕರೆ' ಕವನದಲ್ಲಿ ನಿಮಗಿಷ್ಟವಾದ ಸಾಲುಗಳನ್ನು ಬರೆಯಿರಿ. ಯಾಕೆ ಇಷ್ಟವಾಯಿತು ಎಂಬುದಕ್ಕೆ ಕಾರಣ ಕೊಡಿರಿ.

### ಶೀರ್ಷಿಕೆ ನೀಡಿರಿ

- ಈ ಕಥನ ಕವನಕ್ಕೆ ಸೂಕ್ತವೆನಿಸುವ ಇತರ ಶೀರ್ಷಿಕೆಗಳನ್ನು ನೀಡಿ ಸಮರ್ಥಿಸಿರಿ.

### ಟಿಪ್ಪಣಿ ಬರೆಯಿರಿ

- ತನಗೆ ಉಪಕಾರ ಮಾಡಿದ ಕೊಕ್ಕರೆಯನ್ನು ತೋಳವು ಕೊಂದು ತಿನ್ನಲು ಮುಂದಾದುದು ಸರಿಯೇ? ನಿಮ್ಮ ಅಭಿಪ್ರಾಯವನ್ನು ಬರೆದು ಮಂಡಿಸಿರಿ.

### ಕಥೆ ಬರೆಯಿರಿ

- ಈ ಕಥನ ಕವನವನ್ನು ಓದಿ ಅದರಲ್ಲಿ ಅಡಕವಾಗಿರುವ ಕಥೆಯನ್ನು ಬರೆಯಿರಿ.

### ಪದ ವಿಂಗಡಿಸಿರಿ

- ಈ ಪದಗಳನ್ನು ಸೂಕ್ತವಾಗಿ ವಿಂಗಡಿಸಿ ಬರೆಯಿರಿ

ಅಡವಿಯೊಳಗೆ –

ಹುಡುಕಿಯೊಂದು –

ಹೋದರೊಬ್ಬರಾದರದನು –

ವರವನೀವೆವೆಂದು –

ತೆಗೆಯಲೊಪ್ಪಿದ –

### ಹೋಲಿಸಿರಿ

- ಇಲ್ಲಿ ನೀಡಲಾದ ಕವನವನ್ನು 'ತೋಳ ಮತ್ತು ಕೊಕ್ಕರೆ' ಕವನದೊಂದಿಗೆ ಹೋಲಿಸಿ ಬರೆಯಿರಿ.

ಹಣ್ಣು ಹಣ್ಣು ಮುದುಕನೊಬ್ಬ
ಅಗೆಯುತ್ತಿದ್ದ ನೆಲವ,
ಅಗೆದು ಅಗೆದು ನೆಡುತಲಿದ್ದ
ತೆಂಗಿನೊಂದು ಗಿಡವ
ನಡೆದು ಬಳಲಿ ನೀರು ಬಯಸಿ
ಬಂದನೊಬ್ಬ ಪಥಿಕ,
ಬದಿಯ ಗಿಡದ ತೆಂಗು ನೀರ
ಕುಡಿಯೆ ಕೊಟ್ಟ ಮುದುಕ
ಇಂದು ನಾಳೆ ಉದುರವಂಥ
ಹಣ್ಣು ಎಲೆಯು ನೀನು,
ತೆಂಗಿನ ಗಿಡ ಈಗ ನೆಟ್ಟು
ಉಣ್ಣುವೆ ಫಲ ಏನು?

ಪಥಿಕನೆಸೆದ ಪ್ರಶ್ನೆ ಬಾಣ
ವನ್ನು ಮುದುಕ ತಡೆದ
ಮುದುಡಿದಂಥ ತುಟಿಗೆ ನಗುವ
ತಂದು ಹೀಗೆ ನುಡಿದ
ನೀನು ಕುಡಿದ ತೆಂಗು ನೀರ
ಗಿಡವ ತಾತ ನೆಟ್ಟ
ಬೆಳೆಸಿ ಬೆಳೆಸಿ ದೇಹ ಸುಟ್ಟು
ಫಲವ ನಮಗೆ ಬಿಟ್ಟ
ನಾನು ಈಗ ನೆಡುವ ಗಿಡವು
ಮುಂದೆ ಫಲವ ನೀಡಿ
ನಿಮಗೆ ಕಳೆದ ಹಾಗೆ ತೃಷೆಯ
ಕಳೆಯಬಹುದು ನೋಡಿ.

# ರಾಣ ಮತ್ತು ಅಕ್ಬರ

## ದೃಶ್ಯ – 1

(ಮಾತೃಭೂಮಿಯ ರಕ್ಷಣೆಗಾಗಿ ಅದೆಷ್ಟೋ ರಜಪೂತ ಯೋಧರು ಮೊಗಲರ ವಿರುದ್ಧವಾಗಿ ಹೋರಾಟ ನಡೆಸಿದರು. ಯುದ್ಧದಲ್ಲಿ ಸೋತಂತಹ ರಜಪೂತರು ಮೊಗಲರ ಕೈಸೆರೆಯಾಗಬಾರದೆಂಬ ಉದ್ದೇಶದಿಂದ ಅರಾವಳಿ ಬೆಟ್ಟದಲ್ಲಿ ಅಡಗಿಕೊಂಡರು. ಅಲ್ಲಿದ್ದುಕೊಂಡೇ ರಣತಂತ್ರವನ್ನು ರೂಪಿಸುತ್ತಿದ್ದರು. ಆ ಸಮಯದಲ್ಲಿ ರಜಪೂತ ದೊರೆ ರಾಣ ರಘುವೀರ ಸಿಂಹನ ದೂತನೊಬ್ಬ ಅಲ್ಲಿಗೆ ಬರುತ್ತಾನೆ.)

| | | |
|---|---|---|
| ದೂತ | : | ಪ್ರಭು, ತಮ್ಮ ಸನ್ನಿಧಾನಕ್ಕೆ ಪ್ರಣಾಮಗಳು. |
| ರಾಣ | : | ಸತ್ಯಪಾಲಾ...ಏನು? ಯಾಕೆ ಓಡೋಡಿಕೊಂಡು ಬಂದಿರುವೆ? ಏನು ವಿಶೇಷ? |
| ದೂತ(ಸತ್ಯಪಾಲ) | : | ಮಹಾಪ್ರಭು, ಯಾವ ನಾಲಿಗೆಯಿಂದ ಹೇಳಲಿ? ತಮ್ಮ ಏಕಮಾತ್ರ ಪುತ್ರ ಉಗ್ರವ್ಯಾಧಿಯಿಂದ ನರಳಿ ಮರಣೋನ್ಮುಖನಾಗಿರುವನು. ತಾವು ಆದಷ್ಟು ಶೀಘ್ರವಾಗಿ ಅರಮನೆಯನ್ನು ಸೇರಬೇಕು. |
| ರಾಣ | : | ಛೇ! ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಲುಕಿ ತೊಳಲಾಡುವಂತಾಯಿತಲ್ಲ. ಅರಮನೆಗೆ ಹೋದರೆ ಮೊಗಲ ಸೈನಿಕರ ಕೈಸೆರೆಯಾಗಬೇಕಾಗುತ್ತದೆ. ನನ್ನ ಏಕಮಾತ್ರ ಪುತ್ರನನ್ನು ಕೊನೆಯ ಸಲವಾದರೂ ನೋಡುವ ಭಾಗ್ಯ ನನಗಿಲ್ಲದಾಗಿ ಹೋಯಿತೇ? ಅಕ್ಬರ ಬಾದಶಹನು ನನ್ನ ತಲೆಗಾಗಿ ವಿಶೇಷ ಬಹುಮಾನವನ್ನು ಘೋಷಿಸಿರುವನು. ಈಗೇನು ಮಾಡಲಿ? |
| ಮಂತ್ರಿ | : | ಪ್ರಭು, ತಾವು ಇದುವರೆಗೆ ತೋರಿಸಿರುವ ಅಪ್ರತಿಮ ಸಾಹಸ, ಮಾಡಿದ ಅದ್ಭುತ ತ್ಯಾಗ, ಪ್ರದರ್ಶಿಸಿದ ದೇಶಭಕ್ತಿ, ಇವುಗಳನ್ನು ಕಂಡರಿಯದ ಮೂಢರೇ ನಾವು? ತಾವು ತೆರಳಿ ಒಮ್ಮೆ ಅರಮನೆಯನ್ನು ಹೊಕ್ಕು ಆ ನಮ್ಮ ಯುವರಾಜಕುಮಾರನ ಕಡೆಯ ಸಂದರ್ಶನ ಮಾಡಿ ಬನ್ನಿ. ದೇವರು ಕಾಪಾಡಲಿ. |

## ದೃಶ್ಯ – 2

(ರಾಣನು ನಂಬಿಗಸ್ಥ ಸೇವಕನೊಂದಿಗೆ ಅರಮನೆಗೆ ಹೊರಟ. ಕತ್ತಲು ಕವಿಯಿತು. ಎಲ್ಲೆಲ್ಲೂ ನಿಶ್ಶಬ್ದ. ಕೋಟೆ ಬಾಗಿಲಲ್ಲಿದ್ದ ಮೊಗಲ ಅಧಿಕಾರಿ ಸುಭಾನಖಾನನು ರಾಣನನ್ನು ತಡೆಯುವನು.)

| | | |
|---|---|---|
| ಸುಭಾನಖಾನ್ | : | ನಿಲ್ಲು, ಯಾರು ನೀನು? ಈ ನಡುರಾತ್ರಿಯಲ್ಲಿ ಎಲ್ಲಿಗೆ ಹೊರಟಿರುವೆ? |
| ರಾಣ | : | ನಾನು ರಾಣ ರಘುವೀರಸಿಂಹ. ಈ ರಾಜ್ಯದ ಅರಸ. |
| ಸುಭಾನಖಾನ್ | : | ನೀನು ರಾಣನೋ? ಅಕ್ಬರ ಬಾದಶಹನ ಅಪ್ಪಣೆಯಂತೆ ನಿನ್ನನ್ನು ಕೈಸೆರೆ ಹಿಡಿದಿದ್ದೇನೆ. (ಕಬ್ಬಿಣದ ಬೇಡಿಗಳನ್ನು ಹಿಡಿದು ರಾಣನೆದುರು ಬಂದು ನಿಲ್ಲುವನು.) |
| ರಾಣ | : | ಮೊಗಲ ಅಧಿಕಾರಿ, ನಿನ್ನ ಕರ್ತವ್ಯವನ್ನು ನೀನು ಮಾಡುವುದು ಸರಿ. ಆದರೆ ನಿನ್ನಲ್ಲಿ ನಾನು ಒಂದು ಬಿನ್ನಹವನ್ನು ಮಾಡಬಹುದೇ? |



ಸುಭಾನಖಾನ್ : ಏನದು ಹೇಳು?

ರಾಣ : ನನ್ನ ಪ್ರೀತಿಯ ಕಂದನು ಖಾಯಿಲೆಯಿಂದ ನರಳಿ ಸಾವನ್ನಪ್ಪಿಕೊಳ್ಳುವುದರಲ್ಲಿದ್ದಾನೆ. ನಾನವನನ್ನು ನೋಡಿ ಬರಬಹುದೇ? ಅವನನ್ನೊಮ್ಮೆ, ಒಂದೇಒಂದು ಸಲ, ಕಡೆಯ ಸಲ ನೋಡಿ ಹಿಂದಿರುಗುತ್ತೇನೆ. ಆಗ ನೀನು ನನ್ನನ್ನು ಬಂಧಿಸು. ಆಗಬಹುದೇ? ಈ ವೀರ ರಜಪೂತನು ಕೊಟ್ಟಮಾತಿಗೆ ಎಂದೂ ತಪ್ಪಲಾರನು.

ಸುಭಾನಖಾನ್ : (ಸುಭಾನಖಾನನ ಹೃದಯ ಕರಗಿತು) ಆಗಲಿ ರಾಣ, ನಿನ್ನ ಮಾತಿನಲ್ಲಿ ನನಗೆ ನಂಬಿಕೆ ಇದೆ. ಅರಮನೆಗೆ ಹೋಗಿ ಬಾ.

## ದೃಶ್ಯ – 3

(ರಾಣನು ತನ್ನ ಮಗನು ಮಲಗಿದ್ದ ಕೊಠಡಿಗೆ ಪ್ರವೇಶಿಸುವನು)

ರಾಣ : ಮಗನೇ ನಿನಗೇನಾಯ್ತು ? ಯಾಕೆ ಈ ರೀತಿ ಮಲಗಿಕೊಂಡಿರುವೆ? ಮಾತಾಡು ಮಗನೇ.... ಮಾತನಾಡು. ಹೇ ದೇವಾ, ನನ್ನ ಏಕಮಾತ್ರ ಪುತ್ರನನ್ನು ಉಳಿಸಿಕೊಡಲಾರೆಯಾ...? ದೀನಬಂಧು, ಆಪತ್ಬಾಂಧವ, ಕರುಣೆದೋರು. (ರಾಣನು ಕೊಠಡಿಯನ್ನು ಬಿಟ್ಟು ಹೊರಬರುವನು)

ರಾಣಿ : (ತಡೆದು ನಿಲ್ಲಿಸಿ) ಎಲ್ಲಿಗೆ ಹೊರಟಿರಿ ಈ ನಡುರಾತ್ರಿಯಲ್ಲಿ ?



| | | |
|---|---|---|
| ರಾಣ | : | ನಾನು ಮೊಗಲ ಅಧಿಕಾರಿಯ ಬಳಿಗೆ ಹೋಗುತ್ತಿದ್ದೇನೆ. ನವಾಬನ ಕೈಸೆರೆಯಾಗಿದ್ದೇನೆ. |
| ರಾಣಿ | : | ಪ್ರಾಣೇಶ್ವರಾ, ನಮ್ಮ ಮಗುವಿನ ಸ್ಥಿತಿಯನ್ನೊಮ್ಮೆ ನೋಡಿ. ಈ ಸಮಯದಲ್ಲಿ ನಮ್ಮನ್ನು ಅನಾಥರನ್ನಾಗಿಸಿ ಬಿಟ್ಟು ಹೋಗುವಿರೇ? ಬೇಡ ಸ್ವಾಮಿ, ಬೇಡ. |
| ರಾಣ | : | ಪ್ರಿಯೇ, ನಮ್ಮ ಕಂದನನ್ನು ಕಾಯಲು ಕರುಣಾಳು ಪರಮಾತ್ಮನಿಲ್ಲವೇ? ಅಧಿಕಾರಿಗಳಿಗೆ ನಾನು ವಚನ ಕೊಟ್ಟಿರುವೆನು. ಅದನ್ನು ಪರಿಪಾಲಿಸುತ್ತಿರುವೆನು. |
| ರಾಣಿ | : | ಸ್ವಾಮಿ, ಈ ರೀತಿ ನಮ್ಮ ಪ್ರಾಣವನ್ನು ಶತ್ರುವಿನ ವಶದಲ್ಲಿ ಒಪ್ಪಿಸುವಿರೇನು? ಅದರ ಬದಲಿಗೆ ಹಿಂದಿರುವ ರಹಸ್ಯದ್ವಾರದಿಂದ ಹೊರಗೆ ಹೋಗಬಾರದೇ? |
| ರಾಣ | : | ಏನು! ನನ್ನ ಅರಮನೆಯಿಂದಲೇ ನಾನು ಓರ್ವ ಅಧಮ ಕಳ್ಳನಂತೆ ತಲೆತಪ್ಪಿಸಿಕೊಂಡು ಓಡಿ ಹೋಗಲೇ? ರಜಪೂತ ವೀರಪತ್ನಿಯಾದ ನಿನ್ನ ಬಾಯಿಯಿಂದಲೇ ಇಂಥ ಮಾತುಗಳೇ? ಛೇ! ಸತ್ಯಕ್ಕೂ ನ್ಯಾಯಕ್ಕೂ ಹೆದರಿ ನಡೆಯದ ಬಾಳು ಅದೊಂದು ಬಾಳೇ? ಪ್ರಪಂಚವೇ ತಲೆಕೆಳಗಾಗಲಿ ಕೊಟ್ಟ ವಚನವನ್ನು ಪಾಲಿಸುವುದಕ್ಕಿಂತ ರಜಪೂತವೀರನಿಗೆ ಮತ್ತೊಂದು ಹಿರಿದಾದ ಕರ್ತವ್ಯವಿಲ್ಲ. (ರಾಣನು ಸರಸರನೆ ಹೊರಟುಹೋಗುವನು) |

## ದೃಶ್ಯ – 4

(ರಾಣನು ಕೋಟೆಯ ಬಾಗಿಲಿಗೆ ಬಂದು ಸೇರುವನು)

ರಾಣ : ಖಾನ್ ಸಾಹೇಬರೇ, ನನ್ನ ಕರ್ತವ್ಯವನ್ನು ಮುಗಿಸಿದೆ. ನನ್ನನ್ನು ನೀವು ಬಂಧಿಸಬಹುದು.

ಸುಭಾನಖಾನ್ : (ಆಶ್ಚರ್ಯದಿಂದ) ಘನಾಢ್ಯ ರಾಣ, ನೀನು ಕೊಟ್ಟ ಮಾತಿನಂತೆ ನಡೆದುಕೊಂಡಿದ್ದೀಯೇ ನಿನ್ನನ್ನು ಬಂಧಿಸಲು ನನ್ನ ಮನಸ್ಸೊಪ್ಪದು.

ರಾಣ : ನಿಮ್ಮ ಬಾದಶಹರ ಅಪ್ಪಣೆಯನ್ನು ನೆರವೇರಿಸಬೇಕಲ್ಲವೇ? ಅದು ನಿಮ್ಮ ಕರ್ತವ್ಯವಲ್ಲವೇ?

ಸುಭಾನಖಾನ್ : ಕರ್ತವ್ಯ ನಿಜ, ಆದರೆ ಅದಕ್ಕೂ ಹೆಚ್ಚಿನ ಕಟ್ಟಳೆಯೊಂದಿರುವುದು. ಅದು ಆ ಜಗದೀಶನ ಕಟ್ಟಳೆ. ಅದನ್ನು ನಾನು ಮರೆಯಲೇ? ನಿನ್ನನ್ನು ಬಂಧಿಸುವಷ್ಟು ಅಧಮ ನಾನಲ್ಲ. ಹೋಗು ನಿನ್ನಿಷ್ಟದಂತೆ ಹೋಗು.

ರಾಣ : ಖಾನ್ ಸಾಹೇಬರೇ, ಇಂದು ನೀವು ನನ್ನ ಪ್ರಾಣವನ್ನು ರಕ್ಷಿಸಿದಿರಿ. ಭಗವಂತನ ಕೃಪೆಯಿಂದ ಇದಕ್ಕೆ ಪ್ರತ್ಯುಪಕಾರ ಮಾಡುವ ಪುಣ್ಯ ನನಗೆ ಒದಗಲಿ ಎಂಬುದೇ ನನ್ನ ಪ್ರಾರ್ಥನೆ. (ರಾಣ ತಪ್ಪಿಸಿಕೊಂಡು ಹೋಗುವನು)

## ದೃಶ್ಯ – 5

(ವಿಚಾರಣೆ ನಡೆಯುತ್ತಿದೆ. ಒಂದು ಕಡೆ ಸುಭಾನಖಾನ ತಲೆತಗ್ಗಿಸಿ ನಿಂತುಕೊಳ್ಳುವನು)

ಸೇನಾಧಿಪತಿ : ಸುಭಾನ್‌ಖಾನ್, ನಿನ್ನ ವರ್ತನೆಯ ಬಗ್ಗೆ ನೀನೇನು ಹೇಳುತ್ತೀಯೇ? ಬಾದಶಹರ ಉಪ್ಪು ತಿಂದು ನೀನವರಿಗೆ ಎರಡುಬಗೆದೆಯಲ್ಲವೇ? ಚಕ್ರವರ್ತಿಯ ಪರಮವೈರಿಯಾದ ರಾಣನನ್ನು ಕೈಸೆರೆಹಿಡಿಯಲು ನಾವು ಪ್ರಯತ್ನಿಸುತ್ತಿರುವಾಗ, ರಾಣನು ಕೈಗೆ ಸಿಕ್ಕಾಗ ಅವನನ್ನು ಸೆರೆಹಿಡಿಯದೆ ಬಿಟ್ಟುಬಿಟ್ಟೆಯಲ್ಲಾ. ನೀನು ರಾಜದ್ರೋಹಿ. ನಿನಗೆ ಮರಣದಂಡನೆಯೇ ಸರಿಯಾದ ಶಿಕ್ಷೆ.

ಸುಭಾನಖಾನ್ : ಆ ದಂಡನೆಯನ್ನು ನಾನು ಸಂತೋಷದಿಂದ ಸ್ವೀಕರಿಸುತ್ತೇನೆ. ರಾಜ್ಯದ ದೃಷ್ಟಿಯಿಂದ ನಾನು ಮಾಡಿದುದು ತಪ್ಪಾದರೂ ಮಾನವೀಯ ದೃಷ್ಟಿಯಿಂದ ಸರಿಯೇ ಆಗಿದೆ.

ಸೇನಾಧಿಪತಿ : ಯಾರಲ್ಲಿ ? ಇವನಿಗೆ ಮರಣದಂಡನೆ ಶಿಕ್ಷೆಯನ್ನು ವಿಧಿಸಿರಿ.

(ರಾಣನ ಪ್ರವೇಶ)

ರಾಣ : ಸೇನಾಧಿಪತಿ, ಇದೋ ರಾಣ ರಘುವೀರಸಿಂಹನು ನಿಮ್ಮ ಮುಂದೆ ನಿಂತಿರುವನು. ನನ್ನನ್ನು ಬಂಧಿಸಿರಿ. ಆದರೆ ಈ ಸುಭಾನಖಾನನು ನಿರ್ದೋಷಿ. ಅವನನ್ನು ಬಿಟ್ಟುಬಿಡಿ.

ಸೇನಾಧಿಪತಿ : ಒಳ್ಳೆಯದೇ ಆಯಿತು. ಈ ಖಾನನೊಂದಿಗೆ ನಿನ್ನನ್ನೂ ತಲೆಕಡಿದು ಬಾದಶಹನ ಬಳಿಗೆ ಕೊಂಡೊಯ್ಯುವೆನು.



| | | |
|---|---|---|
| ರಾಣ | : | ಸೇನಾಧಿಪತಿಗಳೇ, ಮರಣಕ್ಕಂಜುವ ಹೇಡಿ ಈ ರಾಣನೆಂದು ತಿಳಿಯಬೇಡಿ. ಬಾದಶಹನಿಗೆ ಬೇಕಾದುದು ನಾನೋ ನನ್ನ ತಲೆಯೋ? ಅದನ್ನು ಸ್ಪಷ್ಟವಾಗಿ ವಿಚಾರಿಸಿ ತಿಳಿದುಕೊಳ್ಳಿ. (ಅಕ್ಬರ ಬಾದಶಹನ ಆಗಮನ) |
| ಬಾದಶಹ | : | (ಎಲ್ಲರೂ ಎದ್ದು ನಿಂತು ಗೌರವಿಸುವರು) ಖಾನ್ ಸಾಹೇಬ, ನೀನು ತಪ್ಪಿತಸ್ಥನಲ್ಲ. ನೀನು ಮಾಡಿದ್ದು ರಾಜದ್ರೋಹವಲ್ಲ. ನಿನ್ನ ಮಾನವೀಯ ಗುಣಗಳಿಗೆ ಮೆಚ್ಚಿದ್ದೇನೆ. |
| ಸುಭಾನಖಾನ್ | : | ತಮ್ಮಾಜ್ಞೆಯನ್ನು ಶಿರಸಾವಹಿಸುತ್ತೇನೆ. |
| ಬಾದಶಹ | : | ರಾಣ, ನಿನ್ನ ಧೈರ್ಯಸಾಹಸಗಳನ್ನು ಮೆಚ್ಚಿದ್ದೇನೆ. ಈ ಪೃಥ್ವಿಯಲ್ಲಿ ನಿನ್ನಂಥ ಶುದ್ಧಾತ್ಮರನ್ನು ಕಾಣುವುದು ಅಪೂರ್ವವೇ ಸರಿ. |
| ರಾಣ | : | (ಪ್ರಣಾಮ ಮಾಡುವನು) ಚಕ್ರವರ್ತಿ,ತಾವು ಇಷ್ಟು ವರ್ಷ ಹೆಣಗಾಡಿದರೂ ತಮ್ಮ ಸೈನಿಕರಿಗೆ ನನ್ನನ್ನು ಗೆಲ್ಲಲಾಗಲಿಲ್ಲ. ಆದರೆ ಇಂದು ತಾವು ತಮ್ಮ ಪ್ರೀತಿವಾತ್ಸಲ್ಯ ಹಾಗೂ ಮೃದು ಮಧುರವಾಣಿಗಳಿಂದ ನನ್ನ ಹೃದಯವನ್ನು ಗೆದ್ದುಕೊಂಡಿರುವಿರಿ. ನಿಮಗೆ ನಾನು ಕೃತಜ್ಞ. ಇಂದಿನಿಂದ ನಾನು ಎಂದೆಂದಿಗೂ ತಮ್ಮವನೇ. (ಆಲಿಂಗಿಸಿಕೊಳ್ಳುವರು) |

(ತೆರೆ ಬೀಳುವುದು)

## ಚಟುವಟಿಕೆಗಳು

### ಚರ್ಚಿಸಿರಿ

- ಸುಭಾನಖಾನನು ರಾಣನನ್ನು ಬಂಧಿಸದಿರುವುದು ಸರಿಯೇ? ನಿಮ್ಮ ಅಭಿಪ್ರಾಯವೇನು? ತರಗತಿಯಲ್ಲಿ ಚರ್ಚಿಸಿರಿ.

### ಉತ್ತರಿಸಿರಿ

- ರಾಣ ರಘುವೀರಸಿಂಹನಿಗೆ ಒದಗಿದ ಸಂದಿಗ್ಧ ಪರಿಸ್ಥಿತಿ ಯಾವುದು?
- ಮಂತ್ರಿಯು ರಾಣನಿಗೆ ನೀಡಿದ ಸಲಹೆಯೇನು ?
- ಮಗುವಿನ ದೇಹಸ್ಥಿತಿಯನ್ನು ಕಂಡು ರಾಣನು ತನ್ನ ದುಃಖವನ್ನು ಹೇಗೆ ವ್ಯಕ್ತಪಡಿಸಿದನು ?
- ರಾಣನು ಅಕ್ಬರನಿಗೆ ಪ್ರಣಾಮ ಮಾಡಿ ಹೇಳಿದ ಮಾತುಗಳು ಯಾವುವು ?

### ಸಂದರ್ಭ ತಿಳಿಸಿರಿ

- ಈ ಮಾತುಗಳನ್ನು ಹೇಳಿದ ಸಂದರ್ಭವನ್ನು ಬರೆಯಿರಿ.
  - "ನಿಲ್ಲು, ಯಾರು ನೀನು? ಈ ನಡುರಾತ್ರಿಯಲ್ಲಿ ಎಲ್ಲಿಗೆ ಹೊರಟಿರುವೆ?"
  - "ಪ್ರಿಯೇ ನಮ್ಮ ಕಂದನನ್ನು ಕಾಪಾಡಲು ಕರುಣಾಳು ಪರಮಾತ್ಮನಿಲ್ಲವೇ?"
  - "ಬಾದಶಹನ ಉಪ್ಪು ತಿಂದು ನೀನವರಿಗೆ ಎರಡು ಬಗೆದೆಯಲ್ಲವೇ?"
  - "ಬಾದಶಹನಿಗೆ ಬೇಕಾದುದು ನಾನೋ ನನ್ನ ತಲೆಯೋ? ಸ್ಪಷ್ಟವಾಗಿ ವಿಚಾರಿಸಿ ತಿಳಿದುಕೊಳ್ಳಿ"

### ಪಾತ್ರಚಿತ್ರಣ ಬರೆಯಿರಿ

- ಈ ನಾಟಕದಲ್ಲಿ ಬರುವ ಪಾತ್ರಗಳು ಯಾವುವು ? ಅವುಗಳಲ್ಲಿ ನಿಮಗಿಷ್ಟವಾದ ಪಾತ್ರ ಯಾವುದು? ಆ ಪಾತ್ರದ ಪಾತ್ರಚಿತ್ರಣ ಮಾಡಿರಿ.

### ಊಹಿಸಿ ಬರೆಯಿರಿ

- ಸುಭಾನಖಾನನು ರಾಣನನ್ನು ಬಂಧಿಸುತ್ತಿದ್ದರೆ ಏನಾಗುತ್ತಿತ್ತೆಂದು ಊಹಿಸಿ ಬರೆಯಿರಿ.

### ಟಿಪ್ಪಣಿ ಬರೆಯಿರಿ

- "ನುಡಿದಂತೆ ನಡೆಯುವುದು ಮಾನವಧರ್ಮವಲ್ಲವೇ?" ನಿಮ್ಮ ಜೀವನದಲ್ಲೂ ಇಂತಹ ಸಂದರ್ಭಗಳು ಬಂದಿರಬಹುದು. ನಿಮಗಾದ ಅನುಭವವನ್ನು ಬರೆಯಿರಿ.

### ಕಥೆಯಾಗಿ ಬದಲಾಯಿಸಿರಿ

- ರಾಣ ಮತ್ತು ಅಕ್ಬರ ನಾಟಕವನ್ನು ಕಥೆಯ ರೂಪದಲ್ಲಿ ಬರೆದು ಮಂಡಿಸಿರಿ.

### ಅಭಿನಯಿಸಿರಿ

- ಪಾತ್ರಗಳನ್ನು ಹಂಚಿಕೊಂಡು ಈ ನಾಟಕವನ್ನು ಅಭಿನಯಿಸಿರಿ.

# ನಿರೀಕ್ಷೆ

ರೇಶ್ಮೆಯಂತೆ ಮೃದುವಾದ ಜರತಾರಿ ಅಂಚಿನ ಸೀರೆಯಲ್ಲಿ ಕಂಗೊಳಿಸುತ್ತಿರುವ ಭೂಮಾತೆಯ ಸೌಂದರ್ಯವು ಮನಸೂರೆಗೊಳ್ಳುತ್ತಿತ್ತು. ಮರಗಿಡಗಳು ಚಿನ್ನದಂತಹ ಚಿಗುರು ಹೊತ್ತು ಮಿಂಚುತ್ತಿದ್ದುವು. ಸುಗಂಧಭರಿತ ಹೂಗಳ ರಾಶಿ ಚೆಲ್ಲಿತ್ತು. ತನಿವಣ್ಣುಗಳ ಭಾರದಿಂದ ಗಿಡಗಳು ಬಾಗಿದ್ದುವು. ನವಿಲು ಗರಿಬಿಚ್ಚಿ ವಿನೂತನ ಭಂಗಿಯಲ್ಲಿ ನರ್ತಿಸುತ್ತಿತ್ತು. ಗಿಳಿ, ಕೋಗಿಲೆ, ಕಾಗೆ, ಗೂಗೆ, ಗುಬ್ಬಿ, ಗೊರವಂಕ, ಬೆಳ್ಳಕ್ಕಿ, ಪಾರಿವಾಳ ಹೀಗೆ ವಿಧವಿಧ ಪಕ್ಷಿಸಂಕುಲ ಸ್ವಚ್ಛಂದವಾಗಿ ವಿಹರಿಸುತ್ತಾ ಕಲನಾದಗೈಯ್ಯುತ್ತಿದ್ದುವು. ಜಿಂಕೆ–ಹುಲಿ, ಆನೆ–ಸಿಂಹ, ಹಾವು–ಮುಂಗುಸಿ, ನರಿ–ತೋಳ, ಚಿರತೆ–ಸಾರಂಗ ಹೀಗೆ ಎಲ್ಲಾ ಪ್ರಾಣಿಗಳು ಪರಸ್ಪರ ದ್ವೇಷ ಮರೆತು ಸ್ನೇಹದಿಂದ ಸಂಚರಿಸುತ್ತಿದ್ದುವು. ಪಂಪಾ ಸರೋವರದ ಮೇಲಿನಿಂದ ಹಾದು ಬಂದ ತಂಗಾಳಿ ಮೈಮನಗಳಿಗೆ ಮುದ ನೀಡುತ್ತಿತ್ತು. ಆ ಸರೋವರದಲ್ಲಿ ಒತ್ತೊತ್ತಾಗಿ ಅರಳಿದ್ದ ಹಲವಾರು ಬಗೆಯ ಪದ್ಮಗಳೂ ಸೌಗಂಧಿಕಾ ಪುಷ್ಪಗಳೂ ನಯನ ಮನೋಹರವೆನಿಸಿದ್ದುವು. ಸುತ್ತಲೂ ಮಾವು, ಆಲ, ಅಶೋಕ, ಕೇದಗೆ, ತಾಳೆ ಮುಂತಾದ ಮರಗಳು ಸೊಂಪಾಗಿ ಬೆಳೆದುನಿಂತು ಕಣ್ಣಿಗೆ ಹಬ್ಬವನ್ನುಂಟುಮಾಡುತ್ತಿದ್ದುವು.

ಅದೇ ಪವಿತ್ರ ಪಂಪಾ ಸರೋವರದ ದಂಡೆಯ ಮೇಲೆ ಮತಂಗ ಮಹರ್ಷಿಗಳ ಪುಣ್ಯಾಶ್ರಮವಿತ್ತು. ಸುತ್ತಲೂ ವ್ಯಾಪಿಸಿರುವ ವನವೇ ಮತಂಗವನ. ಅಲ್ಲೊಂದು ಒಂಟಿ ಪರ್ಣಕುಟಿ. ಅಲ್ಲಿ ಮಹಾತಪಸ್ವಿಗಳೂ ತ್ರಿಕಾಲಜ್ಞಾನಿಗಳೂ ಆಗಿದ್ದ ಮತಂಗ ಮಹರ್ಷಿಗಳು ನೂರಾರು ಶಿಷ್ಯರಿಗೆ ವಿದ್ಯಾದಾನ ಮಾಡುತ್ತಾ ವಾಸಿಸುತ್ತಿದ್ದರು. ಅವರು ಸಹೃದಯತೆ, ವಿನಯಶೀಲತೆ, ತಾಳ್ಮೆ ಮುಂತಾದ ಸದ್ಗುಣಗಳಿಂದ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದರು.



ಒಂದು ದಿನ ಧ್ಯಾನ ಮುಗಿಸಿ ಕಣ್ತೆರೆದಾಗ ಸಾಷ್ಟಾಂಗ ನಮಸ್ಕರಿಸುತ್ತಿದ್ದ ಓರ್ವ ಬೇಡತಿಯನ್ನು ಮತಂಗಮುನಿಯು ಕಂಡರು. ತ್ರಿಕಾಲಜ್ಞಾನಿಗಳಾಗಿದ್ದ ಅವರಿಗೆ ಅವಳ ಬಗ್ಗೆ ತಿಳಿಯಲು ಕಷ್ಟವಾಗಲಿಲ್ಲ. ಆದರೂ ಅದನ್ನು ತೋರ್ಪಡಿಸದೆ "ಮಗಳೇ ಏಳು. ನಿನಗೇನಾಗಬೇಕು?" ಎಂದು ಪ್ರಶ್ನಿಸಿದರು. ಅವಳು ಎಷ್ಟು ಹೊತ್ತು ಸಾಷ್ಟಾಂಗ ನಮಸ್ಕರಿಸಿದ್ದಳೋ ಅವಳಿಗೇ ಗೊತ್ತಿರಲಿಲ್ಲ. ಮಹರ್ಷಿಗಳ ಮಧುರ ಧ್ವನಿ ಕಿವಿಗೆ ಬೀಳುತ್ತಲೇ ಎದ್ದು ಭಕ್ತಿಯಿಂದ ಕೈಮುಗಿದು ನಿಂತಳು. ಮತಂಗ ಋಷಿಗಳ ಪ್ರಶಾಂತ ಮುಖಭಾವವನ್ನು ನೋಡುತ್ತಾ ಮೈಮರೆತಳು.

"ಇಲ್ಲಿಗೆ ಏಕೆ ಬಂದೆ? ನನ್ನಿಂದ ಏನಾಗಬೇಕು?" ಮತಂಗರು ಕೇಳಿದರು.

ಒಮ್ಮೆಲೆ ಎಚ್ಚೆತ್ತ ಬೇಡತಿ, "ನಾನು ಈ ಕಾಡಿನ ಬೇಡನ ಮಗಳು. ಪ್ರಾಣಿಗಳನ್ನು ಬೇಟೆಯಾಡಿ ತಿನ್ನುವುದು ನನಗೆ ಸರಿ ತೋರುವುದಿಲ್ಲ. ನನಗೆ ಈ ವೃತ್ತಿಯಲ್ಲಿ ವಿರಕ್ತಿ ಮೂಡಿದೆ. ನನಗೆ ದೇವರನ್ನು ಕುರಿತು ತಪಸ್ಸು ಮಾಡಲೂ ಯಜ್ಞ ಯಾಗಾದಿಗಳನ್ನು ಮಾಡಲೂ ಸಾಮರ್ಥ್ಯವಿಲ್ಲ. ತಾವು ನಿತ್ಯ ಯಜ್ಞಯಾಗಾದಿಗಳನ್ನು ಗೈದು ಲೋಕ ಕಲ್ಯಾಣ ಮಾಡುತ್ತಿರುವಿರಿ. ತಮ್ಮ ಸತ್ಕಾರ್ಯಗಳಲ್ಲಿ ನಾನು ಸಹಾಯ ಮಾಡಬೇಕೆಂದಿದ್ದೇನೆ. ದಯವಿಟ್ಟು ನನ್ನನ್ನು ತಾವು ಶಿಷ್ಯೆಯಾಗಿ ಸ್ವೀಕರಿಸಿದರೆ ಕೃತಾರ್ಥಳಾಗುವೆನು" ಎಂದು ವಿನೀತಳಾಗಿ ನಿವೇದಿಸಿಕೊಂಡಳು.

"ನಿನ್ನ ಇಚ್ಛೆಯಂತೆ ಆಗಲಿ" ಎಂದು ಹರಸಿದ ಅವರು ಕುಲಭೇದ ತೋರದೆ ಶಬರಿಯನ್ನು ಶಿಷ್ಯೆಯಾಗಿ ಸ್ವೀಕರಿಸಿದರು. ಅಂದಿನಿಂದ ಶಬರಿಯು ಇತರ ಶಿಷ್ಯರಂತೆ ಮತಂಗ ಮುನಿಗಳ ಸೇವೆ ಮಾಡತೊಡಗಿದಳು. ಆಶ್ರಮವನ್ನೂ ಅದರ ಪರಿಸರವನ್ನೂ ಸದಾ ಸ್ವಚ್ಛಗೊಳಿಸುತ್ತಿದ್ದಳು. ಯಾಗಕ್ಕೆ ಬೇಕಾದ ದರ್ಭೆ, ಸಮಿತ್ತು, ಕಟ್ಟಿಗೆಗಳನ್ನು ತಂದು ಕೊಡುತ್ತಿದ್ದಳು. ಮಹರ್ಷಿಗಳ ಧ್ಯಾನಕ್ಕೆ ಯಾವುದೇ ಅಡ್ಡಿಆತಂಕಗಳು ಉಂಟಾಗದಂತೆ ನೋಡಿಕೊಳ್ಳುತ್ತಿದ್ದಳು. ಮತಂಗರು ನೀಡುತ್ತಿದ್ದ ಹಣ್ಣುಗಳನ್ನೇ 'ಪ್ರಸಾದ' ಎಂದು ಸ್ವೀಕರಿಸಿ ಸೇವಿಸುತ್ತಿದ್ದಳು.

ಹೀಗೆ ವರ್ಷಗಳು ಉರುಳಿದವು. ಒಂದು ದಿನ ಮತಂಗ ಮಹರ್ಷಿಗಳು ಶಿಷ್ಯರನ್ನು ಕರೆದು "ನಾನು ದೇವರ ಪಾದ ಸೇರುವ ಕಾಲ ಸಮೀಪಿಸಿದೆ. ನೀವು ಸತ್ಕಾರ್ಯಗಳನ್ನು ಮಾಡುತ್ತಾ ಲೋಕಹಿತವನ್ನು ಮಾಡಿರಿ" ಎಂದರು. ಆಗ ಶಬರಿಯು ಮತಂಗರ ಪಾದಗಳಿಗೆ ಬಿದ್ದು "ಗುರುದೇವಾ, ನಾನೂ ತಮ್ಮೊಂದಿಗೆ ಬರುವೆ. ಇದುವರೆಗೆ ತಮ್ಮ ಪಾದಸೇವೆ ಮಾಡಿಕೊಂಡಿದ್ದ ಈ ನಿಮ್ಮ ಶಿಷ್ಯೆಯನ್ನು ಬಿಟ್ಟು ಹೋಗಬಾರದು" ಎಂದಳು. ಶಿಷ್ಯೆಯ ಮಾತನ್ನು ಅರ್ಧದಲ್ಲಿಯೇ ತಡೆದು ಮತಂಗ ಮಹರ್ಷಿಗಳು ಉಸುರಿದರು " ಶಬರಿ, ನೀನಿನ್ನೂ ಹೊರಡುವ ಕಾಲ ಬಂದಿಲ್ಲ ಮಗಳೇ. ಇಕ್ಷ್ವಾಕು ವಂಶದ ಸುಪುತ್ರ, ಅಯೋಧ್ಯೆಯ ಶ್ರೀರಾಮಚಂದ್ರನು ಸೀತೆಯನ್ನು ಅರಸುತ್ತಾ ಇಲ್ಲಿಗೆ ಬರುತ್ತಾನೆ. ಅದುವರೆಗೆ ತಪಸ್ಸು ಮಾಡಿಕೊಂಡು ಇಲ್ಲಿಯೇ ಕಾಯುತ್ತಿರು. ಶ್ರೀರಾಮನಿಗೆ ಆತಿಥ್ಯ ನೀಡಿ ಉಪಚರಿಸು. ಅವನಿಂದ ಅನುಗ್ರಹ ಪಡೆದು ನೀನು ಮುಕ್ತಿ ಹೊಂದುವೆ" ಎಂದರು. ಶಬರಿಯು 'ಒಪ್ಪಿಗೆ' ಎಂದು ತಲೆಯಲ್ಲಾಡಿಸಿದಳು. ಮತಂಗರು ಧ್ಯಾನಕ್ಕೆ ಕುಳಿತರು. ಶಿಷ್ಯರು ವೀಕ್ಷಿಸುತ್ತಿದ್ದಂತೆ ದಿವ್ಯಜ್ಯೋತಿಯೊಂದು ಮತಂಗ ಮಹರ್ಷಿಗಳ ಶರೀರದಿಂದ ಹೊರಹೊಮ್ಮಿ ದಿಗಂತದಲ್ಲಿ ಲೀನವಾಯಿತು.

ಅಂದಿನಿಂದ ಶಬರಿ ಗುರುಗಳ ಆಣತಿಯಂತೆ ರಾಮನ ಬರವಿಗಾಗಿ ಕಾಯತೊಡಗಿದಳು. ಕಾಯುವ ಕಷ್ಟವನ್ನು ದೇವರೇ ಬಲ್ಲ. ಅನುಭವಿಸಿದವನೇ ಹೇಳಬಲ್ಲ. ಆದರೆ ಆಕೆಗೆ ಅದೊಂದು ಕಷ್ಟವೇ ಅಲ್ಲ. ಶ್ರದ್ಧೆಯ ಕಾಯಕ, ಭಕ್ತಿಯಿಂದ

ಆಚರಿಸುತ್ತಿರುವ ತಪಸ್ಸು. ದಿನ, ಮಾಸ, ವರ್ಷಗಳೇ ಕಳೆದುಹೋದುವು. ಎಷ್ಟು ವರ್ಷಗಳಾದುವೋ ಆಕೆಗೆ ನೆನಪಿಲ್ಲ. ಆಕೆಯ ಕೂದಲು ನರೆತು ಅನೇಕ ವರ್ಷಗಳು ಉರುಳಿವೆ. ಮುಪ್ಪಿನಿಂದ ದೇಹ ಜರ್ಜರಿತವಾಗಿದ್ದರೂ ಕಾಯುವ ಕಣ್ಣುಗಳು ಸೋತಿಲ್ಲ. ಭಕ್ತಿ, ವಾತ್ಸಲ್ಯ ಕರಗಿಲ್ಲ. ಕಣ್ಣು ಮಂಜಾಗುತ್ತಾ ಬಂದರೂ ರಾಮನನ್ನು ಕಾಣದೆ ಕಣ್ಣುಗಳ ಕಾಂತಿ ಕುಂದುವುದಿಲ್ಲ ಎಂಬುದು ಅವಳ ದೃಢನಂಬಿಕೆಯಾಗಿತ್ತು. ಆ ವೃದ್ಧೆ ತಪಸ್ವಿನಿ 'ಈ ದಿನ ಖಂಡಿತಾ ರಾಮ ಬರುತ್ತಾನೆ' ಎಂದು ಕಾಡಿನಿಂದ ಹಣ್ಣುಗಳನ್ನು ತಂದು ಇಡುತ್ತಿದ್ದಳು. ಮಣ್ಣಿನ ಪೀಠ ಸ್ವಚ್ಛಗೊಳಿಸಿ ರಂಗವಲ್ಲಿ ಹಾಕುತ್ತಿದ್ದಳು. ಕುಟೀರಕ್ಕೆ ಬರುವ ದಾರಿಗೆ ಹೂಗಳನ್ನು ಚೆಲ್ಲಿ ಸಿಂಗರಿಸುತ್ತಿದ್ದಳು. 'ಈ ಹಣ್ಣು ರಾಮನಿಗೆ ಇಷ್ಟವಾಗುತ್ತದೆ, ಈ ಹೂವು ರಾಮನಿಗೆ ಪ್ರಿಯವಾಗುತ್ತದೆ' ಎಂದು ಆಯ್ದು ಇರಿಸುತ್ತಿದ್ದಳು. ಹುಳಿಯೋ ಸಿಹಿಯೋ ಎಂದು ರುಚಿ ನೋಡಿ ಸ್ವಾದಿಷ್ಟ ಫಲಗಳನ್ನು ತೆಗೆದಿರಿಸುತ್ತಿದ್ದಳು.

'ರಾಮ ಅಯೋಧ್ಯೆಯ ರಾಜಪುತ್ರ. ತಾನು ಬೇಡರ ಜಾತಿಯ ಮಹಿಳೆ. ತನ್ನಂತಹ ಕೆಳವರ್ಗದವಳ ಗುಡಿಸಲಿಗೆ ಆತ ಬರುತ್ತಾನೋ ಇಲ್ಲವೋ' ಇಂತಹ ಯಾವ ಸಂಶಯವೂ ಅವಳನ್ನು ಕಾಡಲಿಲ್ಲ. ಅವಳ ಭಕ್ತಿ ಅಚಲವಾದುದು. ಮಗುವಿನ ಮನಸ್ಸಿನಂತಿರುವುದು. 'ಅಯ್ಯೋ !ರಾಮ ಇಂದೂ ಬಂದಿಲ್ಲ. ನನ್ನ ರಾಮ ಯಾಕೆ ಬರಲಿಲ್ಲ? ದಾರಿಯಲ್ಲೇನಾದರೂ ತೊಂದರೆಯಾಯಿತೇ?' ಹೀಗೆ ಕಾದುಕಾದು ದಿನಾಂತದಲ್ಲಿ ನಿಟ್ಟುಸಿರಿಡುತ್ತಿದ್ದಳು.

ಇತ್ತ ಪಿತೃವಾಕ್ಯ ಪರಿಪಾಲನೆಗಾಗಿ ಅಯೋಧ್ಯೆಯ ರಾಜ, ದಶರಥನ ಪ್ರಿಯ ಪುತ್ರ ಶ್ರೀರಾಮನು ವನವಾಸಕ್ಕೆ ತೆರಳಿದನು. ಈ ಸಂದರ್ಭದಲ್ಲಿ ಅವನ ಮಡದಿ ಸೀತೆಯನ್ನು ರಾವಣನು ಅಪಹರಿಸಿದನು. ಈ ವಿಚಾರವನ್ನು ಜಟಾಯು ಎಂಬ ಪಕ್ಷಿಯಿಂದ ತಿಳಿದು ಪತ್ನಿಯನ್ನು ಅರಸುತ್ತಾ ಶ್ರೀರಾಮನು ತಮ್ಮನಾದ ಲಕ್ಷ್ಮಣನೊಂದಿಗೆ ಪಂಪಾ ಸರೋವರನ್ನು ತಲುಪಿದನು. ಸರೋವರದ ಪಕ್ಕದ ಪರ್ಣಕುಟೀರದ ಬಳಿ ಹಣ್ಣುಹಣ್ಣು ಮುದುಕಿಯೊಬ್ಬಳು ಕಾತರದಿಂದ ಕಾಯುತ್ತಿರುವುದನ್ನು ಕಂಡನು. ಅವಳ ಕರಗಳಲ್ಲಿ ಹಣ್ಣುಗಳೂ ಹೂಗಳೂ ಇದ್ದವು. ದಾರಿಯು ಸುಗಂಧಮಯ ಪುಷ್ಪಗಳಿಂದ ಅಲಂಕರಿಸಲ್ಪಟ್ಟಿತ್ತು. ಆಶ್ರಮಕ್ಕೆ ತಲುಪುತ್ತಿದ್ದಂತೆ ಅವರ ಬಳಲಿಕೆ ಕಳೆಯಿತು. ರಾಮನು ಆ ವೃದ್ಧೆಯ ಬಳಿಗೆ ಬಂದು

"ತಾಯೇ ನೀನಾರು? ಯಾರನ್ನು ಕಾಯುತ್ತಿರುವೆ?"

"ನಾನು ಶಬರಿ. ಮತಂಗ ಮಹರ್ಷಿಗಳ ಶಿಷ್ಯೆ. ವೀರ ಕ್ಷತ್ರಿಯರಂತೆ ಶೋಭಿಸುತ್ತಿರುವ ನೀವು ಯಾರು?"

"ನಾವು ಅಯೋಧ್ಯೆಯ ಅರಸನಾದ ದಶರಥನ ಪುತ್ರರು. ನಾನು ರಾಮ. ಇವನು ನನ್ನ ತಮ್ಮ ಲಕ್ಷ್ಮಣ."

"ರಾಮ..... ನನ್ನ ರಾಮ...." ಎಂಬ ಧ್ವನಿಯು ಅವಳಿಗರಿವಿಲ್ಲದಂತೆ ಬಾಯಿಯಿಂದ ಹೊರಟು ರಾಮಾಗಮನದ ಸುದ್ದಿಯನ್ನು ಮತಂಗವನಕ್ಕೆ ಸಾರಿತು. ಸುದೀರ್ಘ ವರ್ಷಗಳ ಅವಳ ಕನಸು ನನಸಾಗಿತ್ತು. ಆನಂದಾಶ್ರು ಸುರಿಸುತ್ತಾ ರಾಮನ ಪಾದಗಳಿಗೆ ನಮಸ್ಕರಿಸಿದಳು. ತಕ್ಷಣ ಶ್ರೀರಾಮನು ಅವಳನ್ನು ಹಿಡಿದೆತ್ತಿ ಪ್ರೀತಿಯಿಂದ ಆಲಿಂಗಿಸಿದನು. ಬಳಿಕ ಹತ್ತಿರದಲ್ಲಿ ಕುಳ್ಳಿರಿಸಿಕೊಂಡನು. ಶಬರಿಯು ಎಷ್ಟೋ ಹೊತ್ತಿನ ತನಕ ರಾಮನನ್ನು ಭಕ್ತಿಯಿಂದ ತನ್ನ ಕಣ್ಣುಗಳಲ್ಲೇ ತುಂಬಿಕೊಂಡಳು. ಅವಳಿಗೆ ಆನಂದಾತಿರೇಕದಿಂದ ಮಾತೇ ಹೊರಡದಂತಾಯಿತು. ಮೌನವನ್ನು ಮುರಿಯುತ್ತಾ ಶ್ರೀರಾಮನು "ಅಮ್ಮಾ, ನೀನು ಕ್ಷೇಮವಾಗಿರುವೆಯಾ? ಈ ಕಾಡಿನಲ್ಲಿ ಒಂಟಿಯಾಗಿದ್ದುಕೊಂಡು ಏನೂ ತೊಂದರೆಯಾಗಿಲ್ಲವಷ್ಟೇ?" ಎಂದು ಕೇಳಿದನು.



ರಾಮನ ಮಾತಿನಿಂದ ಥಟ್ಟನೆ ಎಚ್ಚೆತ್ತ ಶಬರಿ "ರಾಮ, ನಿನ್ನ ಕರುಣೆಯಿಂದ ನನಗೆ ಯಾವ ತೊಂದರೆಯೂ ಆಗಿಲ್ಲ. ನೀವು ಬರುತ್ತೀರೆಂದು ಕಾಡಿನಿಂದ ಸಿಹಿಯಾದ ಹಣ್ಣುಹಂಪಲುಗಳನ್ನು ಸಂಗ್ರಹಿಸಿ ತಂದಿದ್ದೇನೆ. ದಯವಿಟ್ಟು ಸ್ವೀಕರಿಸಿ" ಎಂದಳು. ರಾಮನು ಅವಳ ಸತ್ಕಾರಕ್ಕೆ ಮನಸೋತನು. ಇಬ್ಬರೂ ಅವಳು ನೀಡಿದ ರುಚಿಯಾದ ಹಣ್ಣುಗಳನ್ನು ಸಂತೃಪ್ತಿಯಿಂದ ತಿಂದರು.

"ಅದೆಷ್ಟೋ ವರ್ಷಗಳಿಂದ ನಿನ್ನ ದಾರಿ ಕಾದುಕಾದು ಇಂದು ನಿನ್ನ ದರ್ಶನ ಪಡೆದು ಧನ್ಯಳಾದೆನು. ನೀನು ನನ್ನ ಆತಿಥ್ಯವನ್ನು ಸ್ವೀಕರಿಸಿ ಅನುಗ್ರಹಿಸಿದೆ. ಇನ್ನು ಇದಕ್ಕಿಂತ ಹೆಚ್ಚೇನು ಬೇಕು?" ಎನ್ನುತ್ತಾ ರಾಮನ ಪದತಲಕ್ಕೆ ಕುಸಿದು ಇಹಲೋಕವನ್ನು ತ್ಯಜಿಸಿದಳು.

## ಚಟುವಟಿಕೆಗಳು

### ಉತ್ತರಿಸಿರಿ

- ಶಬರಿಯು ಆಶ್ರಮದಲ್ಲಿದ್ದುಕೊಂಡು ಮಾಡುತ್ತಿದ್ದ ಕೆಲಸಗಳು ಯಾವುದು?
- ಶಬರಿಯು ಮತಂಗ ಮುನಿಗಳಿಗೆ ಸಾಷ್ಟಾಂಗ ನಮಸ್ಕರಿಸಿ ಏನು ಹೇಳಿದಳು?
- ಶಬರಿಯು ಯಾರ ಆಗಮನವನ್ನು ನಿರೀಕ್ಷಿಸುತ್ತಾ ದಿನಗಳೆದಳು?

## ಸಂದರ್ಭ ಬರೆಯಿರಿ

- ಈ ಮಾತುಗಳನ್ನು ಹೇಳಿದ ಸಂದರ್ಭವನ್ನು ಬರೆಯಿರಿ.
    - "ಮಗಳೇ ಏಳು, ನಿನಗೆ ಏನಾಗಬೇಕು?"
    - "ತಾಯೇ, ನೀನಾರು? ಯಾರನ್ನು ಕಾಯುತ್ತಿರುವೆ?"
    - "ಶಬರಿ, ನೀನಿನ್ನೂ ಹೊರಡುವ ಕಾಲ ಬಂದಿಲ್ಲ ಮಗಳೇ"

## ಸಂಭಾಷಣೆ ಬರೆಯಿರಿ

- ಈ ಕಥೆಯಲ್ಲಿ ನಿಮಗಿಷ್ಟವಾದ ಭಾಗವನ್ನು ಆಯ್ದು ಸಂಭಾಷಣೆ ರಚಿಸಿರಿ.

## ವರ್ಣನೆ ಬರೆಯಿರಿ

- 'ಶಬರಿ ಕಥೆಯಲ್ಲಿ ಪಂಪಾ ಸರೋವರದ ವರ್ಣನೆಯನ್ನು ಓದಿರುವಿರಲ್ಲವೇ? ಪ್ರಕೃತಿಯಲ್ಲಿ ಕಣ್ಮನ ಸೆಳೆಯುವ ಅನೇಕ ದೃಶ್ಯಗಳನ್ನು ನೀವು ಕಂಡಿರಬಹುದು. ನಿಮ್ಮ ಮನಸೂರೆಗೊಂಡ ಒಂದು ದೃಶ್ಯವನ್ನು ವರ್ಣಿಸಿ ಬರೆಯಿರಿ.

## ಪಾತ್ರಚಿತ್ರಣ ಬರೆಯಿರಿ

- 'ಶಬರಿ' ಕಥೆಯಲ್ಲಿ ಬಂದಿರುವ ಪಾತ್ರಗಳು ಯಾವುವು? ಅವುಗಳಲ್ಲಿ ನಿಮಗಿಷ್ಟವಾದ ಪಾತ್ರ ಯಾವುದು? ಯಾಕೆ ಇಷ್ಟವಾಯಿತೆಂಬುದನ್ನು ಬರೆಯಿರಿ.

## ವಾಕ್ಯ ಬರೆಯಿರಿ

- ಮಾದರಿಯಂತೆ ಕೊಟ್ಟಿರುವ ಎರಡು ವಾಕ್ಯಗಳನ್ನು ಸೇರಿಸಿ ಒಂದೇ ವಾಕ್ಯವಾಗಿ ಬರೆಯಿರಿ.

  ಮಾದರಿ : 'ಅರುಣನು ಹೋಟೆಲಿಗೆ ಹೋದನು. ಚಾ ಕುಡಿದನು.' ಈ ಎರಡು ವಾಕ್ಯಗಳನ್ನು ಸೇರಿಸಿ ಒಂದೇ ವಾಕ್ಯವಾಗಿ ಬರೆದರೆ –

  ಅರುಣನು ಹೊಟೇಲಿಗೆ ಹೋಗಿ ಚಾ ಕುಡಿದನು. ಎಂದಾಗುತ್ತದೆ.

  ಇದೇ ರೀತಿಯಲ್ಲಿ ಇಲ್ಲಿಕೊಟ್ಟಿರುವ ಎರಡು ವಾಕ್ಯಗಳನ್ನು ಸೇರಿಸಿ ಒಂದೇ ವಾಕ್ಯವಾಗಿ ಬರೆಯಿರಿ.
    - ಶಬರಿಯು ಮುನಿಗಳನ್ನು ಕಂಡಳು. ಅವಳು ಸಾಷ್ಟಾಂಗ ನಮಸ್ಕರಿಸಿದಳು.
    - ಮುಹಮ್ಮದ್ ಗಿಡವನ್ನು ನೆಟ್ಟನು. ನೀರನ್ನು ಎರೆದನು.
    - ಕಾಗೆ ಮರದಲ್ಲಿ ಕುಳಿತಿತು. ಕಾ ಕಾ ಕಾ ಎಂದು ಕೂಗಿತು.

# ಸದಾಚಾರ



ಹೆತ್ತ ತಾಯ್ತಂದೆಗಳ ಚಿತ್ತವ ನೋಯಿಸಿ
ನಿತ್ಯ ದಾನವ ಮಾಡಿ ಫಲವೇನು
ಸತ್ಯ ಸದಾಚಾರ ಇಲ್ಲದವನು ಜಪ
ಹತ್ತು ಸಾವಿರ ಮಾಡಿ ಫಲವೇನು

ತನ್ನ ಸತಿಸುತರು ಬಂಧುಗಳ ನೋಯಿಸಿ
ಚಿನ್ನ ದಾನವ ಮಾಡಿ ಫಲವೇನು
ಬಿನ್ನಣದಿಂದಲಿ ದೇಶದೇಶವ ತಿರುಗಿ
ಅನ್ನದಾನವ ಮಾಡಿ ಫಲವೇನು

ಸ್ನಾನಕ್ಕೆ ಪಾನಕ್ಕೆ ಆಗುವ ತಿಳಿನೀರು
ಕಾನನದೊಳಗಿದ್ದು ಫಲವೇನು
ಆನಂದ ಮೂರುತಿ ಪುರಂದರವಿಠಲನ
ನೆನೆಯದ ತನುವಿದ್ದು ಫಲವೇನು

ಪುರಂದರದಾಸರು

**ಪುರಂದರದಾಸರು**

ಪುರಂದರದಾಸರು ಪುರಂದರಗಡ ಎಂಬಲ್ಲಿ ಜನಿಸಿದರು. ಇವರ ಮೊದಲಿನ ಹೆಸರು ಶ್ರೀನಿವಾಸ ಎಂದಾಗಿತ್ತು. ಪ್ರಾರಂಭದಲ್ಲಿ ಕಡುಲೋಭಿಯಾಗಿದ್ದ ಇವರು ಶ್ರೀಹರಿಯ ದಯೆಯಿಂದ ಜ್ಞಾನೋದಯಗೊಂಡು, ಸರ್ವಸಂಪತ್ತನ್ನೂ ತ್ಯಾಗಮಾಡಿ ಹರಿದಾಸರಾದರು. ಇವರನ್ನು 'ಕರ್ನಾಟಕ ಸಂಗೀತ ಪಿತಾಮಹ' ಎಂದು ಗೌರವಿಸಲಾಗಿದೆ. ಇವರ ಕೀರ್ತನೆಗಳಲ್ಲಿ 'ಪುರಂದರ ವಿಠಲ' ಎಂಬ ಅಂಕಿತ ಕಂಡುಬರುತ್ತದೆ.

## ಚಟುವಟಿಕೆಗಳು

### ಹಾಡಿರಿ

- ಈ ಕೀರ್ತನೆಯನ್ನು ರಾಗ, ತಾಳ, ಲಯಬದ್ಧವಾಗಿ ಹಾಡಿರಿ.

### ಉತ್ತರಿಸಿರಿ

- ಈ ಕೀರ್ತನೆಯಲ್ಲಿ ಸೂಚಿಸಿದ, ಮಾನವನಲ್ಲಿರಬೇಕಾದ ಉತ್ತಮ ಗುಣಗಳು ಯಾವುವು?

### ಚರ್ಚಿಸಿರಿ

- ಪುರಂದರದಾಸರು ಹೇಳಿರುವ ಉತ್ತಮ ಗುಣನಡತೆಗಳು ಇಂದಿನ ಸಮಾಜದಲ್ಲಿ ಹೇಗೆ ಕಂಡುಬರುತ್ತಿವೆ? ನಿಮ್ಮ ಅಭಿಪ್ರಾಯವನ್ನು ಹೇಳಿರಿ.

### ಸಾಲು ಗುರುತಿಸಿರಿ

- ಇಲ್ಲಿ ನೀಡಲಾದ ಆಶಯಗಳಿಗೆ ಸಮಾನವಾದ ಸಾಲುಗಳನ್ನು ಪದ್ಯದಿಂದ ಹುಡುಕಿ ಬರೆಯಿರಿ.
    - ಹೆತ್ತವರ ಮನಸ್ಸನ್ನು ನೋಯಿಸಿ ಪ್ರತಿದಿನವೂ ತರತರದ ದಾನವನ್ನು ಮಾಡಿ ಪ್ರಯೋಜನವಿಲ್ಲ.
    - ನಾವು ಕುಡಿಯಲು ಹಾಗೂ ಸ್ನಾನಕ್ಕೆ ಉಪಯೋಗಿಸುವ ತಿಳಿನೀರು ಕಾಡಿನಲ್ಲಿದ್ದು ಫಲವಿಲ್ಲ.

### ಸ್ವಾರಸ್ಯ ಬರೆಯಿರಿ

- ಈ ಸಾಲಿನಲ್ಲಿರುವ ಸ್ವಾರಸ್ಯವನ್ನು ಬರೆಯಿರಿ.

    ಸತ್ಯ ಸದಾಚಾರ ಇಲ್ಲದವನು ಜಪ<br>
    ಹತ್ತು ಸಾವಿರ ಮಾಡಿ ಫಲವೇನು

### ಲೇಖನ ಬರೆಯಿರಿ

- 'ಮಾನವರು ಬೆಳೆಸಿಕೊಳ್ಳಬೇಕಾದ ಉತ್ತಮ ಗುಣಗಳು' ಎಂಬ ವಿಷಯದ ಕುರಿತು ಲೇಖನ ತಯಾರಿಸಿರಿ. ಆ ಲೇಖನವನ್ನು ಶಾಲಾ ಭಿತ್ತಿಪತ್ರಿಕೆಯಲ್ಲಿ ಪ್ರಕಟಿಸಿರಿ.

## ಕಲಿಕಾ ಸಾಧನೆಗಳು

- ಆಲಿಸಿ ಓದಿ ತಿಳಿದ ವಿಚಾರಗಳನ್ನು ತರ್ಕಬದ್ಧವಾಗಿ ವಿಶ್ಲೇಷಿಸಿ ಸ್ವಂತ ಅಭಿಪ್ರಾಯಗಳನ್ನು ವಾಚಿಕವಾಗಿ ಮತ್ತು ಲಿಖಿತವಾಗಿ ಪ್ರಕಟಿಸುವುದು.
- ಗದ್ಯ-ಪದ್ಯಗಳನ್ನು ಆಶಯ ಸ್ಪಷ್ಟತೆಯೊಂದಿಗೆ ನಿರರ್ಗಳವಾಗಿ ಮತ್ತು ಸ್ಫುಟತೆಯೊಂದಿಗೆ ಓದುವುದು ಮತ್ತು ಪ್ರಧಾನ ಆಶಯಗಳನ್ನು ಬಾಯ್ದೆರೆಯಾಗಿ ಮಂಡಿಸುವುದು.
- ಜನಪದಗೀತೆ, ಕವಿತೆಗಳ ರಾಗ, ತಾಳ, ಭಾವ ಎಂಬಿವುಗಳನ್ನು ಆಸ್ವಾದಿಸುವುದು, ತಾಳದೊಂದಿಗೆ ಭಾವನಾತ್ಮಕವಾಗಿ ಹಾಡಿ ಮಂಡಿಸುವುದು. ಕಂಠಪಾಠ ಮಾಡುವುದು.
- ಸ್ವಂತ ಅಭಿರುಚಿಗೆ ತಕ್ಕಂತೆ ಕಥೆ, ಕವಿತೆ, ನಾಟಕ, ಪ್ರವಾಸಕಥನ ಮೊದಲಾದ ವಿಭಿನ್ನ ವಿಭಾಗಗಳಲ್ಲಿ ಒಳಗೊಂಡ ಪುಸ್ತಕಗಳನ್ನು ಗುರುತಿಸಿ ಓದುವುದು ಮತ್ತು ಓದಿ ತಿಳಿದ ವಿಚಾರಗಳನ್ನು ವಿವಿಧ ರೀತಿಯಲ್ಲಿ ಪ್ರಕಟಪಡಿಸುವುದು.
- ಪರಿಚಿತವಾದ ವಿಷಯಗಳನ್ನು ವಸ್ತುವಾಗಿರಿಸಿಕೊಂಡು ಕಥೆ, ಕವಿತೆ ಮೊದಲಾದ ಸೃಜನಾತ್ಮಕ ರಚನೆಗಳನ್ನು ಮಾಡುವುದು.
- ವಿಭಿನ್ನ ರೀತಿಯ ವ್ಯವಹಾರ ರೂಪಗಳನ್ನು ತಯಾರಿಸುವುದು. ಅವುಗಳನ್ನು ಸಂಚಿಕೆ, ಭಿತ್ತಿಪತ್ರಿಕೆ, ಹಸ್ತಪತ್ರಿಕೆ, ನಿಯತಕಾಲಿಕಗಳಲ್ಲಿ ಪ್ರಕಟಿಸುವುದು.
- ಸೃಜನಾತ್ಮಕ ರಚನೆಗಳನ್ನು ಓದಿ, ಅವುಗಳ ಪ್ರಧಾನ ಆಶಯ ಕೆಡದಂತೆ ಸಂಕ್ಷಿಪ್ತವಾಗಿ ಬರೆಯುವುದು.
- ಸೂಕ್ತ ಸೂಚಕಗಳನ್ನು ರೂಪಿಸಿ ಸ್ವಂತ ಹಾಗೂ ಇತರರ ರಚನೆಗಳ ಮೌಲ್ಯ ನಿರ್ಣಯಿಸುವುದು.
- ಕೃತಿಯ ಕಥಾಪಾತ್ರಗಳು, ಸನ್ನಿವೇಶಗಳು, ಭಾಷಾಶೈಲಿ, ಮಂಡನೆಯ ರೀತಿ ಎಂಬಿತ್ಯಾದಿಗಳನ್ನು ಪರಿಗಣಿಸಿ ಓದಿದ ಕೃತಿಯ ಆಸ್ವಾದನಾ ಟಿಪ್ಪಣಿ ತಯಾರಿಸುವುದು.
- ಕಥೆ, ಕವಿತೆಗಳಲ್ಲಿ ಕಥಾಪಾತ್ರಗಳ ಮಾನಸಿಕ ಸ್ಥಿತಿ, ಅವುಗಳಿಗಿರುವ ಸ್ಥಾನ ಇತ್ಯಾದಿಗಳನ್ನು ಗುರುತಿಸಿ ಬಾಯ್ದೆರೆಯಾಗಿ ಮತ್ತು ಲಿಖಿತವಾಗಿ ಪಾತ್ರಚಿತ್ರಣ ಮಾಡುವುದು.
- ವಿವಿಧ ಕವಿತೆಗಳನ್ನು ಕಂಠಪಾಠ ಮಾಡಿ ಸೂಕ್ತವಾದ ರಾಗ, ತಾಳಗಳೊಂದಿಗೆ ಭಾವಪೂರ್ಣವಾಗಿ ಹಾಡುವುದು.
- ಸ್ವಂತ ಆಶಯಗಳನ್ನು ಶಿಷ್ಟಭಾಷೆಯಲ್ಲಿ ತಪ್ಪಿಲ್ಲದೆ ಬರೆಯುವುದು.
- ಸೃಜನಾತ್ಮಕ ರಚನೆಗಳ ಭಾವವನ್ನು ಅರ್ಥೈಸಿಕೊಂಡು ನಾಟಕ, ಭಾವಾಭಿನಯ ಮತ್ತು ಮೂಕಾಭಿನಯಗಳ ಮೂಲಕ ಮಂಡಿಸುವುದು.
- ಪರಿಚಿತವಾದ ಕವಿತೆಗಳಲ್ಲಿರುವ ಬಿಂಬಕಲ್ಪನೆ, ವರ್ಣನೆ ಎಂಬಿವುಗಳನ್ನು ಗುರುತಿಸುವುದು ಮತ್ತು ವಾಚಿಕವಾಗಿ ಮಂಡಿಸುವುದು.
- ದೃಶ್ಯ-ಶ್ರಾವ್ಯ ಮಾಧ್ಯಮಗಳ ಮೂಲಕ ಗಳಿಸಿದ ವಿಚಾರಗಳನ್ನು ತನ್ನ ರಚನೆಯಲ್ಲಿ ಬಳಸುವುದು.

5

# ಸ್ವಾಸ್ಥ್ಯ

ಮಾನವನಿಗೆ ಆರೋಗ್ಯಕ್ಕಿಂತ ದೊಡ್ಡ ಸಂಪತ್ತು ಬೇರೊಂದಿಲ್ಲ. ಪೋಷಕಾಂಶಯುಕ್ತ ಆಹಾರವು ಶರೀರದ ಆರೋಗ್ಯವನ್ನು ಕಾಪಾಡುವುದರೊಂದಿಗೆ, ಮನುಷ್ಯನಲ್ಲಿ ಒಳ್ಳೆಯ ಗುಣಗಳು ನೆಲೆಗೊಳ್ಳಲೂ ಮಾನಸಿಕ ಆರೋಗ್ಯ ವರ್ಧಿಸಲೂ ಕಾರಣವಾಗುತ್ತದೆ. ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯಯುತವಾದ ಸಮಾಜವನ್ನು ಸೃಷ್ಟಿಸಲು ನಾವು ಪ್ರಯತ್ನಿಸೋಣ.

# ನಾಲಿಗೆಯ ಮಹಿಮೆ

ನಮಗಿರುವ ಐದು ಇಂದ್ರಿಯಗಳಲ್ಲಿ ನಾಲಿಗೆಯೂ ಒಂದು. ಅದು ಅಕ್ಷರಶಃ ಒಂದೇ! ಉಳಿದ ಇಂದ್ರಿಯಗಳಲ್ಲಿ ಕಣ್ಣು, ಕಿವಿಗಳು ಎರಡೆರಡಿವೆ. ಮೂಗು ಒಂದೇ ಆದರೂ ಅದಕ್ಕೆ ಎರಡು ಹೊಳ್ಳೆಗಳಿವೆ. ನಮ್ಮ ಇಡೀ ದೇಹವನ್ನು ಮುಚ್ಚಿರುವ ಚರ್ಮ ಮೇಲ್ನೋಟಕ್ಕೆ ಒಂದಾಗಿ ಕಂಡರೂ ಅದರಲ್ಲಿ ಸ್ಥೂಲವಾಗಿ 'ಡರ್ಮಿಸ್' ಮತ್ತು 'ಎಪಿಡರ್ಮಿಸ್' ಎಂಬ ಎರಡು ಪದರುಗಳಿವೆ. ಹೀಗಾಗಿ ಪಂಚೇಂದ್ರಿಯಗಳಲ್ಲಿ ನಾಲಿಗೆ ಮಾತ್ರ ನಿಜಕ್ಕೂ ಒಬ್ಬಂಟಿ ಅನ್ನಬಹುದು.

**ಎರಡು ಕಣ್ಣು, ಎರಡು ಕಿವಿ**
**ನಾಲಿಗೆ ಮಾತ್ರ ಒಂದೇ**
**ಆದರೂ ಬೇಡದ ದಂಥೆಯಲ್ಲಿ**
**ಅದು ಯಾವಾಗಲೂ ಮುಂದೆ**
**ಒಂದು ಕ್ಷಣವೂ ಸುಮ್ಮನಿರದೆ**
**ಯದ್ವಾತದ್ವಾ ಹೊರಳಾಡುತ್ತದೆ**
**ಹೊಲಿಗೆಯಿಲ್ಲದ ಬಾಯಿಯೊಳಗೆ**
**ಎಲುಬಿಲ್ಲದ ನಾಲಿಗೆ**



ನಾಲಿಗೆಯನ್ನು ದೂಷಿಸುವಂತಹ ಈ ರೀತಿಯ ಕವನಗಳನ್ನು ಅನೇಕರು ಬರೆದಿದ್ದಾರೆ. ಬಹುಶಃ ಪಂಚೇಂದ್ರಿಯಗಳಲ್ಲಿ ಅತ್ಯಂತ ಹೆಚ್ಚು ಟೀಕೆಗೆ ಒಳಗಾಗಿರುವುದು ನಾಲಿಗೆ. ತಾವರೆಯಂತಹ ಕಣ್ಣು, ಸಂಪಿಗೆಯಂತಹ ಮೂಗು, ದಂತದ ಮೈ– ಎಂದೆಲ್ಲ ನಮ್ಮ ಕವಿಗಳು ಕಣ್ಣು, ಕಿವಿ, ತೊಗಲನ್ನು ಅನಾದಿಕಾಲದಿಂದಲೂ ವಿಧವಿಧವಾಗಿ ವರ್ಣಿಸಿದ್ದಾರೆ. ಗಣಪತಿಯನ್ನು ಪೂಜಿಸುವಾಗ ನಾವು ಆತನ 'ಗೆರಸೆ' ಯಂತಹ ಕಿವಿಯನ್ನು ಹೊಗಳುತ್ತೇವೆ. ಆದರೆ ನಾಲಿಗೆ ಮಾತ್ರ ಹೊಗಳಿಕೆಯ ಭಾಗ್ಯದಿಂದ ವಂಚಿತವಾಗಿದೆ.

ಅಲಂಕಾರದ ವಿಚಾರದಲ್ಲೂ ನಾವು ನಾಲಿಗೆಯನ್ನು ಅಲಕ್ಷ್ಯ ಮಾಡಿದ್ದೇವೆ ಅನ್ನಿಸುತ್ತದೆ. ಕಣ್ಣುಗಳಿಗೆ ಕಾಡಿಗೆ ಹಚ್ಚಿಕೊಳ್ಳುತ್ತೇವೆ. ಮೂಗಿಗೆ ಮೂಗುತಿ ಇದೆ. ಕಿವಿಗಳಿಗೆ ಓಲೆ, ರಿಂಗುಗಳಿವೆ. ಚರ್ಮಕ್ಕೆ ಸ್ನೋ, ಪೌಡರ್ ಲೇಪಿಸಿಕೊಳ್ಳುತ್ತೇವೆ. ಆದರೆ ಬಡಪಾಯಿ ನಾಲಿಗೆಗೆ ಯಾವ ಅಲಂಕಾರವೂ ಇಲ್ಲ. ಆಭರಣವೂ ಇಲ್ಲ. ಅದು ಯಾವಾಗಲೂ ನಮ್ಮ ಎಂಜಲಿನಲ್ಲೇ ಹೊರಳಾಡುತ್ತಿರುತ್ತದೆ. ಪಂಚೇಂದ್ರಿಯಗಳಲ್ಲಿ ಒಂದಾದ ನಾಲಿಗೆಯ ವಿಷಯದಲ್ಲಿ ಈ ಬಗೆಯ ತಾರತಮ್ಯ ತರವೇ? ನಾಲಿಗೆ

ಒಂಟಿಯಾಗಿದ್ದು, ಹೇಳುವವರು, ಕೇಳುವವರು ಇಲ್ಲ ಎಂಬ ಕಾರಣಕ್ಕೆ ನಿರ್ಲಕ್ಷ್ಯಕ್ಕೆ ಒಳಗಾಗಿದೆಯೇ?

ಕೀರ್ತನಕಾರರೂ ನಾಲಿಗೆಯನ್ನು ಹೊಗಳಿದಂತೆ ಕಾಣುವುದಿಲ್ಲ. ಬದಲಾಗಿ

**ಆಚಾರವಿಲ್ಲದ ನಾಲಿಗೆ ನಿನ್ನ**

**ನೀಚ ಬುದ್ಧಿಯ ಬಿಡು ನಾಲಿಗೆ**

**ವಿಚಾರವಿಲ್ಲದೆ ಪರರ ದೂಷಿಪುದಕ್ಕೆ**

**ಚಾಚಿಕೊಂಡಿರುವಂಥ ನಾಲಿಗೆ**

ಎಂದು ಅನವಶ್ಯಕವಾಗಿ (ಪುರಂದರದಾಸರು) ಟೀಕಿಸಿದಂತೆ ಕಾಣುತ್ತದೆ. ಯಾರಾದರೂ ಕೆಟ್ಟ ಮಾತುಗಳನ್ನಾಡಿದರೆ ಅದಕ್ಕೆ ನಾಲಿಗೆ ಹೊಣೆಯಾಗುತ್ತದೆಯೇ? ನಾಲಿಗೆ ಎನ್ನುವುದು ನಮ್ಮ ಮನಸ್ಸು ಹೇಳಿದಂತೆ ಕೆಲಸ ಮಾಡುವ ವಿನಮ್ರ ಸೇವಕ. ಅದು ಚಾಡಿ ಹೇಳೆಂದರೆ ಹೇಳುತ್ತದೆ. "ಹರಿಯನ್ನು ಭಜಿಸು" ಎಂದರೆ ಹಾಗೆಯೇ ಮಾಡುತ್ತದೆ.

ನಾಲಿಗೆ ಒಂದೇ ಆದರೂ ಅದು ಮಾಡುವ ಕೆಲಸಗಳು ಒಂದೆರಡಲ್ಲ. ಸಿಹಿ, ಖಾರ, ಉಪ್ಪು ಮುಂತಾದ ವಿವಿಧ ರುಚಿಗಳನ್ನು ಗುರುತಿಸುವುದು ನಾಲಿಗೆಯ ಮುಖ್ಯ ಕೆಲಸ. ಇದಕ್ಕಾಗಿ ನಮ್ಮ ನಾಲಿಗೆಯಲ್ಲಿ 10,000ಕ್ಕೂ ಮಿಕ್ಕಿ ರುಚಿ ಮೊಗ್ಗುಗಳು ಇರುತ್ತವೆ. ನಾವು ತಿನ್ನುವ ಆಹಾರವನ್ನು ಜೊಲ್ಲುರಸದೊಂದಿಗೆ ಚೆನ್ನಾಗಿ ಬೆರೆಸಿ ಹಲ್ಲುಗಳ ಮೂಲಕ ಅವು ಅರೆಯಲ್ಪಡುವಂತೆ ಮಾಡುವುದಕ್ಕೂ ನಮಗೆ ನಾಲಿಗೆ ಬೇಕಾಗುತ್ತದೆ. ನಾಲಿಗೆಗೆ ಎಲುಬಿಲ್ಲವಾದುದರಿಂದ ಅದು ಹೇಗೆ ಬೇಕಾದರೂ ಬಾಗಿ ಬಳುಕುತ್ತದೆ.

ಅಕ್ಷರಗಳನ್ನು ಸ್ಪಷ್ಟವಾಗಿ ಉಚ್ಚರಿಸಿ ಮಾತನಾಡುವುದಕ್ಕೂ ನಾಲಿಗೆ ಅತ್ಯಗತ್ಯ. ಯಾರಾದರೂ ನಮ್ಮನ್ನು ಟೀಕಿಸಿದರೆ ಅವರಿಗೆ ನಾವು "ನಾಲಿಗೆ ಬಿಗಿ ಹಿಡಿದು ಮಾತಾಡಿ" ಅನ್ನುತ್ತೇವೆ. ಇದೊಂದು ಅರ್ಥವಿಲ್ಲದ ಮಾತು. ನಾಲಿಗೆಯನ್ನು ಬಿಗಿ ಹಿಡಿದರೆ ಮಾತನಾಡಲು ಸಾಧ್ಯವೇ? ಮಾತನಾಡಲು ನೆರವು ನೀಡುವುದು ನಾಲಿಗೆಯ ಕೆಲಸ. ನಾಲಿಗೆಯನ್ನು ಬಯ್ಯಲೂ ನಾವು ನಾಲಿಗೆಯನ್ನೇ ಬಳಸುತ್ತೇವೆ. "ಕೋಲು ಕೊಟ್ಟು ಹೊಡೆಸಿಕೊಳ್ಳುವುದು" ಅನ್ನುತ್ತಾರಲ್ಲ ಹಾಗೆ! ಇನ್ನೊಬ್ಬರನ್ನು ಬೈದರೆ ಅವನ "ನಾಲಿಗೆಯಲ್ಲಿ ನಂಜಿದೆ" ಅನ್ನುತ್ತೇವೆ. ಸುಳ್ಳು ಹೇಳುವವರನ್ನು "ಎರಡು ನಾಲಿಗೆಯವರು" ಎಂದು ಜರಿಯುತ್ತೇವೆ. ಆದರೆ ಸೊಗಸಾಗಿ ಮಾತನಾಡಿದರೆ, ಕಾವ್ಯವಾಚನ ಮಾಡಿದರೆ, ಹಾಡಿದರೆ ಅದರ ಶ್ರೇಯಸ್ಸು ನಾಲಿಗೆಗೆ ಸಿಗುವುದಿಲ್ಲ. ಉತ್ತಮ ವಾಕ್ಪಟುತ್ವವನ್ನು ಸರಸ್ವತಿಯ ಕೃಪೆ ಅನ್ನುತ್ತೇವೆ!

ಕವಿಗಳು ಕಣ್ಣು, ಮೂಗು, ತುಟಿ, ಹಲ್ಲು ಮುಂತಾದ ಅಂಗಗಳನ್ನು ಬಗೆ ಬಗೆಯಾಗಿ ವರ್ಣಿಸಿರಬಹುದು. ಆದರೆ ನಾವು ಆರೋಗ್ಯ ಸರಿಯಿಲ್ಲದೆ ವೈದ್ಯರ ಹತ್ತಿರ ಹೋದಾಗ ಅವರು ಮೊದಲು ನೋಡುವುದು ನಮ್ಮ ನಾಲಿಗೆಯನ್ನು! ನಾಲಿಗೆಯನ್ನು ಪರೀಕ್ಷಿಸಿದರೆ ಜೀರ್ಣಾಂಗ ವ್ಯವಸ್ಥೆಯ ಬಗ್ಗೆ ವೈದ್ಯರಿಗೆ ಅನೇಕ ಮಾಹಿತಿಗಳು ಸಿಗುತ್ತವೆ. ಆದ್ದರಿಂದ ರೋಗವನ್ನು ಪತ್ತೆಹಚ್ಚುವುದಕ್ಕೂ ನಾಲಿಗೆ ಸಹಾಯ ಮಾಡುತ್ತದೆ ಅಂದಹಾಗಾಯಿತು.



ನಾವು ಮಾತನಾಡುವಾಗ ಆಕಸ್ಮಿಕವಾಗಿ ಏನಾದರೂ ಎಡವಟ್ಟಾದರೆ ಅದನ್ನು "ನಾಲಿಗೆ ಜಾರುವುದು" ಎನ್ನುತ್ತೇವೆ. ತೇವವಾದ ಸ್ಥಳದಲ್ಲಿಯೇ ನಾಲಿಗೆಯ ಓಡಾಟ–ಹೀಗಾಗಿ ಜಾರುವ ಸಂಭವ ಹೆಚ್ಚು, "ಒಂದು ನಾಲಿಗೆ ಜಾರುವುದಕ್ಕಿಂತ ಎರಡು ಕಾಲು ಜಾರುವುದೇ ಮೇಲು" ಮತ್ತು "ನಾಲಿಗೆಗೆ ಮೂಳೆ ಇಲ್ಲದಿದ್ದರೂ ಮೂಳೆ ಮುರಿಸುವ ಶಕ್ತಿ ಇದೆ" ಎಂದೆಲ್ಲಾ ನಾಲಿಗೆಯ ಬಗ್ಗೆ ಹೇಳುತ್ತಾರೆ.

ನಾಲಿಗೆ ನಮಗಾಗಿ ಹಲವಾರು ಕೆಲಸಗಳನ್ನು ಮಾಡಿದರೂ ಸ್ವಲ್ಪವೂ ವಿಶ್ರಾಂತಿ ತೆಗೆದುಕೊಳ್ಳುವುದಿಲ್ಲ. ನಾವು ನಿದ್ರಿಸುತ್ತಿರುವಾಗಲೂ ಅದು ಆಗಾಗ ಹೊರಳಾಡುತ್ತಾ ಜೊಲ್ಲನ್ನು ಗಂಟಲ ಗುಳಿಯೊಳಗೆ ತಳ್ಳುವ ಕೆಲಸ ಮಾಡುತ್ತಿರುತ್ತದೆ. ಹೊಗಳಿಕೆಯನ್ನು ಬಯಸದೆ, ಬಯ್ದರೂ ಬೇಸರ ಪಟ್ಟುಕೊಳ್ಳದೆ, ಹಗಲಿರುಳೂ ದುಡಿಯುವ ನಾಲಿಗೆಯನ್ನು ಕರ್ಮಯೋಗಿ ಅನ್ನಬಹುದಲ್ಲವೇ? ಮಾತನಾಡಲು ನಾಲಿಗೆಯನ್ನು ಬಳಸುವ ನಾವು ಇನ್ನಾದರೂ ನಾಲಿಗೆಯ ಪರವಾಗಿ ಮಾತನಾಡಬೇಕು. ಪಂಚೇಂದ್ರಿಯಗಳಲ್ಲಿ ನಾಲಿಗೆಗೆ ಆಗುತ್ತಿರುವ ಅನ್ಯಾಯದ ವಿರುದ್ಧ ಹೋರಾಡಬೇಕು.

**ನೋವಾದಾಗ ಹಲ್ಲಿಗೆ**
**ಎಲ್ಲರಿಗಿಂತ ಮೊದಲು ಅಲ್ಲಿಗೆ**
**ಹೋಗಿ ಸಂತೈಸುತ್ತದೆ ನಾಲಿಗೆ**

*ಎಚ್. ಡುಂಡಿರಾಜ್*

### ಎಚ್. ಡುಂಡಿರಾಜ್



'ಚುಟುಕು ಸಾರ್ವಭೌಮ' ಎಂದು ಪ್ರಸಿದ್ಧರಾದ ಶ್ರೀಯುತ ಡುಂಡಿರಾಜರು ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಹಟ್ಟಿಕುದ್ರು ಎಂಬಲ್ಲಿ 18.8.1956 ರಂದು ಜನಿಸಿದರು. ಇವರ ತಂದೆ ವೆಂಕಟರಮಣ ಭಟ್ಟ. ತಾಯಿ ರಾಧಮ್ಮ. ಕೃಷಿ ವಿಶ್ವವಿದ್ಯಾಲಯದಿಂದ ಎಂ.ಎಸ್‌ಸಿ. ಪದವಿ ಪಡೆದಿದ್ದಾರೆ. ಗೋಡೆಯಹಾಡು, ನೀನಿಲ್ಲದೆ, ಏನಾಯಿತು, ಬನ್ನಿ ನಮ್ಮಹಾಡಿಗೆ ಮುಂತಾದುವು ಇವರ ಕವನಸಂಕಲನಗಳಾಗಿವೆ. ನವನೀತ, ಅಳಿಲು ಸೇವೆ ಮುಂತಾದ ಹನಿಗವನ ಸಂಕಲನಗಳನ್ನೂ ಇವರು ರಚಿಸಿದ್ದಾರೆ. ಹಾಸ್ಯ ಪ್ರಧಾನವಾದ ಕೃತಿಗಳನ್ನು ರಚಿಸಿದ ಇವರು ಮುದ್ದಣ ಕಾವ್ಯ ಪ್ರಶಸ್ತಿ, ಆರ್ಯಭಟ ಪ್ರಶಸ್ತಿ, ಭಾರ್ಗವ ಪ್ರಶಸ್ತಿ ಮುಂತಾದ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

## ಚಟುವಟಿಕೆಗಳು

### ಚರ್ಚಿಸಿರಿ

- "ನಾಲಿಗೆಯ ಮಹಿಮೆ" ಲಲಿತ ಪ್ರಬಂಧವನ್ನು ಓದಿ ನಿಮ್ಮ ಮುಖದಲ್ಲಿ ನಗುಮೂಡಿರಬಹುದು. ಲೇಖಕ ಡುಂಡಿರಾಜರು – "ಹಗಲಿರುಳೂ ದುಡಿಯುವ ನಾಲಿಗೆಯನ್ನು ಕರ್ಮಯೋಗಿ ಅನ್ನಬಹುದಲ್ಲವೇ?" ಎಂಬುದಾಗಿ ಹೇಳಿದ್ದಾರೆ. ಅವರ ಈ ಮಾತಿನ ಬಗ್ಗೆ ನಿಮ್ಮ ಅಭಿಪ್ರಾಯವೇನು? ತರಗತಿಯಲ್ಲಿ ಚರ್ಚಿಸಿರಿ.

### ಉತ್ತರಿಸಿರಿ

- ಪಂಚೇಂದ್ರಿಯಗಳಲ್ಲಿ ನಾಲಿಗೆ ಮಾತ್ರ ಒಬ್ಬಂಟಿ. ಹೇಗೆ?
- ನಾಲಿಗೆ ನಿರ್ವಹಿಸುವ ವಿವಿಧ ಕೆಲಸಗಳು ಯಾವುವು?
- "ನಾವು ಇನ್ನಾದರೂ ನಾಲಿಗೆಯ ಪರವಾಗಿ ಮಾತನಾಡಬೇಕು" ಎಂದು ಲೇಖಕರು ಹೇಳಲು ಕಾರಣವೇನು?
- "ನಾಲಿಗೆ ಬಿಗಿ ಹಿಡಿದು ಮಾತಾಡಿ" ಎಂಬ ಮಾತಿಗೆ ಅರ್ಥವಿಲ್ಲವೆಂದು ಲೇಖಕರು ಹೇಗೆ ಸಮರ್ಥಿಸಿದ್ದಾರೆ?

### ಸಂಭಾಷಣೆ ಬರೆಯಿರಿ

- ಒಂದು ದಿನ ಪಂಚೇಂದ್ರಿಯಗಳಾದ ಕಣ್ಣು, ಕಿವಿ, ಮೂಗು, ನಾಲಿಗೆ ಹಾಗೂ ಚರ್ಮಗಳು ಒಟ್ಟು ಸೇರಿದುವು. ಅವುಗಳು ಲೋಕಾಭಿರಾಮವಾಗಿ ಮಾತನಾಡುತ್ತಿದ್ದಾಗ ತಮ್ಮಲ್ಲಿ ಶ್ರೇಷ್ಠರು ಯಾರೆಂಬ ವಾದ ಹುಟ್ಟಿಕೊಂಡಿತು. ಪರಸ್ಪರ ಬಿಸಿಬಿಸಿ ವಾಗ್ಯುದ್ಧವೇ ನಡೆದುಬಿಟ್ಟಿತು. ಅವುಗಳು ತಮ್ಮ ಶ್ರೇಷ್ಠತೆಯ ಬಗ್ಗೆ ಹೇಗೆ ವಾದಗಳನ್ನು ಮಂಡಿಸಿರಬಹುದು? ಆ ಸಂದರ್ಭವನ್ನು ಊಹಿಸಿಕೊಂಡು ಸಂಭಾಷಣೆ ಬರೆದು ತರಗತಿಯಲ್ಲಿ ಅಭಿನಯಿಸಿರಿ.

### ವಾಕ್ಯ ರಚಿಸಿರಿ

- ಈ ಲೇಖನದಲ್ಲಿ ನಾಲಿಗೆ ಬಿಗಿಹಿಡಿ, ನಾಲಿಗೆ ಜಾರು ಮೊದಲಾದ ಪ್ರಯೋಗಗಳನ್ನು ಕಾಣಬಹುದು. ಈ ರೀತಿಯ ಪದಗಳ ಸಮೂಹವನ್ನು ನುಡಿಗಟ್ಟುಗಳೆನ್ನುವರು. ಇಲ್ಲಿ ನೀಡಿದ ವಿವರಗಳನ್ನು ಗಮನಿಸಿರಿ.

| | | |
|---|---|---|
| ನಾಲಿಗೆ ಉದ್ದ ಮಾಡು | – | ಅತಿಯಾಗಿ ಮಾತನಾಡು |
| ನಾಲಿಗೆ ಸಡಿಲಬಿಡು | – | ಸಿಕ್ಕಾಬಟ್ಟೆ ಮಾತನಾಡು |
| ಎದೆಗಟ್ಟಿ ಮಾಡಿಕೊಳ್ಳು | – | ಧೈರ್ಯ ತಂದುಕೊಳ್ಳು |
| ಕಣ್ಣಿಗೆ ಮಣ್ಣೆರಚು | – | ಮೋಸ ಮಾಡು |

ರೈಲು ಬಿಡು – ಸುಳ್ಳು ಹೇಳು

ಬಾಲ ಬಿಚ್ಚು – ತುಂಟಾಟ ಮಾಡು

ಈ ನುಡಿಗಟ್ಟುಗಳನ್ನು ವಾಕ್ಯಗಳಲ್ಲಿ ಬಳಸಿದಾಗ –

"ಸುಮ್ಮ ಸುಮ್ಮನೆ ನಾಲಿಗೆ ಉದ್ದ ಮಾಡಬೇಡ, ಅದು ಒಳ್ಳೆಯದಲ್ಲ."

"ಎಲ್ಲರೂ ಎದೆ ಗಟ್ಟಿ ಮಾಡಿಕೊಳ್ಳಿ, ನಾನೀಗ ತುಂಬಿ ಹರಿಯುತ್ತಿರುವ ಈ ನದಿಯನ್ನು ದಾಟಲಿದ್ದೇನೆ."

"ಕಳ್ಳನು ಪೊಲೀಸರ ಕಣ್ಣಿಗೆ ಮಣ್ಣೆರಚಿ ತಪ್ಪಿಸಿಕೊಂಡನು."

ಇದೇ ರೀತಿ ಇತರ ನುಡಿಗಟ್ಟುಗಳನ್ನು ಸಂಗ್ರಹಿಸಿ ವಾಕ್ಯಗಳನ್ನು ರಚಿಸಿರಿ. ಗೆಳೆಯರೆಲ್ಲರೂ ಸೇರಿಕೊಂಡು ರಚಿಸಿದ ವಾಕ್ಯಗಳನ್ನು ಒಟ್ಟು ಸೇರಿಸಿ ತರಗತಿಯ ಭಿತ್ತಿಪತ್ರಿಕೆಯಲ್ಲಿ ಪ್ರದರ್ಶಿಸಿರಿ.

## ಲೇಖನ ಚಿಹ್ನೆ ಬಳಸಿರಿ

- ಗದ್ಯಭಾಗವನ್ನು ಸೂಕ್ತ ಲೇಖನ ಚಿಹ್ನೆ ಬಳಸಿ ಪುನಃ ಬರೆಯಿರಿ.

ಆತನಲ್ಲಿಗೆ ಹೋಗಿ ನಮ್ಮ ಅಹವಾಲನ್ನು ತಿಳಿಸೋಣ ಎಂದು ಆನೆ ಹೇಳಿತು ಆನೆಯ ಸಲಹೆಯನ್ನು ಎಲ್ಲಾ ಪ್ರಾಣಿಗಳು ಒಪ್ಪಿದವು ಸ್ವಾಮೀ ನೀವು ನನ್ನನ್ನು ಚೆನ್ನಾಗಿ ಬಲ್ಲಿರಿ ಎಂದು ನಾಯಿ ಹೇಳಿತು ನಾನು ಕೃತಜ್ಞತೆಯ ಪ್ರತೀಕ ಮಾನವನು ನನ್ನನ್ನು ಎಷ್ಟೇ ಶಿಕ್ಷಿಸಲಿ ಆದರೆ ಒಂದು ತುತ್ತು ಅನ್ನವನ್ನು ಒಮ್ಮೆ ಕೊಟ್ಟರೂ ಸಾಕು ನಾನು ನನ್ನ ಜೀವಮಾನವಿಡೀ ಅವನ ಸೇವೆಯನ್ನು ಮಾಡುತ್ತೇನೆ ಆದರೆ ಅವನು ಈ ಎಲ್ಲಾ ಸಹಾಯವನ್ನೂ ಮರೆತು ನನ್ನನ್ನು ಹೀನಾಯವಾಗಿ ಕಾಣುತ್ತಾನೆ ಎಂತಹ ವಿಪರ್ಯಾಸ ಇದು ಸರಿಯೇ ನೀವೇ ಹೇಳಿ

## ವಿವರಣೆ ಬರೆಯಿರಿ

- ನಮಗೆ ವಿವಿಧ ಅನುಭವಗಳನ್ನು ನೀಡುವ ಪಂಚೇಂದ್ರಿಯಗಳ ಪ್ರಾಧಾನ್ಯವನ್ನು ವಿವರಿಸಿರಿ.

## ನಗೆಹನಿ ಸಂಗ್ರಹಿಸಿರಿ

- ನಗೆಹನಿಗಳನ್ನು ಕೇಳುವುದೂ ಓದುವುದೂ ಎಲ್ಲರಿಗೂ ಇಷ್ಟ. ನೀವು ಕೂಡಾ ಕೆಲವು ನಗೆಹನಿಗಳನ್ನು ಸಂಗ್ರಹಿಸಿ ನಗೆಹನಿ ವಿಶೇಷಾಂಕವನ್ನು ತಯಾರಿಸಿರಿ.

# ಆರೋಗ್ಯ ಭಾಗ್ಯ



ಆರೋಗ್ಯವೇ ಭಾಗ್ಯ ಎನ್ನುವರು ತಿಳಿದವರು
ಆರೋಗ್ಯವನೆ ಹಾಳುಗೈಯುವರು ಕೆಲರು
ಮಿತವಾದ ಆಹಾರ ಸೇವನೆಯ ಮಾಡಿ
ಹಿತವಾದ ಜೀವನವ ನಡೆಸುವರು ನೋಡಿ ॥

ರುಚಿಯೆಂದು ಆಹಾರದಮಿತ ಸೇವನೆಯು
ಹಾಳು ಭಾವನೆ ಮೂಡಲಿದುವೆ ಕಾರಣವು
ಸಮತೂಕದಾಹಾರದಲಿ ರೋಗ ಬರದು
ವಿಷಮದಾಹಾರದಲಿ ಜೀವನವೆ ಬರಡು ॥



ಪೌಷ್ಟಿಕಾಹಾರ ಸೇವನೆಯಿಂದ ಜನರು
ಪುಷ್ಟಿಯನು ಪಡೆಯುವರು ಅವರೆ ಬಲಯುತರು
ಆಹಾರ ಸೇವನೆಯ ಸಮಯದಾ ಚಿಂತೆ
ಇಲ್ಲದಿರೆ ಜೀವನವು ಬರಿ ನರಕವಂತೆ ॥

ಪರಿಸರದಿ ಗಿಡ ಮರಗಳನ್ನು ಬೆಳೆಸಿ ಉಳಿಸಿ
ವಾಯು ಮಾಲಿನ್ಯವನು ಬಿಡದೆ ಪರಿಹರಿಸಿ
ನೆಲಜಲವು ಆಹಾರ ಶುಚಿಯಾಗಬೇಕು
ನಲವಿಂದ ಜನಮನವು ಕುಣಿದಾಡಬೇಕು ॥



## ಚಟುವಟಿಕೆಗಳು

### ಹಾಡಿರಿ

- ಈ ಹಾಡನ್ನು ಭಾವಪೂರ್ಣವಾಗಿ ಹಾಡಿರಿ.

### ಉತ್ತರಿಸಿರಿ

- ಜನರು ಪುಷ್ಟಿಯನ್ನು ಪಡೆಯುವುದು ಹೇಗೆ?
- ಜೀವನವು ನರಕವಾಗುವುದು ಯಾವಾಗ?

### ಕರಪತ್ರ ರಚಿಸಿರಿ

- ನಾವು ವಾಸಿಸುತ್ತಿರುವ ಪರಿಸರ ನಮ್ಮ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ ಎಂಬುದು ಎಲ್ಲರಿಗೂ ತಿಳಿದ ವಿಚಾರ. ಆದರೂ ಇಂದಿನ ಜನತೆ ತಮ್ಮ ಪರಿಸರವನ್ನು ಶುಚಿಯಾಗಿಡುವ ವಿಚಾರದಲ್ಲಿ ಅಸಡ್ಡೆ ವಹಿಸುತ್ತಿದೆ. ಪರಿಸರ ಶುಚಿತ್ವದ ಮಹತ್ವದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ಅಗತ್ಯವಾದ ಒಂದು ಕರಪತ್ರವನ್ನು ರಚಿಸಿರಿ.

### ಪದ ವಿಂಗಡಿಸಿರಿ

- ರುಚಿಯೆಂದು
- ಆಹಾರದಮಿತ
- ಮೂಡಲಿದುವೆ
- ವಿಷಮದಾಹಾರ
- ಪೌಷ್ಟಿಕಾಹಾರ
- ಶುಚಿಯಾಗಬೇಕು

### ಘೋಷಣ ವಾಕ್ಯ ರಚಿಸಿರಿ

- ಇಲ್ಲಿ ನೀಡಿರುವ ಘೋಷಣ ವಾಕ್ಯವನ್ನು ಗಮನಿಸಿರಿ. 'ಆರೋಗ್ಯದ ಮಹತ್ವ'ವನ್ನು ಸಾರುವ ಇತರ ಘೋಷಣ ವಾಕ್ಯಗಳನ್ನು ರಚಿಸಿ ತರಗತಿಯಲ್ಲಿ ಮಂಡಿಸಿರಿ.

  ಉತ್ತಮವಾಗಿರಲು ಆರೋಗ್ಯ
  ಅದುವೆ ಮನುಜನ ಸೌಭಾಗ್ಯ

## ಕವನ ಮುಂದುವರಿಸಿರಿ

- ಈ ಕವನವನ್ನು ಮುಂದುವರಿಸಿ ಸೂಕ್ತ ಶೀರ್ಷಿಕೆ ನೀಡಿರಿ.

ಪರಿಸರವನ್ನು ಶುಚಿಗೊಳಿಸೋಣ
ರೋಗವ ದೂರೀಕರಿಸೋಣ
ಮಾಲಿನ್ಯವ ಸಂಸ್ಕರಿಸೋಣ
ಪ್ರಕೃತಿಯನುಳಿಸಿ ಬೆಳೆಸೋಣ
........................................
........................................

## ಪೂರ್ತಿಗೊಳಿಸಿರಿ

- ಆವರಣದಿಂದ ಸೂಕ್ತ ಪದವನ್ನು ಆಯ್ದು ಬಿಟ್ಟ ಸ್ಥಳವನ್ನು ಪೂರ್ತಿಗೊಳಿಸಿರಿ.
  - ಮಿತವಾದ ಆಹಾರವನ್ನು.................................( ಸೇವಿಸಬಾರದು, ಸೇವಿಸಬೇಕು)
  - ಪರಿಸರದಲ್ಲಿ ಗಿಡಮರಗಳನ್ನು ಬೆಳೆಸಿ.....................(ಉಳಿಸಬೇಕು, ಉಳಿಸಬಾರದು)
  - ನಾವು ಸೇವಿಸುವಆಹಾರ ಪದಾರ್ಥಗಳು.....................(ಶುಚಿಯಾಗಿರಬಾರದು, ಶುಚಿಯಾಗಿರಬೇಕು)
  - ಜನಮನವು ನಲವಿಂದ...................... (ಕುಣಿದಾಡಬೇಕು, ಕುಣಿದಾಡಬಾರದು)

## ಪ್ರಬಂಧ ರಚಿಸಿರಿ

- 'ಆರೋಗ್ಯದ ಮಹತ್ವ' ಎಂಬ ವಿಷಯದ ಬಗ್ಗೆ ವಿವಿಧ ಮೂಲಗಳಿಂದ ಮಾಹಿತಿ ಸಂಗ್ರಹಿಸಿ ಪ್ರಬಂಧ ರಚಿಸಿರಿ.

# ತಾಯಿಯ ಋಣ

ಅದೊಂದು ಸುಸಜ್ಜಿತ ಅತ್ಯಾಧುನಿಕ ಖಾಸಗಿ ಆಸ್ಪತ್ರೆ. ಕಾರು, ರಿಕ್ಷಾಗಳು ಬಂದು ರೋಗಿಗಳನ್ನು ಇಳಿಸಿ ಹೋಗುವ, ಕರೆದುಕೊಂಡುಹೋಗುವ ತರಾತುರಿ ಎಂದಿನಂತೆ ಅಂದೂ ಇತ್ತು. ಬೆಳಗ್ಗೆ ಸುಮಾರು 9 ಗಂಟೆಯ ಹೊತ್ತಿಗೆ ಒಂದು ರಿಕ್ಷಾ ಬಂದು ನಿಂತಿತು. ಕೂಡಲೇ ಹದಿಹರಯದ ಬಾಲಕರಿಬ್ಬರು ನಡುವಯಸ್ಸಿನ ಮಹಿಳೆಯನ್ನು ಬಗಲಲ್ಲಿ ಕೈಹಾಕಿ ಎತ್ತಿಕೊಂಡು ಬಂದು ಒಳಗೆ ಬೆಂಚಿನ ಮೇಲೆ ಮಲಗಿಸಿದರು. ಆ ಮಹಿಳೆ ಕ್ಷೀಣವಾಗಿ ನರಳುತ್ತಿದ್ದಳು. ಒಬ್ಬ ಬಾಲಕ ಸ್ವಾಗತಕಾರಿಣಿಯ ಬಳಿಗೆ ಹೋಗಿ "ಮೇಡಂ, ಅಲ್ಲಿ ಮಲಗಿದ್ದಾರಲ್ಲ ಅವರು ತೀವ್ರವಾದ ಹೊಟ್ಟೆನೋವಿನಿಂದ ಸಂಕಟಪಡುತ್ತಿದ್ದಾರೆ. ದಯವಿಟ್ಟು ವೈದ್ಯರನ್ನು ಕರೆಸಿ" ಎಂದು ವಿನಂತಿಸಿಕೊಂಡನು. ಅಷ್ಟರಲ್ಲಿ ಅಲ್ಲಿಗೆ ಬಂದ ದಾದಿ ಶಾಂತಾಬಾಯಿ "ತಪಾಸಣೆ ಮಾಡಿಸೋಣ. ಈಗ ವೈದ್ಯರು ಬರುತ್ತಾರೆ. ನೀವು ಕೌಂಟರಿನಲ್ಲಿ ಎರಡು ಸಾವಿರ ರೂಪಾಯಿಗಳನ್ನು ಪಾವತಿಸಿ ಪ್ರವೇಶ ಚೀಟಿಯನ್ನು ಮಾಡಿಸಿ" ಎಂದರು. "ಹಾಂ! ಎರಡು ಸಾವಿರ!" ಆ ಬಾಲಕ ಉದ್ಗರಿಸಿದ. "ದಾದಿಯಮ್ಮ, ದಯಮಾಡಿ ಅವರಿಗೆ ಉಪಚಾರ ಮಾಡಿಸಿ. ಈಗ ನಮ್ಮ ಬಳಿ ಹಣವಿಲ್ಲ. ಎಲ್ಲಿಂದಾದರೂ ತಂದು ಹಣವನ್ನು ಖಂಡಿತಾ ಪಾವತಿಸುತ್ತೇನೆ. ಇವರ ಆರೋಗ್ಯ ತುಂಬಾ ಬಿಗಡಾಯಿಸಿದೆ" ಎಂದು ಬೇಡಿಕೊಂಡ.

ಶಾಂತಾಬಾಯಿ ಅವರತ್ತ ನೋಡುತ್ತಾ "ಇದು ಇಲ್ಲಿಯ ನಿಯಮ. ನಾನು ಅಸಹಾಯಕಿ, ನೀವು ಇವರನ್ನು ಸರಕಾರಿ ಆಸ್ಪತ್ರೆಗೆ ಸೇರಿಸಿ" ಎಂದು ಹೇಳಿ ಪಟಪಟ ಚಪ್ಪಲಿ ಸದ್ದುಮಾಡುತ್ತಾ ನಡೆದಳು. ಬಾಲಕರ ಕಣ್ಣಲ್ಲಿ ನೀರು ಜಿನುಗಿತು. ಏನು ಮಾಡುವುದೆಂದು ತೋಚದೆ ಇರುವಾಗ ಒಬ್ಬರು ಕೋಟನ್ನು ಹಿಡಿದುಕೊಂಡು ಒಳಗೆ ಬರುತ್ತಿದ್ದಂತೆ "ಯಾರಿದು ಇಲ್ಲಿ ಮಲಗಿರುವುದು? ಏನು ಸಮಾಚಾರ?" ಎಂದು ಕೇಳುತ್ತಾ ಮುಂದೆ ಬಂದರು. ಬಾಲಕರಿಬ್ಬರೂ ಓಡೋಡುತ್ತಾ ಬಂದು ವೈದ್ಯರ ಕಾಲಿಗೆಬಿದ್ದರು. "ಡಾಕ್ಟರೇ, ಇವರು ನಿನ್ನೆಯಿಂದ ಹೊಟ್ಟೆನೋವು .............." ಎಂದು ಹೇಳುತ್ತಿರುವಾಗಲೇ ವೈದ್ಯರು ಮಹಿಳಾ ರೋಗಿಯತ್ತ ಹೆಜ್ಜೆ ಹಾಕಿದರು. ಹಾಗೆ ಹೋಗುತ್ತಾ "ಈಕೆಯು ಹೆಸರೇನು? ನಿಮಗೇನಾಗಬೇಕು?" ಎಂದು ಕೇಳಿದರು. ಬಾಲಕರಿಬ್ಬರೂ ವೈದ್ಯರನ್ನು ಹಿಂಬಾಲಿಸುತ್ತಾ



"ಸರ್, ಇವರು ನಮಗೆ ತಾಯಿ ಇದ್ದ ಹಾಗೆ. ಹೆಸರು ತುಳಸಿಯಮ್ಮ. ಈಕೆಯ ಅಣ್ಣ ಹಣ ತರುತ್ತೇನೆಂದು ಹೋಗಿದ್ದಾರೆ" ಎಂದು ದೈನ್ಯಭಾವದಿಂದ ಹೇಳಿದರು. ಆಗಲೇ ವೈದ್ಯರು ತುಳಸಿಯಮ್ಮನ ತಪಾಸಣೆಗೆ ತೊಡಗಿದ್ದರು. ಅಲ್ಲಿಂದಲೇ "ಶಾಂತಾಬಾಯಿ, ಡಾಕ್ಟರ್ ಮುಕುಂದರಿಗೆ ಹೇಳಿ ಈ ಅಮ್ಮನ ಹೊಟ್ಟೆಯ ಸ್ಕ್ಯಾನಿಂಗ್ ಮಾಡಿ ತಕ್ಷಣ ವರದಿ ಒಪ್ಪಿಸಲು ಹೇಳಿ. ಡಾಕ್ಟರ್ ಮಾಲಿನಿಯವರಲ್ಲಿ ಶಸ್ತ್ರಕ್ರಿಯೆಗೆ ಬೇಕಾದ ಸಿದ್ಧತೆ ಮಾಡಲು ಹೇಳಿರಿ. ಹಾಗೆಯೇ ಸೋಮಯ್ಯನನ್ನು ಕರೆಸಿ ಇವರನ್ನು ಆಪರೇಷನ್ ಕೊಠಡಿಗೆ ಒಯ್ಯಲು ಹೇಳಿ" ಎಂದು ಹೇಳಿ ತನ್ನ ಕೋಣೆಯ ಕಡೆಗೆ ನಡೆದರು.

ಆ ಮೇಲೆ ಎಲ್ಲ ಕೆಲಸಗಳು ಚಕಚಕನೆ ನಡೆದು ಹೋದುವು. ಹೊರಗೆ ಬಾಲಕರು ಮತ್ತು ತುಳಸಿಯಮ್ಮನ ಅಣ್ಣ ರಂಗಣ್ಣ ಕಣ್ಣು ಪಿಳಿಪಿಳಿ ಮಾಡುತ್ತಾ ಕೊಠಡಿಯ ಹೊರಗಿರುವ ಕೆಂಪು ದೀಪ ನೋಡುತ್ತಾ ಅಲ್ಲಿಯೇ ಇದ್ದ ಬೆಂಚಿನ ಮೇಲೆ ಕುಳಿತುಕೊಂಡರು. ಅವರಿಗೆ ಸಮಯ ಕಳೆಯುವುದೇ ಕಷ್ಟವಾಯಿತು. ಕ್ಷಣಕ್ಷಣವೂ ಯುಗದಂತೆ ಅನಿಸತೊಡಗಿತು.

ಸ್ವಲ್ಪ ಹೊತ್ತಿನಲ್ಲಿ ಹಸಿರು ಮುಸುಕಿನ ವೈದ್ಯರು ಹೊರಗೆ ಬಂದು "ಎಲ್ಲ ಚೆನ್ನಾಗಿ ಆಯಿತು, ಗಾಬರಿಪಡಬೇಡಿ" ಎಂದು ಸಮಾಧಾನಿಸಿ ತನ್ನ ಕೊಠಡಿಗೆ ಹೋದರು. ಹಿಂದಿನಿಂದಲೇ ಇಬ್ಬರು ತುಳಸಿಯಮ್ಮನನ್ನ ಮಲಗಿಸಿದ ಸ್ಟ್ರೆಚರನ್ನು ತಳ್ಳಿಕೊಂಡು ತೀವ್ರ ನಿಗಾ ವಿಭಾಗದತ್ತ ಹೋದರು. ಅವರಲ್ಲಿ ಒಬ್ಬನು ರಂಗಣ್ಣನತ್ತ ನೋಡಿ "ಎಚ್ಚರ ಬರಲು ಎರಡು ಗಂಟೆಗಳಾದರೂ ಬೇಕು" ಎಂದು ಹೇಳಿದ. ರಂಗಣ್ಣ ಬಿಟ್ಟ ಬಾಯಿ ಬಿಟ್ಟಂತೆ, ಗಾಬರಿಯಿಂದ ತನ್ನ ತಂಗಿಯನ್ನು ನೋಡಿದನು. ಸಮಾಧಾನದ ನಿಟ್ಟುಸಿರೊಂದು ತಾನಾಗಿಯೇ ಹೊರಬಿತ್ತು. ಶಾಂತಾಬಾಯಿ ಕೈಯಲ್ಲಿ ಒಂದು ಕಾಗದ ಹಿಡಿದುಕೊಂಡು ಪ್ರಶ್ನಿಸಿದಾಗ ತಂಗಿಯ ಅನಾರೋಗ್ಯದ ಗುಂಗಿನಲ್ಲಿದ್ದ ರಂಗಣ್ಣ ಎಚ್ಚರಗೊಂಡನು. ಅವಳು ರೋಗಿ ಮತ್ತು ರೋಗಿಯೊಂದಿಗೆ ಬಂದವರ ವಿವರಗಳನ್ನು ಬರೆದುಕೊಳ್ಳತೊಡಗಿದಳು. ಅವಳು ಬಾಲಕರ ಬಗ್ಗೆ ವಿಚಾರಿಸಿದಾಗ "ಒಬ್ಬ ರಘು, ಇನ್ನೊಬ್ಬ ಹರಿ. ಇವರು ನಮ್ಮ ಮನೆಯಲ್ಲಿ ವಾರಾನ್ನ ಊಟ ಮಾಡಿಕೊಂಡು ಹೈಸ್ಕೂಲಿನಲ್ಲಿ ಓದುತ್ತಾರೆ. ನನ್ನ ತಂಗಿಗೆ ಗಂಡ, ಮಕ್ಕಳು ಯಾರೂ ಇಲ್ಲ. ಕಷ್ಟದಲ್ಲಿರುವ ವಿದ್ಯಾರ್ಥಿಗಳಿಗೆ ವಾರಾನ್ನ ನೀಡಿ ನೆರವಾಗುವುದರ ಮೂಲಕ ಸಮಾಜಕ್ಕೆ ಅಳಿಲು ಸೇವೆ ಸಲ್ಲಿಸುತ್ತಿದ್ದಾರೆ" ಎಂದು ರಂಗಣ್ಣ ನುಡಿದನು. ಶಾಂತಾಬಾಯಿ ಎಲ್ಲರ ವಿವರಗಳನ್ನು ದಾಖಲಿಸಿ ವೈದ್ಯರ ಕೋಣೆಗೆ ಹೊರಟಳು.

ಆಗ ತಾನೆ ಉಡುಪು ಬದಲಾಯಿಸಿದ ವೈದ್ಯರು ಶಾಂತಾಬಾಯಿಯ ಕಡೆಗೆ ತಿರುಗಿ "ಇವತ್ತು ವಿಶೇಷ ಚಹಾಕೂಟವನ್ನು ಏರ್ಪಾಡು ಮಾಡಬೇಕು. ಇದರಲ್ಲಿ ಸಹೋದ್ಯೋಗಿಗಳೂ ಸಿಬ್ಬಂದಿಗಳೂ ಪಾಲ್ಗೊಳ್ಳಬೇಕು. ರಂಗಣ್ಣನನ್ನೂ ಆ ಹುಡುಗರನ್ನೂ ಈ ಚಹಾಕೂಟಕ್ಕೆ ಆಮಂತ್ರಿಸಬೇಕು" ಎಂದರು. ವೈದ್ಯರ ಸೂಚನೆಯಂತೆ ಆಸ್ಪತ್ರೆಯ ಪ್ರತಿಯೊಬ್ಬರೂ ಸಭೆಗೆ ಹಾಜರಾಗಿದ್ದರು. ಅವರು ಆಸ್ಪತ್ರೆಯ ಸಹೋದ್ಯೋಗಿಗಳನ್ನೂ ಸಿಬ್ಬಂದಿಗಳನ್ನೂ ಹೊಗಳುತ್ತಾ ಚಿಕ್ಕ ಕತೆಯೊಂದನ್ನು ಹೇಳಿದರು.

ಒಬ್ಬ ಚುರುಕಾದ ಹುಡುಗನಿದ್ದನು. ಆದರೆ ಅವನ ಮನೆಯಲ್ಲಿ ವಿದ್ಯಾಭ್ಯಾಸಕ್ಕೆ ಅನುಕೂಲ ಇರಲಿಲ್ಲ. ಒಂದು ಹೊತ್ತಿನ ಊಟಕ್ಕೂ ಕಷ್ಟ. ಯಾರೋ ಪುಣ್ಯಾತ್ಮರ ಮನೆಯಲ್ಲಿ ಊಟ ಮಾಡುತ್ತಾ ಆತ ಶಿಕ್ಷಣವನ್ನು ಮುಂದುವರೆಸಿ ಒಳ್ಳೆಯ ಅಂಕಗಳನ್ನು ಗಳಿಸಿ ಸ್ಕಾಲರ್‌ಶಿಪ್ ಪಡೆದನು. ಉನ್ನತ ವಿದ್ಯಾಭ್ಯಾಸಕ್ಕಾಗಿ ಮುಂಬೈಗೆ ಹೋಗಬೇಕಿತ್ತು. ಆದರೆ ಹಣವಿಲ್ಲದೆ ಕೊರಗುತ್ತಿದ್ದ ಹುಡುಗನ ಅಳಲನ್ನು ಕೇಳಿಸಿಕೊಂಡ ಮನೆಯೊಡತಿ "ಮಗೂ, ನೀನು ಸ್ನಾನ ಮಾಡಿ ದೇವರ ಪೂಜೆ ಮಾಡು. ಮುಂದೆ ನೋಡೋಣ" ಎಂದಳು.

ಆ ಹುಡುಗನು ಭಕ್ತಿಯಿಂದ ದೇವರ ಪೂಜೆ ಮಾಡಿ ತನ್ನ ಕಷ್ಟವನ್ನು ದೇವರ ಮುಂದೆ ಮನಸಾರೆ ಹೇಳುತ್ತಿದ್ದನು.

ಆಗ ಮನೆಯೊಡತಿ "ತೀರ್ಥ ಕೊಡಪ್ಪ. ಹಾಗೆ ಆ ದೇವರ ಪೆಟ್ಟಿಗೆಯ ಕೆಳಗೆ ಒಂದು ಸಣ್ಣ ಡಬ್ಬಿ ಇದೆ. ಅದನ್ನು ಈಚೆ ಕೊಡು" ಎಂದಳು. ಹುಡುಗನು ಆ ಡಬ್ಬಿಯನ್ನು ತೆಗೆದು ಮನೆಯೊಡತಿಗೆ ನೀಡಿದನು. ಅವಳು ಅದರ ಮುಚ್ಚಳ ತೆರೆದು ಅದರಲ್ಲಿದ್ದ ಎರಡು ಪಾಟ್ಲಿಗಳನ್ನು ತೆಗೆದು ಹುಡುಗನ ಕೈಯಲ್ಲಿಟ್ಟು "ಇದು ನಿನ್ನ ಮುಂದಿನ ವಿದ್ಯಾಭ್ಯಾಸಕ್ಕೆ" ಎಂದಳು. ಹುಡುಗನು ಅವಾಕ್ಕಾಗಿ ನೋಡುತ್ತಾ ಧನ್ಯತೆಯಿಂದ ಅವಳ ಪಾದಗಳನ್ನು ಹಿಡಿದು ಬಿಕ್ಕಳಿಸಿದನು. ಅವಳ ಕಣ್ಣುಗಳಲ್ಲೂ ನೀರು ತುಂಬಿಕೊಂಡಿತು. "ನನ್ನ ಕುಂಕುಮ ಅಳಿಸಿ ಹೋದ ಮೇಲೆ ಇದರ ಅವಶ್ಯಕತೆ ಬೀಳಲಿಲ್ಲ. ನೀನು ನನ್ನ ಮಗನಂತೆ " ಎಂದು ಹುಡುಗನ ಕೈಯಲ್ಲಿಟ್ಟು ಆಶೀರ್ವದಿಸಿದಳು. ಹುಡುಗನು ಆ ಪಾಟ್ಲಿಗಳನ್ನು ಮಾರಿ ಮುಂಬೈಗೆ ಹೋಗಿ ವೈದ್ಯಕೀಯ ವಿದ್ಯಾಭ್ಯಾಸವನ್ನು ಮುಗಿಸಿ ಡಾಕ್ಟರನಾದನು" ಎಂದು ಕತೆಯನ್ನು ಪೂರ್ತಿಗೊಳಿಸಿದಾಗ ರಂಗಣ್ಣನು ವೈದ್ಯರ ಮುಖವನ್ನೇ ತದೇಕದೃಷ್ಟಿಯಿಂದ ನೋಡಿದನು.



ಇದುವರೆಗೆ ರಂಗಣ್ಣನ ಮನಸ್ಸಿನಲ್ಲಿದ್ದ ಅಸ್ಪಷ್ಟ ಚಿತ್ರಣ ಈಗ ಸ್ಪಷ್ಟವಾಗತೊಡಗಿತು. "ನೀವು ಶ್ಯಾಮು ಅಲ್ಲವೇ?" ರಂಗಣ್ಣ ಕೇಳಿಯೇಬಿಟ್ಟರು. "ಹೌದು ನಾನೇ ಶ್ಯಾಮ ಕುಲಕರ್ಣಿ. ನಿಮ್ಮ ಮನೆಯ ವಾರಾನ್ನದ ಹುಡುಗ. ಆ ತಾಯಿಯ ಆಶೀರ್ವಾದದಿಂದ ನಾನು ಇಷ್ಟು ಮುಂದೆ ಬಂದೆ. ನಿಮಗೆ ತಿಳಿಸಬೇಕೆಂದು ಹಲವು ಪತ್ರಗಳನ್ನು ಬರೆದರೂ ಎಲ್ಲವೂ ತಿರುಗಿ ನನ್ನ ಕೈಸೇರಿದುವು. 'ಆ ತಾಯಿಯ ಋಣ ತೀರಿಸಲು ಸಾಧ್ಯವಿಲ್ಲದಿದ್ದರೂ ನನ್ನ ಸಾಧನೆಯನ್ನು ತಿಳಿಸಲು ಸಾಧ್ಯವಾಗಲಿಲ್ಲವಲ್ಲ' ಎಂಬ ಬೇಸರವಿತ್ತು. ಇಂದು ನಿಮ್ಮಿಂದಾಗಿ ಆ ಮಹಾತಾಯಿಯನ್ನು ಕಾಣುವಂತಾಯಿತು" ಎಂದು ವೈದ್ಯರು ರಂಗಣ್ಣನಿಗೆ ಬಗ್ಗಿ ನಮಸ್ಕರಿಸಿದರು. ರಂಗಣ್ಣ ವೈದ್ಯರ ತೋಳುಗಳನ್ನು ಹಿಡಿದೆತ್ತಿ ಎದೆಗಪ್ಪಿಕೊಂಡನು. ಇಬ್ಬರ ಕಣ್ಣುಗಳಿಂದ ಆನಂದಬಾಷ್ಪ ಸುರಿಯಿತು.

## ಚಟುವಟಿಕೆಗಳು

### ಚರ್ಚಿಸಿರಿ

- ಈ ಕತೆಯ ನಾಯಕ ಶ್ಯಾಮ ಕುಲಕರ್ಣಿ. ತುಳಸಿಯಮ್ಮ ಆತನನ್ನು ಹೆತ್ತ ತಾಯಿಯಲ್ಲ. ಆದರೂ ಆತ ಆಕೆಯನ್ನು 'ಮಹಾತಾಯಿ'ಎನ್ನುತ್ತಾನೆ. ಈ ವಿಚಾರದ ಬಗ್ಗೆ ನಿಮ್ಮ ಅಭಿಪ್ರಾಯವೇನು? ಚರ್ಚಿಸಿರಿ.

## ಉತ್ತರಿಸಿರಿ

- ತುಳಸಿ ಬಾಯಿಯನ್ನು ಆಸ್ಪತ್ರೆಗೆ ಸೇರಿಸಲು ಕಾರಣವೇನು?
- ಬಾಲಕರಿಬ್ಬರ ಕಣ್ಣಲ್ಲಿ ನೀರು ಜಿನುಗಿದ್ದೇಕೆ?
- ತುಳಸಿಯಮ್ಮ ಹೇಗೆ ಜೀವನ ಸಾಗಿಸುತ್ತಿದ್ದಳು?
- ಶ್ಯಾಮ ಕುಲಕರ್ಣಿ ವೈದ್ಯನಾದುದು ಹೇಗೆ?
- ಶ್ಯಾಮ ಕುಲಕರ್ಣಿ ತುಳಸಿಯಮ್ಮನ ಋಣವನ್ನು ತೀರಿಸಿದ್ದು ಹೇಗೆ?

## ದಿನಚರಿ ಬರೆಯಿರಿ

- ಡಾ. ಶ್ಯಾಮ ಕುಲಕರ್ಣಿಯವರು ತುಳಸಿಯಮ್ಮನ ಖಾಯಿಲೆ ಗುಣಪಡಿಸಿದ ತೃಪ್ತಿಯಿಂದ ಅಂದಿನ ರಾತ್ರಿ ಎರಡು ತುತ್ತು ಹೆಚ್ಚೇ ಊಟ ಮಾಡಿದರು. ಹಾಸಿಗೆ ಸೇರುವ ಮುನ್ನ ದಿನಚರಿ ಬರೆಯುವ ಹವ್ಯಾಸ ಅವರಿಗಿತ್ತು. ಅವರು ತಮ್ಮ ದಿನಚರಿ ಪುಸ್ತಕ ಹಾಗೂ ಲೇಖನಿಯನ್ನು ತೆಗೆದುಕೊಂಡರು. ಬರೆಯತೊಡಗಿದಾಗ ತುಳಸಿಯಮ್ಮ, ರಂಗಣ್ಣ, ರಘು, ಹರಿ, ಹೀಗೆ ಹಲವು ಮುಖಗಳು ಅವರ ಮನಃಪಟಲದಲ್ಲಿ ಹಾದುಹೋದುವು. ಹಾಗೆಯೇ ಅವರ ವಿದ್ಯಾಭ್ಯಾಸದ ದಿನಗಳು ನೆನಪಾದವು. ಅವರು ಬರೆದ ದಿನಚರಿ ಹೇಗಿರಬಹುದು? ಊಹಿಸಿ ಬರೆಯಿರಿ.

## ವಾಕ್ಯ ರಚಿಸಿರಿ

- ಕೆಳಗೆ ನೀಡಿದ ಪದ ಹಾಗೂ ಅದರ ವಿರೋಧಾರ್ಥ ಪದಗಳನ್ನು ಉಪಯೋಗಿಸಿ ಮಾದರಿಯಂತೆ ವಾಕ್ಯಗಳನ್ನು ರಚಿಸಿರಿ.

  ಮಾದರಿ : ರಂಗಣ್ಣನ ಮನದಲ್ಲಿದ್ದ ಅಸ್ಪಷ್ಟ ಚಿತ್ರಣವು ಈಗ ಸ್ಪಷ್ಟವಾಗತೊಡಗಿತು.

  ಪದಗಳು : ಆರೋಗ್ಯ, ಕಷ್ಟ , ಸಮಾಧಾನ , ಅನುಕೂಲ, ಪೂರ್ಣ, ಸಾಧ್ಯ, ಮುಂದೆ

## ಪಾತ್ರಚಿತ್ರಣ ರಚಿಸಿರಿ

- 'ತಾಯಿಯ ಋಣ' ಕತೆಯಲ್ಲಿ ಬಂದ ವಿವಿಧ ಕಥಾಪಾತ್ರಗಳು ಯಾವುವು? ಅವುಗಳಲ್ಲಿ ನಿಮಗಿಷ್ಟವಾದ ಪಾತ್ರದ ಕುರಿತು ಪಾತ್ರಚಿತ್ರಣ ತಯಾರಿಸಿರಿ.

## ಶೀರ್ಷಿಕೆ ಕೊಡಿರಿ

- 'ತಾಯಿಯ ಋಣ' ಕತೆಗೆ ಸೂಕ್ತವೆನಿಸುವ ಇನ್ನೆರಡು ಶೀರ್ಷಿಕೆಗಳನ್ನು ಕೊಡಿರಿ. ನಿಮ್ಮ ಆಯ್ಕೆಯನ್ನು ಸಮರ್ಥಿಸಿರಿ.

## ಊಹಿಸಿ ಬರೆಯಿರಿ

- ಕೊಠಡಿಯ ಹೊರಗಿರುವ ಕೆಂಪುದೀಪ ನೋಡುತ್ತಾ ಅಲ್ಲಿದ್ದ ಕಲ್ಲು ಬೆಂಚಿನ ಮೇಲೆ ಕುಳಿತ ರಂಗಣ್ಣನ ಮನದಲ್ಲಿ ಮೂಡಿದ ಯೋಚನೆಗಳೇನಾಗಿರಬಹುದು? ಊಹಿಸಿ ಬರೆಯಿರಿ.

## ಕಲಿಕಾ ಸಾಧನೆಗಳು

- ಆಲಿಸಿ ಓದಿ ತಿಳಿದ ವಿಚಾರಗಳನ್ನು ತರ್ಕಬದ್ಧವಾಗಿ ವಿಶ್ಲೇಷಿಸಿ ಸ್ವಂತ ಅಭಿಪ್ರಾಯಗಳನ್ನು ವಾಚಿಕವಾಗಿ ಮತ್ತು ಲಿಖಿತವಾಗಿ ಪ್ರಕಟಿಸುವುದು.
- ಗದ್ಯ–ಪದ್ಯಗಳನ್ನು ಆಶಯ ಸ್ಪಷ್ಟತೆಯೊಂದಿಗೆ ನಿರರ್ಗಳವಾಗಿ ಮತ್ತು ಸ್ಪುಟತೆಯೊಂದಿಗೆ ಓದುವುದು ಮತ್ತು ಪ್ರಧಾನ ಆಶಯಗಳನ್ನು ಬಾಯ್ದೆರೆಯಾಗಿ ಮಂಡಿಸುವುದು.
- ಜನಪದಗೀತೆ, ಕವಿತೆಗಳ ರಾಗ, ತಾಳ, ಭಾವ ಎಂಬಿವುಗಳನ್ನು ಆಸ್ವಾದಿಸುವುದು, ತಾಳದೊಂದಿಗೆ ಭಾವನಾತ್ಮಕವಾಗಿ ಹಾಡಿ ಮಂಡಿಸುವುದು. ಕಂಠಪಾಠ ಮಾಡುವುದು.
- ಸ್ವಂತ ಅಭಿರುಚಿಗೆ ತಕ್ಕಂತೆ ಕಥೆ, ಕವಿತೆ, ನಾಟಕ, ಪ್ರವಾಸಕಥನ ಮೊದಲಾದ ವಿಭಿನ್ನ ವಿಭಾಗಗಳಲ್ಲಿ ಒಳಗೊಂಡ ಪುಸ್ತಕಗಳನ್ನು ಗುರುತಿಸಿ ಓದುವುದು ಮತ್ತು ಓದಿ ತಿಳಿದ ವಿಚಾರಗಳನ್ನು ವಿವಿಧ ರೀತಿಯಲ್ಲಿ ಪ್ರಕಟಪಡಿಸುವುದು.
- ಪರಿಚಿತವಾದ ವಿಷಯಗಳನ್ನು ವಸ್ತುವಾಗಿರಿಸಿಕೊಂಡು ಕಥೆ, ಕವಿತೆ ಮೊದಲಾದ ಸೃಜನಾತ್ಮಕ ರಚನೆಗಳನ್ನು ಮಾಡುವುದು.
- ಸೃಜನಾತ್ಮಕ ರಚನೆಗಳನ್ನು ಓದಿ, ಅವುಗಳ ಪ್ರಧಾನ ಆಶಯ ಕೆಡದಂತೆ ಸಂಕ್ಷಿಪ್ತವಾಗಿ ಬರೆಯುವುದು.
- ಸೂಕ್ತ ಸೂಚಕಗಳನ್ನು ರೂಪಿಸಿ ಸ್ವಂತ ಹಾಗೂ ಇತರರ ರಚನೆಗಳ ಮೌಲ್ಯ ನಿರ್ಣಯಿಸುವುದು.
- ವಿವಿಧ ಕವಿತೆಗಳನ್ನು ಕಂಠಪಾಠ ಮಾಡಿ ಸೂಕ್ತವಾದ ರಾಗ, ತಾಳಗಳೊಂದಿಗೆ ಭಾವಪೂರ್ಣವಾಗಿ ಹಾಡುವುದು.
- ಪದಶುದ್ಧಿ, ವಾಕ್ಯಶುದ್ಧಿ, ಲೇಖನಚಿಹ್ನೆ ಮೊದಲಾದ ಬರವಣಿಗೆಗೆ ಅಗತ್ಯವಾದ ಅಂಶಗಳನ್ನೊಳಗೊಂಡು ಮಾಡಿದ ರಚನೆಗಳ ಮೌಲ್ಯನಿರ್ಣಯ ಮಾಡುವುದರೊಂದಿಗೆ ಉತ್ತಮಗೊಳಿಸುವುದು.
- ಸ್ವಂತ ಆಶಯಗಳನ್ನು ಶಿಷ್ಟಭಾಷೆಯಲ್ಲಿ ತಪ್ಪಿಲ್ಲದೆ ಬರೆಯುವುದು.
- ಪದಗಳು, ಪದಪ್ರಯೋಗಗಳು, ಗಾದೆಗಳು, ಶೈಲಿಗಳು ಮೊದಲದ ಭಾಷಾ ಘಟಕಗಳನ್ನು ಅಳವಡಿಸಿ ಸಂದರ್ಭಾನುಸಾರವಾಗಿ ಮಾತನಾಡುವುದು. ಸ್ವಂತ ರಚನೆಗಳಲ್ಲಿ ಅವುಗಳನ್ನು ಸಂದರ್ಭಾನುಸಾರವಾಗಿ ಉಪಯೋಗಿಸುವುದು.
- ಪಾಠಭಾಗದಲ್ಲಿರುವ ಪದಗಳನ್ನು ಅರ್ಥವ್ಯತ್ಯಾಸವಿಲ್ಲದೆ ವಿಂಗಡಿಸಿ ಬರೆಯುವುದು ಮತ್ತು ಸೇರಿಸಿ ಬರೆಯುವ ಚಟುವಟಿಕೆಯಲ್ಲಿ ತೊಡಗುವುದು.
- ಓದಿದ ವಿಚಾರಗಳನ್ನು ವಿಶ್ಲೇಷಿಸಿ ತನ್ನ ಅಭಿಪ್ರಾಯಗಳನ್ನು ಭಾಷಣ, ಪ್ರಬಂಧ ಮತ್ತು ಚರ್ಚೆಗಳ ಮೂಲಕ ಮಂಡಿಸುವುದು.

6

# ಪರಿವರ್ತನೆ

ಈ ಪ್ರಪಂಚವು ವಿಸ್ಮಯಗಳ ಲೋಕ. ಮಾನವನ ಅದಮ್ಯವಾದ ಕುತೂಹಲವು ಹಲವಾರು ಸಂಶೋಧನೆಗಳಿಗೆ ನಾಂದಿಯಾಯಿತು. ನಮ್ಮ ಜೀವನಕ್ರಮವನ್ನು ಸರಳಗೊಳಿಸಲು, ಇಂತಹ ವಿಚಾರಗಳಲ್ಲಿ ಇನ್ನೂ ಹೆಚ್ಚಿನ ಆಸಕ್ತಿ ಮೂಡಿಸಲು ಇವುಗಳು ಸಹಕಾರಿಯಾಗಿವೆ. ಪ್ರತಿಯೊಬ್ಬರೂ ಪರಸ್ಪರ ಪ್ರೀತಿ, ವಿಶ್ವಾಸ, ಮಾನವೀಯತೆಗಳನ್ನು ಬೆಳೆಸುವತ್ತ, ವೈಜ್ಞಾನಿಕ ಮನೋಭಾವವನ್ನು ಮೂಡಿಸುವತ್ತ ದೃಷ್ಟಿಹರಿಸಬೇಕು.



# ಮೋಡಗಳೇ

ಬನ್ನಿ ಮೋಡಗಳೇ ಬನ್ನಿ
ಮೈ ತುಂಬಿದ ಮದ್ದಾನೆ ತೆರದಿ ಬನ್ನಿ
ಕಾದಿಹ ಭೂಮಿಯನು ತಣಿಸಿ
ತಂಪಿನ ಮಳೆಯ ಸುರಿಸಿ
ಬಿತ್ತಿದ ಬೀಜವ ಮೊಳೆಸಿ
ಹಸಿರನು ಬೆಳೆಯ ಬನ್ನಿ
ಮುಂಗಾರು ಮೋಡಗಳೇ
ಎನಿತು ಕಾಯಿಸುವಿರಿ ಏನು ರಗಳೆ
ಗಿರಿ ಪರ್ವತಗಳ ದಾಟಿ ಬಯಲಿಗೆ
ಬರಿದಾಗಿ ಬಿರಿದಿಹ ಕೆರೆ ಕುಂಟೆಗಳಿಗೆ
ಬರಡಾಗಿ ನಿಂತಿಹ ಗಿಡ ಬಳ್ಳಿಗಳಿಗೆ
ಹರುಷದ ನೀರೆರೆದು ಚೇತರಿಸಿ ಚಿಗುರಿಗೆ
ಬರಿಕೊಡದ ಬಾಲೆಯರು
ಕಾತರದಿ ಕಾದಿಹರು
ಸ್ವಾಗತಿಸುವರು ಮೋಡಗಳನು
ಗುಡುಗು ಗದ್ದಣಿ ಮಿಂಚನು
ಕಂಡರು ಬುವಿಗಿಳಿವ ಸಂಚನು
ಬನ್ನಿ ಮೋಡಗಳೇ ಬನ್ನಿ.

ಮುಂದೆ ಸಾಗಿಹ ನೀರಾವಿಯ
ಸಿಂಗಾರಿ
ಬಯಲು ಸೀಮೆಯ ಬಿಸಿ ಗಾಳಿಗೆ ಹೆದರಿ
ಮಲೆನಾಡಿನ ಸಿರಿ ಸೊಬಗಿನ ತಂಪನರಸಿ
ಕಂಪಿನ ಮಂದ ಮಾರುತ ಆಶ್ರಯ ಬಯಸಿ
ಹೊರಟಿಹ ಜಲ ಸಿರಿಯ ಮಾರ್ದನಿಗೊಳಿಸಿ
ಧರೆಯ ಒಡಲಿಗೆ ಜಲಸಿರಿ ಇಳಿಸಿ
ಸಾಗದಿರಿ ಮುಂದೆ ಸಾಗದಿರಿ
ದೀನರ ಕರೆಗೆ ಓಗೊಡಿರಿ
ಮುಂದೆ ಸಾಗಿ ನಿರಾಶೆಯ ಛಾಯೆ
ಹರಡದಿರಿ
ಬನ್ನಿ ಮೋಡಗಳೇ ಬನ್ನಿ.

ಪ್ರಭಾವತಿ ಎಸ್. ದೇಸಾಯಿ



## ಚಟುವಟಿಕೆಗಳು

### ಹಾಡಿರಿ

- ಕವಿತೆಯನ್ನು ರಾಗವಾಗಿ ಹಾಡಿರಿ.

### ಉತ್ತರಿಸಿರಿ

- ಮೋಡಗಳು ಹೇಗೆ ಬರಬೇಕೆಂದು ಕವಿ ಬಯಸುತ್ತಾರೆ?
- ಮುಂಗಾರು ಮೋಡಗಳೊಡನೆ ಕವಿ ಏನೆಂದು ಕೇಳಿಕೊಳ್ಳುತ್ತಾರೆ?
- ನೀರಾವಿಯು ಬಯಲು ಸೀಮೆ ದಾಟಿ ಮುಂದೆ ಸಾಗಲು ಕಾರಣವೇನು?

### ಆಶಯ ಬರೆಯಿರಿ

- ಕೆಳಗಿನ ಪದ್ಯಭಾಗದ ಆಶಯ ಬರೆಯಿರಿ

ಬರಿಕೊಡದ ಬಾಲೆಯರು
ಕಾತರದಿ ಕಾದಿಹರು
ಸ್ವಾಗತಿಸುವರು ಮೋಡಗಳನು
ಗುಡುಗು ಗದ್ದಣಿ ಮಿಂಚನು
ಕಂಡರು ಬುವಿಗಿಳಿವ ಸಂಚನು
ಬನ್ನಿ ಮೋಡಗಳೇ ಬನ್ನಿ

### ಪ್ರಾಸಪದ ಬರೆಯಿರಿ

- ಕವಿತೆಯಲ್ಲಿ ಬಂದಿರುವ ಪ್ರಾಸಪದಗಳನ್ನು ಗುರುತಿಸಿ ಬರೆಯಿರಿ.

### ಆಸ್ವಾದನ ಟಿಪ್ಪಣಿ ತಯಾರಿಸಿರಿ

- ಈ ಕವಿತೆಯಲ್ಲಿ ನಿಮಗೆ ಇಷ್ಟವಾದ ಭಾಗ ಯಾವುದು? ಯಾಕೆ ಇಷ್ಟವಾಯಿತು? ಎಂಬುದನ್ನು ಟಿಪ್ಪಣಿ ರೂಪದಲ್ಲಿ ಬರೆದು ಮಂಡಿಸಿರಿ.

## ಕವಿತೆ ಮುಂದುವರಿಸಿರಿ

- ನೀಡಿದ ಕವಿತೆಯನ್ನು ಮುಂದುವರಿಸಿ ಬರೆಯಿರಿ.

ಸುಡುವುದು ನೆಲವು
ಒಣಗಿದೆ ಕೆರೆಯು
ಎಂಥಾ ಧಗೆಯು!
ಭಣ ಭಣ ಬಿಸಿಲು

.........................
.........................
.........................
ಭಣ ಭಣ ಬಿಸಿಲು

.........................
.........................
.........................
ಭಣ ಭಣ ಬಿಸಿಲು

## ಘಟನೆಯನ್ನು ಬರೆಯಿರಿ

- ಇಲ್ಲಿ ಕೆಲವು ಪದಗಳನ್ನು ಕೊಡಲಾಗಿದೆ. ಅವುಗಳನ್ನು ಬಳಸಿಕೊಂಡು ಘಟನೆಯೊಂದನ್ನು ಬರೆಯಿರಿ.
( ಧಗೆ, ಚೇತರಿಸು, ಬರಡು, ಮೋಡ, ಬೀಜ, ಹರುಷ, ಸ್ವಾಗತ, ನಿರಾಶೆ )

# ಮೈಕಲ್ ಫ್ಯಾರಡೇ

ಒಂದು ಸಲ ಟಂಕಸಾಲೆಯ ನೌಕರನೊಬ್ಬನು ರಾಯಲ್ ಸಂಸ್ಥೆಯಲ್ಲಿ ನಾಣ್ಯಲೋಹಗಳಿಗೆ ಸಂಬಂಧಿಸಿದ ಪ್ರಯೋಗವನ್ನು ಮಾಡಬೇಕೆಂದು ಬಂದನು. ಆ ವಿಜ್ಞಾನಮಂದಿರದಲ್ಲಿ ಜೀರ್ಣವಾಗಿರುವ ಉಡುಪುಗಳನ್ನು ಹಾಕಿಕೊಂಡು ವಯಸ್ಸಾದವನೊಬ್ಬನು ಕೆಲವು ಉಪಕರಣಗಳನ್ನು ತೊಳೆಯುತ್ತಿದ್ದನು. ಒಳ್ಳೆಯ ಸೂಟನ್ನು ಧರಿಸಿ ಜರ್ಬಿನಿಂದ ಬಂದಿದ್ದ ನೌಕರನು ದಾರ್ಷ್ಟ್ಯದಿಂದ

"ಈ ಪ್ರಯೋಗ ಮಂದಿರದಲ್ಲಿ ಬಹಳ ಕಾಲದಿಂದಲೂ ನೀನು ಇರಬೇಕಲ್ಲವೇ?" ಎಂದು ಪ್ರಶ್ನಿಸಿದನು.

"ಹೌದು. ಅನೇಕ ವರ್ಷಗಳಿಂದಲೂ ಇದ್ದೇನೆ."

"ಈ ಮಂದಿರದ ಬಾಗಿಲನ್ನು ಕಾಯುವುದೇ ನಿನ್ನ ಕೆಲಸವೋ?"

"ನಿಜ. ಒಂದು ರೀತಿಯಲ್ಲಿ"

"ಕೈ ತುಂಬ ಸಂಬಳ ಸಿಗುತ್ತದೆಯೋ?"



"ಎಲ್ಲೋ ಅಲ್ಪಸ್ವಲ್ಪ. ಹೆಚ್ಚಿಗೆ ಸಂಬಳ ಬರದಿದ್ದರೂ ಚಿಂತೆಯಿಲ್ಲ"

"ಅದು ಹೋಗಲಿ. ನಿನ್ನ ಹೆಸರೇನಯ್ಯ?"

"ಮೈಕಲ್ ಫ್ಯಾರಡೇ"

ಕೊನೆಯ ಮಾತು ಆ ನೌಕರನಿಗೆ ದಿಗ್ಭ್ರಮೆಯನ್ನು ಉಂಟುಮಾಡಿತು. ಯಾವ ಮುಖ್ಯಾಧಿಕಾರಿಯು ಪ್ರಯೋಗಶಾಲೆಯಲ್ಲಿ ಕೆಲಸ ಮಾಡಲು ಬಂದಿದ್ದನೋ ಅವನನ್ನು ತುಚ್ಛವಾಗಿ ಕಂಡುದುದಕ್ಕಾಗಿ ಕ್ಷಮೆ ಬೇಡಿದನು.

ಮೈಕಲ್ ಫ್ಯಾರಡೇಯು ಕ್ರಿ.ಶ. 1791 ಸಪ್ಟೆಂಬರ್ 22 ರಂದು ಇಂಗ್ಲೆಂಡ್ ದೇಶದ 'ಸಕ್ರಿ' ಜಿಲ್ಲೆಯ 'ನ್ಯೂಯಿಂಗ್ ಟನ್' ಎಂಬಲ್ಲಿ ಜನಿಸಿದನು. ಅವನ ತಂದೆ ಜೇಮ್ಸ್ ಫ್ಯಾರಡೇ ಒಬ್ಬ ಕಮ್ಮಾರ ನಾಗಿದ್ದನು. ತಾಯಿ

ಮಾರ್ಗರೆಟ್ ಹಾಸ್ಕ್‌ವೆಲ್ ಒಬ್ಬ ರೈತನ ಮಗಳಾಗಿದ್ದಳು. ಇವರ ಬಂಧುಗಳೆಲ್ಲರೂ ಬಡವರು. ಬಡಮನೆತನದಲ್ಲಿ ಹುಟ್ಟಿದ ಮಗುವೊಂದು ಪ್ರಸಿದ್ಧ ವಿಜ್ಞಾನಿಯಾಗಿ ಲೋಕಕ್ಕೆ ಬೆಳಕನ್ನಿತ್ತುದು ದೈವಲೀಲೆಯೇ. ಆದರೆ ಚಿಕ್ಕಂದಿನಲ್ಲಿ ಮುಂದೆ ದೊಡ್ಡ ಪ್ರಸಿದ್ಧ ವ್ಯಕ್ತಿಯಾಗುವ ಯಾವ ಲಕ್ಷಣವೂ ಕಂಡುಬರಲಿಲ್ಲ. ನಿತ್ಯವೂ ಪಾಠಶಾಲೆಗೆ ಹೋದರೂ ಶ್ರದ್ಧೆಯಿಂದ ಕಲಿಯಲು ಅವನಿಗೆ ಆಗುತ್ತಿರಲಿಲ್ಲ. ಸಂಜೆಯ ವೇಳೆ ಮನೆಯ ಮಾಳಿಗೆಯ ಮೇಲೆ ನಿಂತುಕೊಂಡು ಸೂರ್ಯಾಸ್ತವನ್ನು ನೋಡಿ ಹಿರಿಹಿರಿ ಹಿಗ್ಗುತ್ತಿದ್ದನು. ಸಂಜೆಯ ನೇಸರನ ಕಿರಣಗಳು ಹೊಂಬಣ್ಣವನ್ನೆರಚಿ ಮೈಮೇಲೆ ಬಿದ್ದಾಗ ಕುಣಿಯುತ್ತ ಸಂತೋಷಪಡುತ್ತಿದ್ದನು. ಫ್ಯಾರಡೇಗೆ ವಿದ್ಯಾಭ್ಯಾಸವನ್ನು ಹೆಚ್ಚುಕಾಲ ಮುಂದುವರಿಸಲಾಗಲಿಲ್ಲ. ಅವನಿಗೆ ನಿರರ್ಗಳವಾಗಿ ಮಾತನಾಡುವುದಕ್ಕೂ ಸರಿಯಾಗಿ ಉಚ್ಚಾರ ಮಾಡುವುದಕ್ಕೂ ಆಗುತ್ತಿರಲಿಲ್ಲ. ಹುಡುಗನ ಈ ದೋಷವನ್ನು ನಿವಾರಿಸಲು ಅಧ್ಯಾಪಿಕೆ ಸಕಲ ತಂತ್ರಗಳನ್ನೂ ಪ್ರಯೋಗಿಸಿ ನೋಡಿದಳು. ಕೊನೆಗೆ ಬೇಸತ್ತ ತಾಯಿಯು ಮಗನ ಶಾಲಾ ವಿದ್ಯಾಭ್ಯಾಸವನ್ನು ನಿಲ್ಲಿಸಿದಳು.

ಫ್ಯಾರಡೇಯ ತಂದೆಯ ದುಡಿತದಿಂದ ಸಿಗುವ ವರಮಾನವು ಕುಟುಂಬದ ಜೀವನಕ್ಕೆ ಸಾಕಾಗುತ್ತಿರಲಿಲ್ಲ. ಫ್ಯಾರಡೇಯ ತಾಯಿ ವಾರಕ್ಕೊಮ್ಮೆ ಒಂದು ರೊಟ್ಟಿಯನ್ನು ಕೊಡುವಳು. ಹುಡುಗನು ಆ ರೊಟ್ಟಿಯನ್ನು ಹದಿನಾಲ್ಕು ಸಮಭಾಗಗಳಾಗಿ ಮಾಡಿ, ನಿತ್ಯವೂ ಬೆಳಗ್ಗೆ ಒಂದು ಚೂರೂ ರಾತ್ರಿ ಒಂದು ಚೂರು ತಿಂದು ತೃಪ್ತಿಪಡುತ್ತಿದ್ದನು. ಹೀಗಾಗಿ ಅವನು ತನ್ನ ಹದಿಮೂರನೇ ವಯಸ್ಸಿನಲ್ಲಿ ಪುಸ್ತಕ ವ್ಯಾಪಾರಿಯೊಬ್ಬನ ಬಳಿ ಪತ್ರವಾಹಕನಾಗಿ ಕೆಲಸಕ್ಕೆ ಸೇರಿಕೊಂಡನು. ಪುಸ್ತಕ ವ್ಯಾಪಾರಿಯು ಅವನ ಕಾರ್ಯದಕ್ಷತೆಯನ್ನು ಗಮನಿಸಿ ಹಳೆಯ ಪುಸ್ತಕಗಳಿಗೆ ರಟ್ಟು ಹಾಕುವ ಕೆಲಸವನ್ನು ಕಲಿಯುವ ಅವಕಾಶವನ್ನು ಕೊಟ್ಟನು. ಈ ಸದವಕಾಶವು ಅವನಲ್ಲಿ ಹಲವು ಪುಸ್ತಕಗಳನ್ನು ಓದುವ ಹವ್ಯಾಸವನ್ನು ಬೆಳೆಸಿತು. ವೈಜ್ಞಾನಿಕ ಗ್ರಂಥಗಳಿಗೆ ಹೊದಿಕೆಗಳನ್ನು ಅಂಟಿಸುವಾಗ ತನ್ನ ಕೆಲಸವನ್ನೇ ಮರೆತು ಅವುಗಳನ್ನು ಅಭ್ಯಾಸ ಮಾಡುತ್ತಿದ್ದನು. ರಸಾಯನ ಶಾಸ್ತ್ರದ ವಿಷಯವಾಗಿರುವ ಪುಸ್ತಕಗಳನ್ನು ಕಂಡರೆ ಅವನಿಗೆ ಬಹಳ ಪ್ರೀತಿ. ಒಂದು ಸಲ "ಎನ್‌ಸೈಕ್ಲೋಪೀಡಿಯ ಬ್ರಿಟಾನಿಕಾ" ಎಂಬ ಪುಸ್ತಕಗಳಿಗೆ ರಟ್ಟು ಹಾಕುವ ಅವಕಾಶ ಒದಗಿತು. ಅವುಗಳಲ್ಲಿ ಒಂದರಲ್ಲಿ 'ವಿದ್ಯುಚ್ಛಕ್ತಿ'ಗೆ ಸಂಬಂಧಿಸಿದ ಅನೇಕ ವಿಷಯಗಳು ವಿವರಿಸಲ್ಪಟ್ಟಿದ್ದವು. ಇದನ್ನು ಓದಿ



ಹೆಚ್ಚು ವೆಚ್ಚವಿಲ್ಲದ ಯಾಂತ್ರಿಕ ಸಾಧನವೊಂದನ್ನು ರಚಿಸಿ ಅದರ ಮೂಲಕ ವಿದ್ಯುಚ್ಛಕ್ತಿಯ ಪರಿಣಾಮಗಳನ್ನು ತೋರಿಸುತ್ತಿದ್ದನು.


ಹೀಗಿರಲು ಒಂದು ದಿನ ಮೈಕಲ್ ಫ್ಯಾರಡೇಗೆ ಪ್ರಸಿದ್ಧ ರಸಾಯನ ಶಾಸ್ತ್ರಜ್ಞನಾದ ಸರ್ ಹಂಫ್ರಿ ಡೇವಿಯ ಉಪನ್ಯಾಸವನ್ನು ಕೇಳುವ ಸಂದರ್ಭ ಒದಗಿತು. ಇದರಿಂದ ಪ್ರಭಾವಿತನಾದ ಫ್ಯಾರಡೇಯು ಅವನ ಪ್ರಯೋಗಶಾಲೆಯಲ್ಲಿ ಸಹಾಯಕನಾಗಿ ಸೇರಿಸಿಕೊಳ್ಳುವಂತೆ ಕೇಳಿಕೊಂಡನು. ಕರುಣಾಳುವಾದ 'ಹಂಫ್ರಿ'ಯು ತನ್ನ ಪ್ರಯೋಗ ಶಾಲೆಯಲ್ಲಿ ಸಹಾಯಕನಾಗಿ ಅವನನ್ನು ನೇಮಿಸಿದನು. ಇದು ಅವನ ಜೀವನದ ಹಾದಿಯಲ್ಲಿ ಒಂದು ಮೈಲುಗಲ್ಲು. ಪ್ರಯೋಗ ಶಾಲೆಯಲ್ಲಿ ಸೀಸೆಗಳನ್ನು ತೊಳೆಯುವುದು, ಮೇಜುಗಳನ್ನು ಒರಸುವುದು, ನೆಲವನ್ನು ಗುಡಿಸಿ ಸಾರಿಸುವುದು ಇವೇ ಅವನ ಮುಖ್ಯವಾದ ಕೆಲಸಗಳು. ಫ್ಯಾರಡೇಯ ಬುದ್ಧಿಶಕ್ತಿಯನ್ನೂ ವಿಜ್ಞಾನ ವಿಷಯಾಸಕ್ತಿಯನ್ನೂ ಗಮನಿಸಿ 'ಹಂಫ್ರಿ'ಯು ತನ್ನ ಪ್ರಯೋಗಗಳಲ್ಲಿ ಜೊತೆಯಾಗಿ ಪಾಲ್ಗೊಳ್ಳಲು ಅನುವು ಮಾಡಿಕೊಟ್ಟನು.

ಇದೇ ಸಮಯದಲ್ಲಿ ಹಂಫ್ರಿಯು ಉಪನ್ಯಾಸಗಳನ್ನು ನೀಡಲು ಹೋಗುವಾಗಲೆಲ್ಲಾ ತನ್ನ ನೆಚ್ಚಿನ ಸಹಾಯಕನಾದ ಫ್ಯಾರಡೇಯನ್ನು ಕರೆದೊಯ್ಯುತ್ತಿದ್ದನು. ಈ ಸಂದರ್ಭದಲ್ಲಿ ಅನೇಕ ಪ್ರಯೋಗ ಮಂದಿರಗಳನ್ನೂ ವಸ್ತು ಸಂಗ್ರಹಾಲಯಗಳನ್ನೂ ನೋಡುವ ಅವಕಾಶ ಫ್ಯಾರಡೇಗೆ ಒದಗಿತು. ಪ್ರಸಿದ್ಧ ವಿಜ್ಞಾನಿಗಳ ಜೀವನಕ್ರಮಗಳನ್ನು ಗಮನಿಸಿದ ಅವನಿಗೆ ತಾನೂ ಅವರಂತೆ ಆಗಬೇಕೆಂಬ ಆಸೆ ಮನಸ್ಸಿನಲ್ಲಿ ಮೂಡಿತು.

ವಿದೇಶ ಪ್ರವಾಸಗಳನ್ನು ಮುಗಿಸಿ ಲಂಡನ್ನಿಗೆ ಹಿಂತಿರುಗಿದ ಮೇಲೆ ಫ್ಯಾರಡೇಯು ರಾಯಲ್ ಸಂಸ್ಥೆಯಲ್ಲಿ ಅನೇಕ ಪ್ರಯೋಗಗಳನ್ನು ಕೈಗೊಂಡನು. ಅವನ ಸಾಮರ್ಥ್ಯವನ್ನು ಕಂಡು ಡೇವಿಯು ತಾನು ಮಾಡಬೇಕಾಗಿದ್ದ ಸಂಶೋಧನೆಗಳನ್ನೆಲ್ಲಾ ಅವನೇ ನಡೆಸುವಂತೆ ಅನುಮತಿ ಇತ್ತನು. ಮುಂದೆ ಫ್ಯಾರಡೇಯು ಸಾರಾ ಬರ್ನಾರ್ಡ್ ಎಂಬ ಯುವತಿಯನ್ನು ಮದುವೆಯಾದನು. ಆಕೆಯು ಆತನಿಗೆ ತಕ್ಕ ಸತಿಯಾಗಿದ್ದಳು. ಪತಿಯ ಸಂಶೋಧನೆಗೆ ತಾನೂ ಹೆಗಲು ಕೊಡುತ್ತಿದ್ದಳು.

ಫ್ಯಾರಡೇಯು ಮೊದಮೊದಲು ರಸಾಯನ ಶಾಸ್ತ್ರಕ್ಕೆ ಸಂಬಂಧಿಸಿದ ಪ್ರಯೋಗಗಳನ್ನು ಮಾಡಿದನು. ಬಳಿಕ ವಿದ್ಯುಚ್ಛಕ್ತಿಯ ವಿಷಯವಾಗಿ ಅನೇಕ ಸಂಶೋಧನೆಗಳನ್ನು ನಡೆಸಿದನು. ಆಯಸ್ಕಾಂತ, ತಾಮ್ರದ ಸುರುಳಿ ಮತ್ತು ವಿದ್ಯುತ್ ಇವುಗಳ ಪರಸ್ಪರ ಸಂಬಂಧವನ್ನು ಕಂಡುಹಿಡಿದನು. ಇದುವೇ 'ವಿದ್ಯುಜ್ಜನಕ' (ಜನರೇಟರ್) ಯಂತ್ರಕ್ಕೆ ಮೂಲಭೂತವಾದ ಸಂಶೋಧನೆ. ಇವನ ಈ ಸಂಶೋಧನೆಯಿಂದಾಗಿ ಜಗತ್ತೆಲ್ಲವೂ ವಿದ್ಯುತ್ ಚಾಲಿತವಾಗುತ್ತಿವೆ ಎಂದರೆ ಅತಿಶಯೋಕ್ತಿಯಾಗಲಾರದು. 'ರಸಾಯನ ಹಾಗೂ ಭೌತಶಾಸ್ತ್ರದ ಸಂಶೋಧನೆಗಳು' ಮತ್ತು 'ವಿದ್ಯುತ್ತಿನಲ್ಲಿ ನಡೆಸಿದ ಪ್ರಯೋಗಾತ್ಮಕ ಸಂಶೋಧನೆಗಳು' ಎಂಬ ಎರಡು ಕೃತಿಗಳನ್ನು ಈತ ರಚಿಸಿದ್ದಾನೆ. ಅನೇಕ ವೇಳೆ ಅವನು ಕೈಗೊಂಡ ಎಷ್ಟೋ ಪ್ರಯೋಗಗಳು ವಿಫಲವಾಗುತ್ತಿದ್ದುವು. ಅದಕ್ಕಾಗಿ ವ್ಯಥೆ ಪಡದೆ 'ಮೀನನ್ನು ಹಿಡಿಯಲು ಪ್ರಯತ್ನಿಸಿದರೆ ಪಾಚಿಯನ್ನಾದರೂ ಎಳೆಯಬಹುದು' ಎಂಬ ನಂಬಿಕೆಯಿಂದ ಕಾರ್ಯನಿರತನಾಗುತ್ತಿದ್ದನು.

ತನ್ನ 33ನೇ ವಯಸ್ಸಿನಲ್ಲಿ ಫ್ಯಾರಡೇಯು 'ರಾಯಲ್' ಸಂಸ್ಥೆಯ ಸದಸ್ಯನಾದನು. ಮುಂದಿನ ವರ್ಷದಲ್ಲಿಯೇ ಅದರ ಮುಖ್ಯಾಧಿಕಾರಿಯಾಗಿ ನೇಮಕವಾದನು. ಇದೇ ಸಂದರ್ಭದಲ್ಲಿ ಲಂಡನ್ ವಿಶ್ವವಿದ್ಯಾನಿಲಯದಲ್ಲಿ ರಸಾಯನ ಶಾಸ್ತ್ರದ ಪ್ರಾಧ್ಯಾಪಕನಾಗುವಂತೆ ಆಹ್ವಾನವೂ ಬಂತು. 'ಪ್ರಾಧ್ಯಾಪಕನಾದರೆ ವೈಜ್ಞಾನಿಕ ಪ್ರಯೋಗಗಳನ್ನು ಕೈಗೊಳ್ಳಲು ಅವಕಾಶ ದೊರೆಯದು' ಎಂದು ಭಾವಿಸಿ ಆಹ್ವಾನವನ್ನು ತಿರಸ್ಕರಿಸಿದನು.



ಫ್ಯಾರಡೇಯು ಕೃತ್ರಿಮವಿಲ್ಲದ ಪ್ರಾಮಾಣಿಕ. ನಿತ್ಯ ವ್ಯವಹಾರಗಳಲ್ಲಿ ಇತರರಿಗೆ ಕೇಡನ್ನು ಬಯಸಲಿಲ್ಲ. ವೈಜ್ಞಾನಿಕ ವಿಷಯಗಳನ್ನು ಚರ್ಚಿಸುವಾಗ ತನಗೆ ಸರಿ ಎಂದು ತೋರಿದುದನ್ನು ಮುಚ್ಚುಮರೆ ಇಲ್ಲದೆ ತಿಳಿಸುತ್ತಿದ್ದನು. ಪ್ರಯೋಗಗಳನ್ನು ಮಾಡುತ್ತಿರುವಾಗ ಯಾವುದಾದರೂ ಫಲಿತಾಂಶ ಗೋಚರವಾದೊಡನೆ ಮಗುವಿನಂತೆ ಚೀರಿ ಕುಣಿದಾಡುತ್ತಿದ್ದನು. ವಿರಾಮಕಾಲದಲ್ಲಿ ಮಕ್ಕಳಂತೆ ಆಟವಾಡುತ್ತಿದ್ದನು. ಕಡಿವಾಣವಿಲ್ಲದ ಕುದುರೆಯ ಮೇಲೆ ಹುಚ್ಚುಹುಚ್ಚಾಗಿ ಸವಾರಿ ಮಾಡುವುದರಲ್ಲಿ ಅವನಿಗೆ ಬಲು ಆಸಕ್ತಿ. ಅವನು ವಿನೋದವಾಗಿ ಮಾತನಾಡುತ್ತಿದ್ದುದಲ್ಲದೇ ಅಭಿನಯಿಸುತ್ತಿದ್ದನು. ಅವನ ಉತ್ತಮ ಸ್ವಭಾವಗಳನ್ನು ವಿಕ್ಟೋರಿಯಾ ರಾಣಿಯೂ ಕೂಡಾ ಕೊಂಡಾಡಿದ್ದಾಳೆ.

ವಯಸ್ಸಾದಂತೆಲ್ಲಾ ಫ್ಯಾರಡೇಗೆ ಬುದ್ಧಿಶಕ್ತಿಯೂ ಕಡಿಮೆಯಾಯಿತು. ಮರೆವು ಹೆಚ್ಚಾಯಿತು. ದೇಹದಾರ್ಢ್ಯವೂ ಕ್ಷೀಣಿಸತೊಡಗಿತು. ಜಗತ್ತಿಗೆ ವಿದ್ಯುತ್ ಚೈತನ್ಯವನ್ನು ಸೃಷ್ಟಿಸುವ ತಂತ್ರವನ್ನು ತಿಳಿಸಿದ ಆ ಚೇತನವು 1897 ಆಗಸ್ಟ್ 25ರಂದು ಅನಂತದಲ್ಲಿ ಲೀನವಾಯಿತು.

## ಚಟುವಟಿಕೆಗಳು

### ಚರ್ಚಿಸಿರಿ

- 'ಮೀನನ್ನು ಹಿಡಿಯಲು ಪ್ರಯತ್ನಿಸಿದರೆ ಪಾಚಿಯನ್ನಾದರೂ ಎಳೆಯಬಹುದು' ಎಂಬುದು ಫ್ಯಾರಡೆಯ ನಂಬಿಕೆಯಾಗಿತ್ತು. ಇದನ್ನು ನಮ್ಮ ಜೀವನಕ್ಕೆ ಹೇಗೆ ಅನ್ವಯಿಸಬಹುದು? ಚರ್ಚಿಸಿರಿ.

## ಉತ್ತರಿಸಿರಿ

- ಫ್ಯಾರಡೇ ವಿಜ್ಞಾನಿಯಾಗಲು ಪ್ರೇರಣೆ ನೀಡಿದ ವ್ಯಕ್ತಿ ಯಾರು?
- ಬಾಲಕನಾಗಿದ್ದ ಫ್ಯಾರಡೇಯು ವ್ಯಾಪಾರಿಯೊಬ್ಬನ ಬಳಿ ಕೆಲಸಕ್ಕೆ ಸೇರಲು ಕಾರಣವೇನು?
- ಟಂಕಸಾಲೆಯ ನೌಕರನು ರಾಯಲ್ ಸಂಸ್ಥೆಗೆ ಬಂದುದು ಯಾಕೆ?
- ಫ್ಯಾರಡೇಗೆ ಎಳೆ ವಯಸ್ಸಿನಲ್ಲಿ ರಾಯಲ್ ಸಂಸ್ಥೆಯ ಸದಸ್ಯತನ ದೊರಕಲು ಕಾರಣವಾದ ಸನ್ನಿವೇಶಗಳು ಯಾವುವು?

## ರಸಪ್ರಶ್ನೆ ಕಾರ್ಯಕ್ರಮ ನಡೆಸಿರಿ

- ಮೈಕಲ್ ಫ್ಯಾರಡೇಯ ಬಗ್ಗೆ ರಸಪ್ರಶ್ನೆ ಕಾರ್ಯಕ್ರಮವನ್ನು ನಡೆಸಲು ಅಗತ್ಯವಿರುವ ಪ್ರಶ್ನೆಗಳನ್ನು ತಯಾರಿಸಿರಿ.

## ಟಿಪ್ಪಣಿ ತಯಾರಿಸಿರಿ

- 'ಫ್ಯಾರಡೇಯ ಮನಸ್ಸು ಮಗುವಿನಂತಿತ್ತು' ಎಂಬುದನ್ನು ಅವನ ಜೀವನ ಚರಿತ್ರೆಯ ಆಧಾರದಲ್ಲಿ ಸಮರ್ಥಿಸಿ ಟಿಪ್ಪಣಿ ತಯಾರಿಸಿರಿ.

## ಲೇಖನ ತಯಾರಿಸಿರಿ

- ಫ್ಯಾರಡೇಯು ವಿದ್ಯುತ್‌ಗೆ ಸಂಬಂಧಿಸಿ ನಡೆಸಿದ ಸಂಶೋಧನೆಯು ಮಾನವ ನಾಗರಿಕತೆಯ ಸಂಶೋಧನೆಗಳಲ್ಲಿ ಒಂದು ಮೈಲಿಗಲ್ಲು ಎಂಬ ವಿಚಾರವನ್ನು ಸಮರ್ಥಿಸಿ ಲೇಖನವೊಂದನ್ನು ತಯಾರಿಸಿರಿ.

## ಭರ್ತಿ ಮಾಡಿರಿ

- ಕೆಳಗಿನ ವಾಕ್ಯಗಳಲ್ಲಿ ಬಿಟ್ಟಸ್ಥಳಗಳನ್ನು ಆವರಣದಲ್ಲಿರುವ ಪದಗಳಲ್ಲಿ ಸೂಕ್ತವಾದುದನ್ನು ಉಪಯೋಗಿಸಿ ಭರ್ತಿಗೊಳಿಸಿರಿ.

  (ಜೀರ್ಣ, ಅಪ್ರಾಮಾಣಿಕ, ಅತೃಪ್ತಿ, ಬಡವ, ವಿಫಲ, ಕತ್ತಲು, ಅಸ್ತಮಾನ, ಸಫಲ, ಅಜೀರ್ಣ, ಅಪಕಾರ, ಬೆಳಕು, ಶ್ರೀಮಂತ, ತೃಪ್ತಿ, ಪ್ರಾಮಾಣಿಕ, ಉಪಕಾರ, ಅವೈಜ್ಞಾನಿಕ)

- ಫ್ಯಾರಡೇಯು ಬಡವನಾದರೂ ಅವನ ಗುಣ ......................... ಆಗಿತ್ತು.
- ರೋಗಿಗೆ ವೈದ್ಯರ ಮಾತು ಹಾಲು ಕುಡಿದಷ್ಟೆ .................... ತಂದಿತು. ಆದರೆ ಔಷಧಿ ಕುಡಿದಾಗ ತನ್ನ ಅತೃಪ್ತಿಯನ್ನು ತೋರಿಸಿದನು.

- ಜ್ಞಾನವೆಂಬ ಬೆಳಕು ಅಜ್ಞಾನವೆಂಬ .................. ಓಡಿಸುತ್ತದೆ.
- ಸಿ.ವಿ.ರಾಮನ್ ಎಂಬ ಬೆಳ್ಳಿ ಚುಕ್ಕಿಯು 1888 ನವೆಂಬರ್ 7 ರಂದು ಭಾರತೀಯ ವಿಜ್ಞಾನ ಲೋಕದಲ್ಲಿ ಉದಯವಾಯಿತು. ನವೆಂಬರ್ 21, 1970 ರಂದು ಆ ಬೆಳ್ಳಿ ಚುಕ್ಕಿಯ ...................ವಾಯಿತು.
- ಸರಿಯಾದ ಯೋಜನೆ ಇಲ್ಲದ ಕಾರ್ಯವು ವಿಫಲವಾಗುತ್ತದೆ. ಕಾರ್ಯವು .................. ಆಗಬೇಕಾದರೆ ಸರಿಯಾದ ಯೋಜನೆಯೊಂದಿಗೆ ಮುನ್ನಡೆಯಬೇಕು.
- ಆಹಾರವನ್ನು ಮಿತವಾಗಿ ಸೇವಿಸಿದರೆ ಚೆನ್ನಾಗಿ ............. ಆಗುತ್ತದೆ. ಅಮಿತ ಆಹಾರ ಸೇವನೆಯು ಅಜೀರ್ಣವನ್ನು ಉಂಟುಮಾಡುತ್ತದೆ.
- ನಮ್ಮ ಯಾವುದೇ ನಂಬಿಕೆಗೂ ವೈಜ್ಞಾನಿಕ ತಳಹದಿ ಇದೆ. .................. ವಿಚಾರಗಳನ್ನು ನಮ್ಮ ಜೀವನದಲ್ಲಿ ಅಳವಡಿಸಬಾರದು.
- ಎಲ್ಲರೂ ...................... ಆದರೆ ದೇಶವು ಅಭಿವೃದ್ಧಿಯನ್ನು ಹೊಂದುವುದು. ಅಪ್ರಾಮಾಣಿಕತೆಯು ಹೆಚ್ಚಿದಂತೆ ರಾಷ್ಟ್ರವು ಅಧಃಪತನ ಹೊಂದುವುದು.
- ಉಪಕಾರ ಮಾಡದಿದ್ದರೂ .......................... ಮಾಡಬಾರದು.

### ನಾಮವಿಶೇಷಣ ಪದಗಳು

- ಕೆಳಗಿನ ವಾಕ್ಯಗಳಲ್ಲಿ ಅಡಿಗೆರೆ ಎಳೆದ ಪದಗಳನ್ನು ಗಮನಿಸಿರಿ.
- ಆ ವಿಜ್ಞಾನ ಮಂದಿರದಲ್ಲಿ <u>ಜೀರ್ಣವಾಗಿರುವ</u> ಉಡುಪುಗಳನ್ನು ಹಾಕಿಕೊಂಡು ವಯಸ್ಸಾದವನೊಬ್ಬನು ಕೆಲವು ಉಪಕರಣಗಳನ್ನು ತೊಳೆಯುತ್ತಿದ್ದನು.
- ಹೌದು <u>ಅನೇಕ</u> ವರ್ಷಗಳಿಂದ ಇದ್ದೇನೆ.
- ಸಂಜೆಯ ನೇಸರನ ಕಿರಣಗಳು <u>ಹೊನ್ನಿನ</u> ಬಣ್ಣವನ್ನು ಎರಚುತ್ತಿದ್ದುವು.
- ರಸಾಯನ ಶಾಸ್ತ್ರದ ವಿಷಯವಾಗಿರುವ ಪುಸ್ತಕಗಳನ್ನು ಕಂಡರೆ ಅವನಿಗೆ <u>ಬಹಳ</u> ಪ್ರೀತಿ.

ಅಡಿಗೆರೆ ಎಳೆದ ಪದವು ಮುಂದಿನ ನಾಮ ಪದದ ವಿಶೇಷತೆಯನ್ನು ಸೂಚಿಸುತ್ತದೆ.

ಉದಾ : ಒಂದನೇ ವಾಕ್ಯದಲ್ಲಿ ಎಂತಹ ಉಡುಪು? ಎಂಬ ಪ್ರಶ್ನೆಗೆ ಜೀರ್ಣವಾಗಿರುವ ಉಡುಪು ಎಂಬುದು ಉತ್ತರ.ಇಲ್ಲಿ ಜೀರ್ಣವಾಗಿರುವ ಎಂಬುದು ಉಡುಪಿನ ವಿಶೇಷತೆಯನ್ನು ಸೂಚಿಸುತ್ತದೆ.

ಇಂತಹ ಪದಗಳನ್ನು ನಾಮವಿಶೇಷಣ ಪದಗಳೆಂದು ಕರೆಯುತ್ತೇವೆ.

ಇಂತಹ ನಾಮ ವಿಶೇಷಣ ಪದಗಳಿರುವ ವಾಕ್ಯಗಳನ್ನು ಪಾಠದಿಂದ ಕಂಡುಹಿಡಿದು ಬರೆಯಿರಿ.

# ಅನಿಲನ ಕಾರು

ಅನಿಲನ ಸೋದರಮಾವ ವೆಂಕಟರಾಂ ಒಬ್ಬರು ವಿಜ್ಞಾನಿ. ಅವರು ಒಂದು ಸಲ ತಾವೇ ತಯಾರಿಸಿದ ಒಂದು ಪುಟ್ಟ ಕಾರನ್ನು ಅನಿಲನ ಹುಟ್ಟಿದ ಹಬ್ಬದ ಉಡುಗೊರೆಯಾಗಿ ಕೊಟ್ಟರು. ನೋಡಲು ಬಹಳ ಅಂದವಾಗಿದ್ದ ಆ ಕಾರು ಒಂದು ಅಡಿ ಉದ್ದವಿದ್ದು, ದೊಡ್ಡ ಕಾರುಗಳಂತೆಯೇ ಎಲ್ಲ ಭಾಗಗಳನ್ನೂ ಹೊಂದಿತ್ತು. ಅದನ್ನು ಅನಿಲನಿಗೆ ನೀಡುತ್ತ ಅವರು, “ಇದು ಸಾಮಾನ್ಯವಾದ ಕಾರಲ್ಲ. ಅದರ ಗುಟ್ಟನ್ನು ಹೇಳ್ತೀನಿ ಕೇಳು” ಎಂದು ಕಾರನ್ನು ಬೀದಿಗೆ ತಂದರು. ಕಾರಿನ ಬಳಿ ನಿಂತು “ಸೂರ್ಯ, ಆಕಾಶ, ಭೂಮಿ– 248” ಎಂದರು. ಕೂಡಲೆ ಕಾರು ಸ್ವಲ್ಪಸ್ವಲ್ಪವಾಗಿ ಬೆಳೆಯತೊಡಗಿತು. ಅನಿಲ ಕಣ್ಣರಳಿಸಿ ಆಶ್ಚರ್ಯದಿಂದ ನೋಡುತ್ತಿದ್ದ. ಅದು ಬೆಳೆದು ಎಲ್ಲ ಕಾರುಗಳಂತೆ ಕಂಡಿತು. ಆಗ ಮಾವ ಅವನ ಕೈಗೊಂದು ಬೀಗದಕೈ ಕೊಟ್ಟು “ಬಾ ಈಗ ನಾವಿಬ್ರೂ ಕಾರಿನಲ್ಲಿ ಹೋಗೋಣ” ಎಂದರು. ಕಾರು ಸ್ವಲ್ಪವೂ ಸದ್ದಿಲ್ಲದೆ ಬಲು ಚೆನ್ನಾಗಿ ಓಡತೊಡಗಿತು. ಮಾವ “ಇಷ್ಟೇ ಅಲ್ಲ ಅನಿಲ್, ಈಗ ನೋಡ್ತಾ ಇರು” ಎಂದು ಒಂದು ಗುಂಡಿಯನ್ನು ಒತ್ತಿದರು. ಕಾರು ಮೆಲ್ಲನೆ ಮೇಲೇರಿ ಏರೋಪ್ಲೇನಿನಂತೆ ಹಾರತೊಡಗಿತು. “ಮಾವಾ ಇದೇನು ಆಶ್ಚರ್ಯ! ಹರ್ಬಿ ತರಹ ಹಾರುತ್ತೆ? ಇದನ್ನು ನೀವೇ ಮಾಡಿದಿರಾ?” ಎಂದ.



“ಹುಂ. ನಿನಗೋಸ್ಕರ ಮಾಡಿದೆ. ಇನ್ನೂ ನೋಡ್ತಾ ಇರು” ಎನ್ನುತ್ತ ಒಂದು ಕೊಳದ ಬದಿಯಲ್ಲಿ ಕಾರನ್ನು ಇಳಿಸಿ ಬೇರೆ ಒಂದು ಗುಂಡಿಯನ್ನು ಒತ್ತಿದರು. ಕಾರು ನೀರಿನ ಮೇಲೆ ತೇಲುತ್ತ ದೋಣಿಯಂತೆ ಸಾಗತೊಡಗಿತು. ಈಗಲಂತೂ ಅನಿಲನ ಆಶ್ಚರ್ಯ ಮೇರೆ ಮೀರಿತು. ಕೊಳದ ಇನ್ನೊಂದು ಬದಿಗೆ ಹೋದ ಕೂಡಲೆ ಮತ್ತೆ ಸಾಧಾರಣ ಕಾರಿನಂತೆ ರಸ್ತೆಯ ಮೇಲೆ ಓಡತೊಡಗಿತು.

“ಅಬ್ಬಾ ಅದ್ಭುತ! ನಂಬುವುದಕ್ಕೇ ಆಗುವುದಿಲ್ಲ” ಎಂದ ಅನಿಲ್ ಸಾಕಷ್ಟು ಸುತ್ತಾಡಿದ ಮೇಲೆ ಕಾರು ಮನೆಯ ಬಳಿ ಬಂದು ನಿಂತಿತು. ಮಾವ ಇಳಿದರು. ಅನಿಲನೂ ಕೆಳಗಿಳಿದ ಮೇಲೆ ಬಾಗಿಲನ್ನು ಭದ್ರಪಡಿಸಿ “ಭೂಮಿ, ಆಕಾಶ, ಸೂರ್ಯ–842” ಎಂದರು. ಕೂಡಲೇ ಕಾರು ಸ್ವಲ್ಪಸ್ವಲ್ಪವಾಗಿ ಕಿರಿದಾಗುತ್ತ ಮೊದಲಿನಂತೆ ಪುಟ್ಟ ಆಟದ ಕಾರೇ ಆಯಿತು.

ಪುಟ್ಟ ಬೀಗದ ಕೈನಿಂದ ಕಾರಿಗೆ ಬೀಗ ಹಾಕಿ ಒಳಗೆ ತೆಗೆದುಕೊಂಡು ಹೋದರು.

ಅನಿಲನಿಗೆ ತನ್ನ ಈ ಅದ್ಭುತವಾದ ಹೊಸ ಕಾರಿನ ಬಗ್ಗೆ ತನ್ನ ಸ್ನೇಹಿತರಿಗೆಲ್ಲ ತಿಳಿಸಬೇಕೆಂದು ಆಸೆ.



ಆ ದಿನ ಭಾನುವಾರ. ಅವನ ಸ್ನೇಹಿತರಾದ ಗೌತಮ್, ರೋಹಿತ್, ನಂದನ್ ಬಂದಿದ್ದರು. ಅನಿಲ, ತನ್ನ ಕಾರನ್ನು ತಂದು ಅವರಿಗೆ ತೋರಿಸುತ್ತ, "ಇದು ನೋಡಿ ಈ ಕಾರು, ನನ್ನ ಸೋದರ ಮಾವ ನನಗೆ ಕೊಟ್ಟರು" ಎಂದು ತೋರಿಸಿದ. ಅವನ ಸ್ನೇಹಿತರಿಗೆ ಅದರಲ್ಲಿ ಏನು ವಿಶೇಷವೂ ಕಾಣಲಿಲ್ಲ. "ಇಂತಹ ಕಾರು ನನ್ನ ಪುಟ್ಟ ತಂಗಿ ಹತ್ರಾನೂ ಇದೆ" ಎಂದ ರೋಹಿತ್. ಎಲ್ಲರೂ ನಕ್ಕುಬಿಟ್ಟರು. ಅನಿಲನೂ ನಗುತ್ತ, "ಬನ್ನಿ, ಎಲ್ರೂ ಈ ಕಾರಿನಲ್ಲಿ ಕೂತು ಪಾರ್ಕಿಗೆ ಹೋಗೋಣ" ಎಂದು ಆಚೆಗೆ ಬಂದ.

"ಅದರೊಳಗೆ ಕೂಡಬೇಕಾದರೆ ನಾವೆಲ್ಲ ಪಿಗ್ಮಿಗಳಾಗಬೇಕು ಅಷ್ಟೇ" ಎಂದ ನಂದನ್. "ಏನೂ ಬೇಡ ನೋಡ್ತಿರು" ಎನ್ನುತ್ತ ಅನಿಲ ಮಾಂತ್ರಿಕ ಪದಗಳನ್ನು ಮೆಲ್ಲನೆ ಹೇಳಿದ. ಕಾರು ದೊಡ್ಡದಾಗಿ ಬೆಳೆಯಿತು. ಸ್ನೇಹಿತರು ಆಶ್ಚರ್ಯದಿಂದ ನೋಡುತ್ತಿದ್ದಂತೆ ಅನಿಲ,

"ಹುಂ, ಹತ್ತಿ ಕೂತ್ಕೊಳ್ಳಿ" ಎಂದು ಹೇಳಿದ. ಅವನೇ ಕಾರನ್ನು ನಡೆಸುತ್ತ ಬಹುದೂರದವರೆಗೆ ಕರೆದುಕೊಂಡು ಹೋದ. ನಂದನ್, ರೋಹಿತ್, ಗೌತಮ್ ನಂಬಲಾರದಂತೆ ನೋಡುತ್ತಿದ್ದ ಹಾಗೇ ಕಾರು ಮೇಲೆ ಹಾರಿತು. ನೀರಿನ ಮೇಲೆ ತೇಲಿತು. ಮತ್ತೆ ಮನೆಯ ಮುಂದೆ ಬಂದು ನಿಂತಿತು. ಮತ್ತೆ ಪುಟ್ಟದಾಗಿ ಮನೆಯೊಳಕ್ಕೆ ಸೇರಿ ಅನಿಲನ ಕೋಣೆಯ ಬೀರುವಿನಲ್ಲಿ ಬೆಚ್ಚಗೆ ಕುಳಿತಿತು. ಪ್ರತಿ ಭಾನುವಾರವೂ ಅನಿಲನ ಸ್ನೇಹಿತರು ಬರುವುದು, ಅವರೆಲ್ಲ ಕಾರಿನಲ್ಲಿ ಹೋಗುವುದು ಒಂದು ಅಭ್ಯಾಸವೇ ಆಯಿತು.

ಒಂದು ದಿನ ಅನಿಲನ ಸ್ನೇಹಿತರು ಬಂದಾಗ ಅನಿಲ ಮನೆಯಲ್ಲಿರಲಿಲ್ಲ. ಅವನ ತಾಯಿ ಅವರನ್ನು ಒಳಗೆ ಕರೆದು, "ನೀವೆಲ್ಲ ಅವನ ರೂಮಿನಲ್ಲಿ ಕೂತ್ಕೊಂಡು ಮಾತಾಡ್ತಾ ಇರಿ. ಈಗ ಬರ್ತಾನೆ"ಎಂದು ಹೇಳಿ ಅವರಿಗೆಲ್ಲ ತಿನ್ನಲು ಬಿಸ್ಕತ್ತು, ಹಣ್ಣು ಕೊಟ್ಟರು. ಅವರವರೇ ಮಾತಾಡುತ್ತಾ ಕುಳಿತಿದ್ದಾಗ ರೋಹಿತನಿಗೆ ಒಂದು ಆಲೋಚನೆ ಬಂದಿತು. ಬೀರುವಿನಲ್ಲಿದ್ದ ಅನಿಲನ ಕಾರನ್ನು ಕೈಗೆತ್ತಿಕೊಂಡು ಸ್ನೇಹಿತರಿಗೆ ಹೇಳಿದ "ಇವತ್ತು ನಾವುನಾವೇ ಇದರಲ್ಲಿ ಹೋಗೋಣ ಬನ್ರೋ" ಎಂದ.

ಯಾರೂ "ಬೇಡ" ಎನ್ನಲಿಲ್ಲ. ಬಾಗಿಲವರೆಗೆ ಬಂದು "ನಾವು ಬರ್ತೀವಿ ಆಂಟೀ.... ಆಮೇಲೆ ಬರ್ತೀವಿ" ಎಂದು ಹೇಳಿ ಹೊರಟರು.

ರಸ್ತೆಯ ಕೊನೆಯವರೆಗೆ ಹೋಗಿ ಕಾರನ್ನು ಕೆಳಗಿಟ್ಟು ರೋಹಿತ್, "ಸೂರ್ಯ, ಆಕಾಶ, ಭೂಮಿ–248" ಎಂದ. ಕೂಡಲೆ ಕಾರು ಬೆಳೆಯಿತು. ಆ ಮೂವರು ಸ್ನೇಹಿತರ ಆನಂದಕ್ಕೆ ಪಾರವೇ ಇಲ್ಲ. ಕಾರನ್ನೇರಿ ಊರಿನ ಆಚೆ ಎಲ್ಲೆಲ್ಲೋ ಸುತ್ತಿದರು, ಆಕಾಶದಲ್ಲಿ ಹಾರಿದರು. ಮೇಲೆ ಮೇಲೆ ಹೋದರು. ಅರ್ಧಗಂಟೆ ಆಯಿತು. ಒಂದು ಗಂಟೆ ಆಯಿತು. ನಂದನ್, "ಇನ್ನು ಸಾಕು ರೋಹಿತ್ ಕೆಳಗಿಳಿಯೋಣ" ಎಂದ.

"ಹೌದು. ಅನಿಲ ಮನೆಗೆ ಬಂದು ಕಾರನ್ನು ಹುಡುಕುತ್ತಿರಬೇಕು" ಎಂದ ಗೌತಮ.

"ಹೌದು ಸಾಕು, ಹೋಗೋಣ" ಎಂದು ರೋಹಿತ್ ಕಾರನ್ನು ಕೆಳಗಿಳಿಸಲೆಂದು ಗುಂಡಿಯನ್ನು ಒತ್ತಿದ. ಕಾರಿನ ವೇಗ ಮತ್ತೂ ಹೆಚ್ಚಿತು. ಅದು ಕೆಳಗಿಳಿಯಲಿಲ್ಲ. ರೋಹಿತ್ ಗಾಬರಿಯಾಗಿ ಮತ್ತೊಂದು ಗುಂಡಿಯನ್ನು ಒತ್ತಿದ. ವೇಗ ಸ್ವಲ್ಪ ಕಡಿಮೆಯಾಯಿತು. ಕಾರು ಕೆಳಗಿಳಿಯುವ ಲಕ್ಷಣವೇ ಕಾಣಲಿಲ್ಲ. ಈಗ ಮೂವರಿಗೂ ಭಯವಾಗತೊಡಗಿತು. ಎಲ್ಲರೂ ಎಲ್ಲ ಗುಂಡಿಗಳ ಮೇಲಿದ್ದ ನಿರ್ದೇಶನಗಳನ್ನು ಓದಿದರು. ಏನೂ ತಿಳಿಯಲಿಲ್ಲ. ಕೊನೆಗೆ 'ಸ್ಪೀಕರ್' ಎಂದಿದ್ದ ಭಾಗವನ್ನು ಒತ್ತಿದ ನಂದನ್. ಆಗ "ಹಲೋ ಹಲೋ" ಎಂದು ಅನಿಲನ ಧ್ವನಿ ಕೇಳಿಸಿತು. ನಂದನ್ ಪರಿಸ್ಥಿತಿಯನ್ನು ವಿವರಿಸಿ "ಸಹಾಯ–ಸಹಾಯ" ಎಂದ. ಅನಿಲ "ಹೆದರಬೇಡಿ ಚಾಲನೆಯಲ್ಲಿರಲಿ" ಎಂದು ಹೇಳಿದ. ಅನಿಲ ಕೂಡಲೆ ದೂರವಾಣಿಯ ಮೂಲಕ ವಿಷಯವನ್ನು ತನ್ನ ಮಾವನಿಗೆ ತಿಳಿಸಿದ. ಅವರು ತಮ್ಮ ಸಂಶೋಧನಾಲಯದಲ್ಲಿ ಕುಳಿತು ರಿಮೋಟ್ ಮೂಲಕ ಕಾರನ್ನು ಕೆಳಕ್ಕೆ ಇಳಿಸಿದರು. ಅವರು ಬೇಕೆಂದೇ ರೋಹಿತನಿಗೆ ಸ್ಪೀಕರ್ ಮೂಲಕ ಏನನ್ನೂ ಹೇಳಲಿಲ್ಲ.



ಕಾರು ಮನೆ ಬಾಗಿಲಿಗೆ ಬಂದಿಳಿಯಿತು. ಅನಿಲ ಓಡಿಹೋಗಿ ಸ್ನೇಹಿತರನ್ನೆಲ್ಲ ಕೆಳಗಿಳಿಯುವಂತೆ ಹೇಳಿ ಕಾರನ್ನು ಪುಟ್ಟದಾಗಿ ಮಾಡಿ ತನ್ನ ಕೋಣೆಗೆ ತೆಗೆದುಕೊಂಡು ಹೋದ. ನಂತರ ರೋಹಿತನಿಗೆ ಹೇಳಿದ "ನನಗೆ ಹೇಳದೆ ನನ್ನ ಕಾರನ್ನು ತೆಗೆದುಕೊಂಡು ಹೋಗಿ ಎಂತಹ ಅಪಾಯಕ್ಕೆ ಸಿಕ್ಕಿಹಾಕಿಕೊಂಡಿರಲ್ಲ!"

"ನಾವೇನೋ ಎಲ್ಲಾ ತುಂಬಾ ಸುಲಭ ಅಂತ ತಿಳಕೊಂಡುಬಿಟ್ಟಿದ್ದೆವು" ಎಂದ ಗೌತಮ್. ಆ ಹೊತ್ತಿಗೆ ಅನಿಲನ ಮಾವನೂ ಅಲ್ಲಿಗೆ ಬಂದರು. ರೋಹಿತ್ ಕೇಳಿದ, "ಅದು ಸರಿ. ಸ್ಪೀಕರ್ ಮೂಲಕ ಇವರೇಕೆ ನಮಗೆ ಕಾರನ್ನು ಹೇಗೆ

ಕೆಳಗಿಳಿಸುವುದು ಅಂತ ತಿಳಿಸಲಿಲ್ಲ?" ಎಂದು ಕೇಳಿದ. ಮಾವ ಹೇಳಿದರು "ನಾನು ಈ ಕಾರನ್ನು ಕೇವಲ ಅನಿಲನಿಗೋಸ್ಕರ ತಯಾರಿಸಿದ್ದೇನೆ. ಕಾರನ್ನು ದೊಡ್ಡದು ಅಥವಾ ಚಿಕ್ಕದನ್ನಾಗಿ ಮಾಡುವುದು, ಮೇಲಕ್ಕೆ ಹಾರಿಸುವುದು, ಇಳಿಸುವುದು, ನೀರಿನ ಮೇಲೆ ತೇಲಿಸಿ ನೆಲದ ಮೇಲೆ ತರುವುದು ಎಲ್ಲವನ್ನೂ ಅವನ ಹೆಸರಿಗೆ ಹೊಂದುವಂತಹ ಕೆಲವು ಸಂಖ್ಯೆಗಳನ್ನನುಸರಿಸಿ ಒಂದು ಸೂತ್ರಕ್ಕೆ ಅಳವಡಿಸಿದ್ದೇನೆ. ಅದನ್ನು ಯಾರೆಂದರೆ ಅವರು ಮಾಡಲು ಸಾಧ್ಯವಿಲ್ಲ. ಅನಿಲ ಅಥವಾ ನಾನು ಮಾತ್ರ ಮಾಡಬಹುದು. ಆದ್ದರಿಂದ ನೀವೆಲ್ಲ ಇನ್ನು ಮುಂದೆ ಇದರ ಬಗ್ಗೆ ಹುಷಾರಾಗಿರಬೇಕಾಗುತ್ತದೆ. 'ಅಂದ ಹಾಗೆ ಅದನ್ನು ದೊಡ್ಡದಾಗಿ ಮಾಡಿದೆವಲ್ಲ' ಅಂತೀರೇನೋ? ಹೌದು ಅದೊಂದನ್ನು ಮಾತ್ರ ಯಾರು ಬೇಕಾದರೂ ಮಾಡಬಹುದು ಅಷ್ಟೇ" ಎಂದು ಹೇಳಿದರು.

ರೋಹಿತ್ ತನ್ನ ಅಚಾತುರ್ಯಕ್ಕೆ, ಅರ್ಧಂಬರ್ಧ ತಿಳುವಳಿಕೆಯಿಂದ ಮಾಡಿದ ಕೆಲಸಕ್ಕೆ ಪಶ್ಚಾತ್ತಾಪಪಡುತ್ತ "ಇದೆಲ್ಲ ನಮಗೆ ಗೊತ್ತೇ ಇರಲಿಲ್ಲ ಸರ್, ಸುಮ್ನೆ ನಾವೂ ಒಂದ್ಸಲ ಪ್ರಯತ್ನಪಡೋಣ ಅಂತ ತಗೊಂಡು ಹೊರಟುಬಿಟ್ಟೆವು" ಎಂದನು. ನಂದನ್ ಮತ್ತು ಗೌತಮ್ ಸಹ, "ನಿಜವಾಗ್ಲೂ ನಾವು ಮಾಡಿದ್ದು ದೊಡ್ಡ ತಪ್ಪು" ಎಂದರು.

ಕೇವಲ ಕುತೂಹಲ ಮಾತ್ರವಲ್ಲದೆ ಬೇರೆ ಯಾವ ಕೆಟ್ಟ ಉದ್ದೇಶವೂ ಅವರಿಗೆ ಇರಲಿಲ್ಲ ಎನ್ನುವುದನ್ನು ಅರಿತ ಮಾವ ರೋಹಿತನ ಬೆನ್ನು ತಟ್ಟುತ್ತ "ಹೇಗೋ ಭಯಂಕರ ಪ್ರಸಂಗದಿಂದ ಪಾರಾದಿರಲ್ಲ. ಈಗ ಬನ್ನಿ ಇನ್ನೊಮ್ಮೆ ಹಾರಾಡಿ ಬರೋಣ" ಎಂದರು.

*ಸರೋಜ ನಾರಾಯಣ ರಾವ್*

**ಸರೋಜ ನಾರಾಯಣ ರಾವ್**



ಶ್ರೀಮತಿ ಸರೋಜ ನಾರಾಯಣ ರಾವ್ ಅವರು 01.05.1931ರಂದು ಮೈಸೂರಿನಲ್ಲಿ ಜನಿಸಿದರು. ಉಡುಗೊರೆ, ಇಷ್ಟಾರ್ಥ, ಈ ನೆಲ ಈ ಜಲ ಮೊದಲಾದವುಗಳು ಇವರ ಸಣ್ಣ ಕಥಾಸಂಕಲನಗಳಾಗಿವೆ. ಇವರು ಆಸೆಯ ಸೇತುವೆ, ವಾನಪ್ರಸ್ಥ, ಜಾಲಿಯ ಮರ ಮೊದಲಾದ ಕಾದಂಬರಿಗಳನ್ನು ರಚಿಸಿದ್ದಾರೆ. ತಮ್ಮ ಸಾಹಿತ್ಯ ಸೇವೆಗೆ 'ಅನುಪಮಾ ಪ್ರಶಸ್ತಿ' ಗಳಿಸಿದ ಇವರು 20–06–2012 ರಂದು ನಿಧನರಾದರು.

## ಚಟುವಟಿಕೆಗಳು

### ಚರ್ಚಿಸಿರಿ

- ಅರ್ಧಂಬರ್ಧ ತಿಳುವಳಿಕೆಯಿಂದ ಮಾಡಿದ ಕೆಲಸ ಅನಾಹುತಕ್ಕೆ ಕಾರಣವಾಗುತ್ತದೆಯೇ? ತರಗತಿಯಲ್ಲಿ ಚರ್ಚಿಸಿರಿ.

### ಪ್ರಶ್ನೆ ತಯಾರಿಸಿರಿ

- ಪಾಠದ ಪ್ರಧಾನ ಆಶಯಗಳು ಉತ್ತರವಾಗಿ ಸಿಗುವಂತೆ ಪ್ರಶ್ನೆಗಳನ್ನು ತಯಾರಿಸಿರಿ. ಬಳಿಕ ಪ್ರಶ್ನೋತ್ತರ ಸ್ಪರ್ಧೆ ನಡೆಸಿರಿ.

### ಸಂಭಾಷಣೆ ತಯಾರಿಸಿರಿ

- ಪಾಠದಲ್ಲಿ ಅನಿಲನು ತನ್ನ ಮಾವ ತಂದುಕೊಟ್ಟ ಕಾರಿನ ಬಗ್ಗೆ ಸ್ನೇಹಿತರಿಗೆ ತಿಳಿಸುವ ಸಂದರ್ಭವಿದೆ. ಆ ಭಾಗವನ್ನು ಸಂಭಾಷಣೆಯ ರೂಪದಲ್ಲಿ ಬರೆಯಿರಿ.

### ಅಭಿನಂದನ ಪತ್ರ ತಯಾರಿಸಿರಿ

- ನಿಯತಕಾಲಿಕಗಳಲ್ಲಿ ಹೊಸಹೊಸ ಸಂಶೋಧನೆಗಳ ಬಗ್ಗೆ ವಾರ್ತೆಗಳು ಬರುತ್ತವೆ. ಅದೇ ರೀತಿ ವಿಜ್ಞಾನ ಕ್ಷೇತ್ರದಲ್ಲಿ ಶ್ರೇಷ್ಠ ಸಂಶೋಧನೆಗಳನ್ನು ನಡೆಸಿದವರಿಗೆ ವಿಶ್ವದ ಅತ್ಯುನ್ನತ ಪ್ರಶಸ್ತಿಯಾದ ನೋಬೆಲ್ ಪ್ರಶಸ್ತಿ ಲಭಿಸಿದ ವಾರ್ತೆಯೂ ಇರುತ್ತದೆ. ಈ ಪ್ರಶಸ್ತಿಯನ್ನು ಪ್ರತಿವರ್ಷವೂ ಕೊಡಲಾಗುತ್ತದೆ. ಇತ್ತೀಚೆಗೆ ನೋಬೆಲ್ ಪ್ರಶಸ್ತಿ ಲಭಿಸಿದ ವಿಜ್ಞಾನಿಯನ್ನು ಅಭಿನಂದಿಸಿ ಪತ್ರ ಬರೆಯಿರಿ.

### ಸರಿಪಡಿಸಿ ಬರೆಯಿರಿ

- ಕೆಳಗಿನ ಗದ್ಯಭಾಗದಲ್ಲಿ ಭಾಷಾದೋಷಗಳಿವೆ. ಅವುಗಳನ್ನು ಕಂಡುಹಿಡಿದು ಸರಿಪಡಿಸಿ ಬರೆಯಿರಿ.

  ಒಬ್ಬ ಕಡು ಬಡವ ಒಂದು ತೋಪಿನಲ್ಲಿ ಹಾದು ಹೋಗುತ್ತಿದ್ದರು. ಅವನಿಗೆ ಬಹಳ ಹಸಿವಾಗಿತ್ತು. ಮೂರು ದಿನಗಳಲ್ಲಿ ಊಟವನ್ನೇ ಕಂಡಿರಲಿಲ್ಲ. ಅದು ಮಾವಿನ ಅಣ್ಣಿನ ತೋಪು. ಮಾವಿನ ಅಣ್ಣಿನ ಕಾಲಾವಾದುದರಿಂದ ಮಾವಿನ ಗಿಡಗಳೆಲ್ಲ ಹಣ್ಣುಗಳಿಂದ ತುಂಬಿದ್ದವು. ಆ ಹಣ್ಣುಗಳು ಹಸಿದಿದ್ದ ಅವಳ ಮನವನ್ನು ಸೆಳೆಯಿತು. ಅವನು ಒಂದು ಕಲ್ಲನ್ನು ಎತ್ತಿ ಒಂದು ಗಿಡಗಳ ಕಡೆಗೆ ಎಸೆದರು. ಕೆಲವು ಮಾವಿನ ಹಣ್ಣುಗಳು ನೆಲದಲ್ಲಿ ಉದುರಿ ಬಿದ್ದುವು. ಅವನ ಮುಖವು ಬೇಸರದಿಂದ ಅರಳಿತು. ತನ್ನ ಎರಡೂ ಕೈಯಿಂದಲೂ ಆ ಹಣ್ಣುಗಳನ್ನು ಎತ್ತಿಕೊಂಡು ನೀರೂರಿದ್ದ ಬಾವಿಗೆ ತುರುಕಿದರು.

### ಆಲ್ಬಂ ತಯಾರಿಸಿರಿ

- ವಿವಿಧ ರೀತಿಯ ಕಾರುಗಳ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿರಿ.

## ಕಲಿಕಾ ಸಾಧನೆಗಳು

- ಆಲಿಸಿ ಓದಿ ತಿಳಿದ ವಿಚಾರಗಳನ್ನು ತರ್ಕಬದ್ಧವಾಗಿ ವಿಶ್ಲೇಷಿಸಿ ಸ್ವಂತ ಅಭಿಪ್ರಾಯಗಳನ್ನು ವಾಚಿಕವಾಗಿ ಮತ್ತು ಲಿಖಿತವಾಗಿ ಪ್ರಕಟಿಸುವುದು.
- ಗದ್ಯ–ಪದ್ಯಗಳನ್ನು ಆಶಯ ಸ್ಪಷ್ಟತೆಯೊಂದಿಗೆ ನಿರರ್ಗಳವಾಗಿ ಮತ್ತು ಸ್ಫುಟತೆಯೊಂದಿಗೆ ಓದುವುದು ಮತ್ತು ಪ್ರಧಾನ ಆಶಯಗಳನ್ನು ಬಾಯ್ದೆರೆಯಾಗಿ ಮಂಡಿಸುವುದು.
- ಜನಪದಗೀತೆ, ಕವಿತೆಗಳ ರಾಗ, ತಾಳ, ಭಾವ ಎಂಬಿವುಗಳನ್ನು ಆಸ್ವಾದಿಸುವುದು, ತಾಳದೊಂದಿಗೆ ಭಾವನಾತ್ಮಕವಾಗಿ ಹಾಡಿ ಮಂಡಿಸುವುದು. ಕಂಠಪಾಠ ಮಾಡುವುದು.
- ಸ್ವಂತ ಅಭಿರುಚಿಗೆ ತಕ್ಕಂತೆ ಕಥೆ, ಕವಿತೆ, ನಾಟಕ, ಪ್ರವಾಸಕಥನ ಮೊದಲಾದ ವಿಭಿನ್ನ ವಿಭಾಗಗಳಲ್ಲಿ ಒಳಗೊಂಡ ಪುಸ್ತಕಗಳನ್ನು ಗುರುತಿಸಿ ಓದುವುದು ಮತ್ತು ಓದಿ ತಿಳಿದ ವಿಚಾರಗಳನ್ನು ವಿವಿಧ ರೀತಿಯಲ್ಲಿ ಪ್ರಕಟಪಡಿಸುವುದು.
- ಪರಿಚಿತವಾದ ವಿಷಯಗಳನ್ನು ವಸ್ತುವಾಗಿರಿಸಿಕೊಂಡು ಕಥೆ, ಕವಿತೆ ಮೊದಲಾದ ಸೃಜನಾತ್ಮಕ ರಚನೆಗಳನ್ನು ಮಾಡುವುದು.
- ವಿಭಿನ್ನ ರೀತಿಯ ವ್ಯವಹಾರ ರೂಪಗಳನ್ನು ತಯಾರಿಸುವುದು. ಅವುಗಳನ್ನು ಸಂಚಿಕೆ, ಭಿತ್ತಿಪತ್ರಿಕೆ, ಹಸ್ತಪತ್ರಿಕೆ, ನಿಯತಕಾಲಿಕಗಳಲ್ಲಿ ಪ್ರಕಟಿಸುವುದು.
- ಕೃತಿಯ ಕಥಾಪಾತ್ರಗಳು, ಸನ್ನಿವೇಶಗಳು, ಭಾಷಾಶೈಲಿ, ಮಂಡನೆಯ ರೀತಿ ಎಂಬಿತ್ಯಾದಿಗಳನ್ನು ಪರಿಗಣಿಸಿ ಓದಿದ ಕೃತಿಯ ಆಸ್ವಾದನಾ ಟಿಪ್ಪಣಿ ತಯಾರಿಸುವುದು.
- ವಿವಿಧ ಕವಿತೆಗಳನ್ನು ಕಂಠಪಾಠ ಮಾಡಿ ಸೂಕ್ತವಾದ ರಾಗ, ತಾಳಗಳೊಂದಿಗೆ ಭಾವಪೂರ್ಣವಾಗಿ ಹಾಡುವುದು.
- ಪದಶುದ್ಧಿ, ವಾಕ್ಯಶುದ್ಧಿ, ಲೇಖನಚಿಹ್ನೆ ಮೊದಲಾದ ಬರವಣಿಗೆಗೆ ಅಗತ್ಯವಾದ ಅಂಶಗಳನ್ನೊಳಗೊಂಡು ಮಾಡಿದ ರಚನೆಗಳ ಮೌಲ್ಯನಿರ್ಣಯ ಮಾಡುವುದರೊಂದಿಗೆ ಉತ್ತಮಗೊಳಿಸುವುದು.
- ಸ್ವಂತ ಆಶಯಗಳನ್ನು ಶಿಷ್ಟಭಾಷೆಯಲ್ಲಿ ತಪ್ಪಿಲ್ಲದೆ ಬರೆಯುವುದು.
- ಸೃಜನಾತ್ಮಕ ರಚನೆಗಳ ಭಾವವನ್ನು ಅರ್ಥೈಸಿಕೊಂಡು ನಾಟಕ, ಭಾವಾಭಿನಯ ಮತ್ತು ಮೂಕಾಭಿನಯಗಳ ಮೂಲಕ ಮಂಡಿಸುವುದು.
- ದೃಶ್ಯ–ಶ್ರಾವ್ಯ ಮಾಧ್ಯಮಗಳ ಮೂಲಕ ಗಳಿಸಿದ ವಿಚಾರಗಳನ್ನು ತನ್ನ ರಚನೆಯಲ್ಲಿ ಬಳಸುವುದು.

## ಅರ್ಥಕೋಶ

### ಅ

ಅಂಚು – ಕೊನೆ, ತುದಿ

ಅಂತರಂಗ – ಗುಟ್ಟು, ಹೃದಯ

ಅಕ್ಷರಶಃ – ಅಕ್ಷರ ಅಕ್ಷರವಾಗಿ, ಪೂರ್ಣವಾಗಿ

ಅಚಲ – ಚಲಿಸದ, ಬೆಟ್ಟ, ಸ್ಥಿರವಾದ

ಅಚಾತುರ್ಯ – ಪ್ರಮಾದ, ಕೈತಪ್ಪಿ ನಡೆದ ಕೆಲಸ

ಅಚ್ಚೊತ್ತಿ ನಿಲ್ಲು – ದೃಢವಾಗಿ ಉಳಿಯು

ಅಡವಿ – ಕಾನನ, ಕಾಡು, ಅರಣ್ಯ, ವಿಪಿನ

ಅತಿಶಯೋಕ್ತಿ – ಸ್ವಲ್ಪವನ್ನು ಮಹತ್ತರವಾಗಿ ಮಾಡಿ ಹೇಳುವುದು

ಅದಮ್ಯ – ತಡೆಯಲಾರದಷ್ಟು, ಧಮನಿಸಲಾರದಷ್ಟು

ಅದ್ಭುತ – ಅತ್ಯಾಶ್ಚರ್ಯ, ನವರಸಗಳಲ್ಲಿ ಒಂದು

ಅಧಮ – ಕೆಟ್ಟವ, ನೀಚ

ಅನಂತ – ಕೊನೆಯಿಲ್ಲದ

ಅನುಗುಣ – ಹೊಂದಿಕೆಯಾಗುವ

ಅನುಗ್ರಹ – ಕೃಪೆ, ದಯೆ

ಅನುಭೂತಿ – ಸ್ವಂತ ಅನುಭವಕ್ಕೆ ಬಂದಿರುವ ತಿಳಿವು

ಅನುರೂಪ – ಯೋಗ್ಯವಾದ, ಅನುಗುಣವಾದ

ಅರಸು – ರಾಜ, ಹುಡುಕು

ಅರಿವು – ತಿಳುವಳಿಕೆ, ಪ್ರಜ್ಞೆ

ಅಲಕ್ಷ್ಯ – ಕಡೆಗಣಿಸುವಿಕೆ, ಮಹತ್ವ ಕೊಡದಿರುವಿಕೆ

ಅವಗಣಿಸು – ಕಡೆಗಣಿಸು, ನಿರ್ಲಕ್ಷಿಸು

ಅವಾಕ್ಕಾಗು – ಮಾತಿಲ್ಲದಾಗು, ಆಶ್ಚರ್ಯದಿಂದ ಮಾತುಬಾರದಿರು

ಅವಿಸ್ಮರಣೀಯ – ಮರೆಯಲು ಸಾಧ್ಯವಿಲ್ಲದ, ಮರೆಯಬಾರದ

ಅಳಲು – ದುಃಖ, ನೋವು, ಬೇಗುದಿ

ಅಳವಡಿಸು – ಹೊಂದಿಸು

### ಆ

ಆಕಸ್ಮಿಕ – ಅನಿರೀಕ್ಷಿತ ಘಟನೆ, ಅಪಘಾತ

ಆಣತಿ – ಆಜ್ಞೆ

ಆತಂಕ – ಹೆದರಿಕೆ, ಚಿಂತೆ, ತಡೆ

ಆನಂದಬಾಷ್ಪ – ಆನಂದ ಉಂಟಾದಾಗ ಬರುವ ಕಣ್ಣೀರು, ಆನಂದಾಶ್ರು

ಆನಂದಾತಿರೇಕ – ಅತಿಯಾದ ಆನಂದ

ಆಪದ್ಬಾಂಧವ – ಕಷ್ಟಕ್ಕೆ ಒದಗುವವನು

ಆಲಸ್ಯ – ಉದಾಸೀನತೆ, ಔದಾಸೀನ್ಯ

ಆಸರೆ – ಆಶ್ರಯ, ಆಧಾರ

### ಇ

ಇಂದ್ರಿಯ – ಜ್ಞಾನವನ್ನು ಕೊಡುವ ಅವಯವಗಳು

ಇಕ್ಕು – ಬಡಿಸು, ಇರಿಸು, ನೀಡು, ಬಡಿ, ಬಿಡು

ಇಲ್ದೆ – ಇಲ್ಲದೆ

ಇಷ್ಟವರವ – ಇಷ್ಟವಾದ ವರವನ್ನು

ಇಹಲೋಕ – ಈ ಲೋಕ

ಇಳೆ – ಭೂಮಿ, ಧರೆ, ಅವನಿ, ತಿರೆ

### ಉ

ಉಕ್ತಿ – ಮಾತು, ಹೇಳಿಕೆ

ಉಗ್ರವ್ಯಾಧಿ – ಭೀಕರವಾದ ರೋಗ

ಉಗ್ರಾಣ – ಸಾಮಾನುಗಳನ್ನು ಶೇಖರಿಸಿಡುವ ಸ್ಥಳ

ಉದ್ಯಮ – ಕೆಲಸ, ದುಡಿಮೆ, ಪರಿಶ್ರಮ

ಉದಾಸೀನ – ಬೇಸರ, ತಿರಸ್ಕಾರ

ಉದ್ಗಾರ – ಆವೇಶದ ಮಾತು, ಹರ್ಷ, ಖೇದ ಮುಂತಾದವುಗಳ ಸೂಚನೆ

ಉದ್ಯಾನ – ತೋಟ, ವಿಹಾರ ಸ್ಥಳ

ಉಪನ್ಯಾಸ – ಭಾಷಣ, ಆಧಾರ ಸಹಿತ ವಿವರಣೆ

ಉಲ್ಬಣ – ಹೆಚ್ಚಳ, ತೀವ್ರತೆ

ಉಲ್ಲಾಸ – ಸಂತೋಷ, ಸುಖ

ಉಸುರು – ಹೇಳು

### ಎ

ಎಡವಟ್ಟು – ಕ್ರಮತಪ್ಪಿದುದು

ಎಸಗು – ಆರಂಭಿಸು, ಮಾಡು, ತೊಡುಗು

### ಒ

ಒತ್ತೊತ್ತಾಗಿ – ಹತ್ತಿರಹತ್ತಿರವಾಗಿ, ಅದುಮಿ ಇರು

ಒಡಲು – ಶರೀರ, ಹೊಟ್ಟೆ

ಒಡ್ಯಾಣ – ಡಾಬು, ನಡುವಿಗೆ ಹಾಕುವ ಬೆಳ್ಳಿ / ಬಂಗಾರದ ಪಟ್ಟಿ

### ಕ

ಕಂಗೆಡು – ಗಾಬರಿಯಾಗು, ದಿಕ್ಕುಗೆಡು

ಕಂಥೆ – ಹೊದಿಕೆ, ಹೊರೆ, ಕಟ್ಟು, ಚಿಂದಿಬಟ್ಟೆ

ಕಂಗೊಳಿಸು – ಶೋಭಿಸು

ಕಂಪು – ಪರಿಮಳ, ಸುವಾಸನೆ

ಕಟ್ಟಳೆ – ನಿಯಮ, ಪದ್ಧತಿ, ಕ್ರಮ

ಕಠಿಣ – ಗಟ್ಟಿ, ತೊಡಕು, ಬಿರುಸು

ಕತ್ತು – ಕೊರಳು

ಕಡಿವಾಣ – ಹತೋಟಿ, ಕುದುರೆಯ ಬಾಯಿಗೆ ಹಾಕುವ ಲಗಾಮು

ಕಲನಾದ – ಮಧುರ ಶಬ್ದ, ಇಂಚರ

ಕಸಮುಸ – ಕಸಕಡ್ಡಿ

ಉಪದೇಶ – ಬುದ್ಧಿಮಾತು

ಕಸುಬು – ಕೆಲಸ, ವೃತ್ತಿ, ಉದ್ಯೋಗ, ಕರ್ಮ, ಕಾಯಕ

ಕಾಂಗು – ಕಡುನೀಲಿಬಣ್ಣ, ದಟ್ಟಕಪ್ಪು

ಕಾಕು – ಧ್ವನಿಯ ಬದಲಾವಣೆ, ವ್ಯಂಗ್ಯ

ಕಾತರ – ಗಾಬರಿ, ಕಳವಳ

ಕಾನನ – ಕಾಡು, ವಿಪಿನ, ಕಾಂತಾರ

ಕಾಮಧೇನು – ಬಯಸಿದ್ದನ್ನು ಕೊಡುವ ದೇವಲೋಕದ ಗೋವು

ಕಾರ್ಮೋಡ – ಕಪ್ಪಾದ ಮೋಡ

ಕಾಲಹರಣ – ಸುಮ್ಮನೇ ಕಾಲಕಳೆಯು

ಕಾಲ್ನಡಿಗೆ – ನಡೆದುಕೊಂಡು ಹೋಗುವಿಕೆ

ಕ್ವಿಂಟಾಲ್ – ನೂರು ಕಿಲೋ

ಕುಂಟೆ – ನೀರು ನಿಲ್ಲುವ ಕೊಳ, ಕೊರಡು, ವ್ಯವಸಾಯದ ಒಂದು ಉಪಕರಣ

ಕುಟೀರ – ಗುಡಿಸಲು

ಕುಸುರು – ಚಿಗುರು, ಮೊಳಕೆ

ಕೃತಾರ್ಥ – ಕೃತಕೃತ್ಯ, ಧನ್ಯ

ಕೃತ್ರಿಮ – ಕಪಟ, ಸಹಜವಲ್ಲದ

ಕೈತಪ್ಪು – ಕೈಬಿಟ್ಟು ಹೋಗು

ಕೈಸೆರೆ – ಸೆರೆಯಾಳು, ಬಂಧಿ

ಕೊಂಡಿ – ಕೊಕ್ಕೆ, ಚೂಪಾದ ಮುಳ್ಳು

ಕೊಠಡಿ – ಕೋಣೆ

ಕೊಳೆ – ಕಶ್ಮಲ

ಕೋಂಟೆ – ದುರ್ಗ, ಕೋಟೆ

ಕೋಠಿ – ಮಳಿಗೆ, ಸಂಗ್ರಹಾಲಯ, ಉಗ್ರಾಣ

ಕೋಲಾಹಲ – ಗದ್ದಲ, ಗಲಾಟೆ

## ಖ

ಖಾಯಿಲೆ – ರೋಗ

ಖಾಸಗಿ – ಸ್ವಂತ

## ಗ

ಗಳಹು – ಸುಮ್ಮನೆ ಸುಮ್ಮನೆ ಹೇಳು.

ಗಿಣಿ – ಗಿಳಿ, ಹಸಿರುಬಣ್ಣದ ಹಕ್ಕಿ

ಗಿರಿ – ಬೆಟ್ಟ, ಶಿಖರ

ಗುಂಗು – ಅಮಲು, ತನ್ಮಯತೆ, ಗೀಳು

ಗುದ್ದಲಿ – ನೆಲವನ್ನು ಅಗೆಯಲು ಉಪಯೋಗಿಸುವ ಕಬ್ಬಿಣದ ಒಂದು ಸಾಧನ.

ಗುಟುಕು – ಒಂದು ಸಲ ಕುಡಿಯುವಷ್ಟು ದ್ರವ

ಗುಡಾರ – ಬಟ್ಟೆಗಳಿಂದ ಮಾಡಿದ ಡೇರೆ

ಗೆರಸೆ – ಮೊರ, ಕಾಳು ಕಡ್ಡಿ ಹಸನು ಮಾಡುವ ಸಲಕರಣೆ

ಗುತ್ತಿಗೆ – ಒಟ್ಟಾಗಿ ಒಡೆತನವನ್ನು ಪಡೆಯುವುದು

ಗುದ್ದಲಿ – ನೆಲವನ್ನು ಅಗೆಯಲು ಉಪಯೋಗಿಸುವ ಕಬ್ಬಿಣದ ಒಂದು ಸಾಧನ

ಗೆರಸೆ – ಮೊರ, ಕಾಳುಕಡ್ಡಿ ಹಸನು ಮಾಡುವ ಸಲಕರಣೆ

ಗೋಚರ – ಕಣ್ಣಿಗೆ ಕಾಣುವ, ಹುಲ್ಲುಗಾವಲು

ಗೋವು – ಹಸು, ದನ, ಆಕಳು, ತುರು

ಗೋಳಾಡು – ಗಟ್ಟಿಯಾಗಿ ಅಳು, ದೈನ್ಯದಿಂದ ಕೂಗು

### ಘ

ಘನಾಢ್ಯ – ಶಕ್ತಿಶಾಲಿ, ಶ್ರೇಷ್ಠ, ಗೌರವವುಳ್ಳ

### ಚ

ಚಾಡಿ – ಇನ್ನೊಬ್ಬರ ಮೇಲೆ ದೋಷ ಹೊರಿಸಿ ಮಾತನಾಡು

ಚಾರಣ – ತಿರುಗಾಡುವಿಕೆ, ಸಂಚಾರ

ಚಿತ್ತ – ಮನಸ್ಸು, ಉದ್ದೇಶ

ಚಿಪ್ಪು – ಗೆರಟೆ

ಚೇತರಿಸು – ಜಾಗೃತವಾಗು, ಚೈತನ್ಯವನ್ನು ಪಡೆ

### ಛ

ಛಲ – ಹಟ

ಛಾಯೆ – ನೆರಳು, ಪ್ರಕಾಶ, ಪ್ರತಿಬಿಂಬ

ಛಿದ್ರಗೊಳಿಸು – ಚೂರುಚೂರು ಮಾಡು

### ಜ

ಜರ್ಜರಿತ – ಶಿಥಿಲವಾದ, ನುಚ್ಚುನೂರಾದ ಗಾಯಗೊಂಡು ಹಣ್ಣು ಹಣ್ಣಾದ ದೇಹ

ಜಬ್ಬು – ಅಹಂಕಾರ, ಗರ್ವ

ಜಿನುಗು – ತೊಟ್ಟಿಕ್ಕು

ಜರಿಯು – ಕೀಳು ಮಾತಾಡು

ಜೀತ – ಚಾಕರಿ, ಕೂಲಿಯಂತೆ ದುಡಿಯುವವ

ಜೈತ್ರಯಾತ್ರೆ – ಗೆಲ್ಲುವುದಕ್ಕಾಗಿ ದಂಡೆತ್ತಿ ಹೋಗುವುದು

ಜ್ಯೋತಿ – ಬೆಳಕು, ಪ್ರಕಾಶ, ದೀಪ

### ಝ

ಝರಿ – ಬೆಟ್ಟದಿಂದ ಇಳಿಯುವ ನೀರಿನ ಪ್ರವಾಹ

### ಟ

ಟಂಕಸಾಲೆ – ನಾಣ್ಯವನ್ನು ಮುದ್ರಿಸುವ ಸ್ಥಳ

ಟೀಕೆ – ಆಕ್ಷೇಪಣೆ, ತಪ್ಪನ್ನು ಎತ್ತಿತೋರಿಸು, ವಿಮರ್ಶೆ

### ಠ

ಠೇವಣಿ – ಕಟ್ಟಬೇಕಾದ ಹಣ

### ತ

ತತ್ವ – ಸಾರ, ಸತ್ವ

ತನಿವಣ್ಣು – ಪಕ್ವವಾದ ಹಣ್ಣು, ಸಿಹಿಯಾದ ಹಣ್ಣು

ತನು – ದೇಹ, ಶರೀರ

ತಟ – ದಡ, ಅಂಚು

ತಪಾಸಣೆ – ಕೂಲಂಕಷವಾದ ವಿಚಾರಣೆ, ಹುಡುಕುವಿಕೆ, ಶೋಧನೆ

ತರ – ಯೋಗ್ಯರೀತಿ

ತರಾತುರಿ – ತವಕ, ಅವಸರ, ಆತುರ

ತಲ್ಲೀನ – ಮಗ್ನನಾದ, ಅದರಲ್ಲಿಯೇ ಮುಳುಗಿದ

ತಲೆಗಾಯು – ಕಾಪಾಡು

ತವಕ – ಆತುರ, ಅಪೇಕ್ಷೆ

ತಳಮಳಿಸು – ಚಿಂತಿಸು, ದುಃಖಿಸು, ಗಾಬರಿಪಡು

ತಳಹದಿ – ಅಡಿಪಾಯ

ತಾಣ – ಸ್ಥಾನ, ಸ್ಥಳ

ತಾಪಸಿ – ತಪಸ್ಸು ಮಾಡುವವಳು

ತಾರತಮ್ಯ – ಹೆಚ್ಚುಕಡಿಮೆ, ವ್ಯತ್ಯಾಸ

ತಿರುಕ – ಭಿಕ್ಷುಕ, ತಿರುಗಾಡುವವ

ತುಚ್ಛ – ಕೇವಲ, ಹೀನಾಯ

ತೃಷೆ – ಬಾಯಾರಿಕೆ

ತೊಗಲು – ಚರ್ಮ

ತೊರೆ – ಬಿಡು, ಸಣ್ಣ ಪ್ರವಾಹ

ತ್ಯಜಿಸು – ಬಿಟ್ಟುಬಿಡು

### ದ

ದಂಧೆ – ಕೆಲಸ, ವ್ಯಾಪಾರ

ದಕ್ಷ – ಸಮರ್ಥ

ದಣಿವು – ಆಯಾಸ, ಬಳಲಿಕೆ

ದರ್ಶನ – ಭೇಟಿ, ನೋಡುವುದು

ದಾತ – ದಾನಿ, ಒಡೆಯ

ದಾರ – ನೂಲು

ದಾರ್ಷ್ಟ್ಯ – ಸೊಕ್ಕಿನ ನಡತೆ

ದಿಗಂತ – ಬಾನಂಚು, ದಿಕ್ತಟ

ದಿನಾಂತ – ಸಾಯಂಕಾಲ, ಬೈಗು, ಸಂಜೆ

ದಿಗ್ಭ್ರಮೆ – ದಿಕ್ಕುತೋರದಿರುವುದು, ಗಾಬರಿ

ದೀನ – ಬಡವ, ನಮ್ರ

ದುಮ್ಮಾನ – ಮನಸ್ಸಿನ ಉಮ್ಮಳ, ಚಿತ್ತಕ್ಷೋಭೆ

ದುಸ್ತರ – ದಾಟಲಾರದ, ಕಠಿಣಸಾಧ್ಯ

ದೊಂದಿ – ಉರಿಯುವ ಕೊಳ್ಳಿ, ದೀವಟಿಗೆ

ದೈನ್ಯ – ಹೀನಸ್ಥಿತಿ, ವಿನಯ, ವ್ಯಥೆ, ಬಡತನ

ಧನ್ಯ – ಪುಣ್ಯವಂತ, ಕೃತಾರ್ಥ

ಧರೆ – ಭೂಮಿ, ಪೃಥ್ವಿ, ವಸುಧೆ, ವಸುಂಧರೆ

## ನ

ನಂಜು – ವಿಷ, ಅಸೂಯೆ, ಕಷ್ಟ

ನಲವು – ಆನಂದ, ಹರ್ಷ, ಸಂತೋಷ

ನಾಂದಿ – ಆರಂಭದ ಶುಭ ಪ್ರಾರ್ಥನೆ

ನಾಕ್ಕಡೆ – ನಾಲ್ಕು ಕಡೆ

ನಾಡೋಜ – ನಾಡಿಗೆ ಗುರು

ನಾಮಾಂಕಿತ – ಹೆಸರುವಾಸಿಯಾದ

ನಿಗದಿತ – ನಿಶ್ಚಿತ

ನಿಟ್ಟುಸಿರು – ದುಃಖ, ಬಳಲಿಕೆ, ಚಿಂತೆ, ಬೇಸರಗಳಿಂದ ದೀರ್ಘವಾಗಿ ಬಿಡುವ ಉಸಿರು

ನಿನಾದ – ಧ್ವನಿ, ಸ್ವರ

ನಿರರ್ಗಳ – ಅಡೆತಡೆಯಿಲ್ಲದ

ನಿರಂತರ – ಎಡೆಬಿಡದ, ಯಾವಾಗಲೂ

ನಿವಾರಿಸು – ಹೋಗಲಾಡಿಸು

ನೀಚ – ಕೆಟ್ಟ, ದುಷ್ಟ

ನುಚ್ಚುನೂರು ಆಗು – ಪುಡಿಪಡಿಯಾಗು, ಹಾಳಾಗು

ನುಡಿ – ಮಾತು

ನುರಿತ – ಅನುಭವ ಪಡೆದ, ಪಳಗಿದ

ನೇಸರು – ಸೂರ್ಯ, ಬಾಸ್ಕರ

ನೊಸಲು – ಹಣೆ

ನೌಕರ – ಕೆಲಸಗಾರ

ನೌಕರಿ – ಕೆಲಸ

## ಪ

ಪತ್ರವಾಹಕ – ಅಂಚೆಯವನು

ಪರವಶ – ಮೈಮರೆಯುವಿಕೆ

ಪವಾಡ – ಚಮತ್ಕಾರ, ಅತಿಮಾನುಷ ಕೃತ್ಯ

ಪರಿಧಿ – ಸುತ್ತಲೂ ಇರುವುದು, ವೃತ್ತ, ದಿಗಂತ, ಸುತ್ತಲಿನ ಮೇರೆ

ಪರಿಪಾಲನೆ – ಕಾಪಾಡು, ಸಂರಕ್ಷಿಸು

ಪರ್ಣಕುಟಿ – ಎಲೆಮನೆ

ಪವಿತ್ರ – ಶುಚಿಯಾದ, ಪುಣ್ಯಕರವಾದ

ಪಶ್ಚಾತ್ತಾಪ – ಮಾಡಿದ ತಪ್ಪು ಕೆಲಸಕ್ಕಾಗಿ ಮರುಗು

ಪಾಟ್ಲಿ – ಕೈಗೆ ಹಾಕುವ ಆಭರಣ (ಕಡಗ ಮತ್ತು ಬಳೆ)

ಪಾಡಗ – ಪಾದದ ಕಡಗ, ಕಾಲಂದುಗೆ, ಕಾಲಬಳೆ

ಪಾನ – ಕುಡಿಯುವ ಪದಾರ್ಥ

ಪಾರ – ದಡ, ತೀರ, ಮಿತಿ, ಎಲ್ಲೆ

ಪಾವತಿ – ಕೊಡಬೇಕಾದ ಹಣ, ವಸ್ತು ನೀಡಿದ ಮೇಲೆ ಕೊಡುವ ರಶೀದಿ

ಪಿಗ್ಮಿ – ಗಿಡ್ಡ ವ್ಯಕ್ತಿಗಳಿಂದ ಕೂಡಿದ ಜನಾಂಗ

ಪುಂಗವ – ಶ್ರೇಷ್ಠ

ಪುಷ್ಟಿ – ಶಕ್ತಿ, ಬೆಳವಣಿಗೆ

ಪೌಂಡು – ಲಂಡನ್ನಿನಲ್ಲಿ ಚಲಾವಣೆಯಲ್ಲಿರುವ ರೂಪಾಯಿ

ಪ್ರಚಲಿತ – ಬಳಕೆಯಲ್ಲಿರುವ

ಪ್ರಣಾಮ – ನಮಸ್ಕಾರ, ವಂದನೆ

ಪ್ರಶಾಂತ – ಶಾಂತವಾದ, ಸ್ತಬ್ಧವಾದ

ಪ್ರೇಕ್ಷಕ – ನೋಡುವವ

### ಬ

ಬಂಜರು – ಪಾಳುಭೂಮಿ

ಬಕ – ಕೊಕ್ಕರೆ

ಬಡಪಾಯಿ – ಬಡವ

ಬರಗು – ಒಂದು ಬಗೆಯ ಧಾನ್ಯ, ಬಾಚು

ಬರಡು – ಯೋಗ್ಯವಲ್ಲದ, ನಿಸ್ಸಾರವಾದ, ಜೀವಕಳೆ ಇಲ್ಲದ

ಬಸವಳಿಯು – ಆಯಾಸಗೊಳ್ಳು, ಶಕ್ತಿಗುಂದು

ಬಳಲಿಕೆ – ಆಯಾಸ, ದಣಿವು

ಬಾವಡಿ – ಮಣ್ಣಿನ ಪಾತ್ರೆ

ಬಿಗಡಾಯಿಸು – ಹದಗೆಡು, ಕೆಟ್ಟುಹೋಗು

ಬಿನ್ನಣ – ವಿಶೇಷ ಜ್ಞಾನ, ಪಾಂಡಿತ್ಯ, ಸೊಬಗು

ಬಿನ್ನಹ – ಅರಿಕೆ, ವಿಜ್ಞಾಪನೆ, ಕೇಳಿಕೊಳ್ಳುವಿಕೆ

ಬೀರು – ಪ್ರಕಟಿಸು, ಹರಡು

ಬೆರಗು – ಆಶ್ಚರ್ಯ

### ಭ

ಭಾಜನ – ಪಡೆಯತಕ್ಕ

### ಮ

ಮಂಜಾಗು – ಮಸುಕಾಗು

ಮದ್ದಾನೆ – ಮದಿಸಿದ ಆನೆ

ಮಧುರ – ಸಿಹಿಯಾದ, ಇಂಪಾದ

ಮನ್ನಿಸು – ಗೌರವಿಸು, ಕ್ಷಮಿಸು

ಮನೋಲ್ಲಾಸ – ಮನಸ್ಸಿಗೆ ಉತ್ಸಾಹವನ್ನು ನೀಡುವ

ಮನೋಹರ – ಸುಂದರ, ಚೆಲುವು

ಮರಗಂಬ – ಹಡಗಿನ ಹಾಯಿಗಂಬ

ಮರಣೋನ್ಮುಖ – ಮರಣವನ್ನು ನಿರೀಕ್ಷಿಸುತ್ತಿರುವ

ಮರುಹುಟ್ಟು – ಪುನರ್ಜನ್ಮ

ಮರ್ಮ – ರಹಸ್ಯ, ಗುಟ್ಟು

ಮಾರ್ಗದರ್ಶಿ – ನೀತಿಯನ್ನು ತಿಳಿಸುವವ, ಹಾದಿಯನ್ನು ತೋರಿಸುವವ

ಮಾರ್ದನಿ – ಪ್ರತಿಧ್ವನಿ

ಮಾರುತ – ಗಾಳಿ, ವಾಯು

ಮಿತ – ಅಳತೆಯಲ್ಲಿರುವ, ಹಿಡಿತದಲ್ಲಿರುವ

ಮುಡಿ – ಧಾನ್ಯದ ಒಂದು ಅಳತೆ, ತಲೆ

ಮುದ – ಸಂತಸ, ಆನಂದ

ಮುರು – ಕಿವಿ, ಮೂಗುಗಳಲ್ಲಿ ಧರಿಸುವ ಆಭರಣ

ಮೂದಲಿಸು – ಹೀಯಾಳಿಸು

ಮೂರ್ದಿನ – ಮೂರುದಿನ

ಮೂಢ – ದಡ್ಡ, ತಿಳಿಗೇಡಿ, ಅಜ್ಞಾನಿ

ಮೇಧಾವಿ – ಜ್ಞಾನಿ, ಪಂಡಿತ, ವಿದ್ವಾಂಸ

ಮೇಳ – ಗುಂಪು, ಸಮೂಹ

ಮೊಗ – ಮುಖ

ಮೊಳಗು – ಗರ್ಜಿಸು, ಧ್ವನಿಮಾಡು

ಮೋಜು – ಆಟ, ವಿನೋದ

### ಯ

ಯದ್ವಾತದ್ವ – ಅವ್ಯವಸ್ಥಿತ, ಕ್ರಮವಿಲ್ಲದ

ಯಾನ – ಪ್ರಯಾಣ

### ರ

ರಕ್ಷಕ – ಕಾಪಾಡುವವನು, ಕಾವಲುಗಾರ, ಪಾಲಕ

ರತುನ – ರತ್ನ (ನವರತ್ನಗಳಲ್ಲಿ ಒಂದು) ಶ್ರೇಷ್ಠ

ರಣತಂತ್ರ – ಯುದ್ಧವನ್ನು ಗೆಲ್ಲಲು ಮಾಡುವ ಉಪಾಯ, ಯುದ್ಧೋಪಾಯ

ರಾಟೆ – ಚರಕ, ಗಾಲಿ, ಚಕ್ರ

### ಲ

ಲಗ್ಗೆ – ಮುತ್ತಿಗೆ, ಆಕಸ್ಮಾತ್ ಧಾಳಿ ಮಾಡು

ಲೀನ – ಮುಳುಗು, ಐಕ್ಯವಾಗು

### ವ

ವಚನ – ಮಾತು, ನುಡಿ

ವರಮಾನ – ಆದಾಯ

ವಸುಧೆ – ಭೂಮಿ, ಪೊಡವಿ

ವಾಕ್ಪಟು – ಮಾತುಗಾರ, ವಾಗ್ಮಿ

ವಾತ್ಸಲ್ಯ – ಮಕ್ಕಳ ಮೇಲಿನ ಪ್ರೀತಿ, ಮಮತೆ

ವಿಭಿನ್ನ – ವಿವಿಧ, ಅನೇಕ

ವಿನೂತನ – ಹೊಸದಾದ, ಅಪೂರ್ವವಾದ

ವಿರಕ್ತಿ – ವೈರಾಗ್ಯ

ವಿರಾಜಿಸು – ಪ್ರಕಾಶಿಸು, ಶೋಭಿಸು

ವಿಷಮ – ಸರಿಯಲ್ಲದ, ಕಠಿಣ

ವಿಸ್ತರಿಸು – ಹರಡು, ಹಬ್ಬು, ವಿವರಿಸು

ವಿಹರಿಸು – ತಿರುಗಾಡು

ವಿಹಂಗಮ – ಆಕಾಶದಲ್ಲಿ ಸಂಚರಿಸುವ, ಪಕ್ಷಿ, ಮೇಘ

ವೀಕ್ಷಿಸು – ನೋಡು

ವೃದ್ಧೆ – ಮುದುಕಿ

ವೆಚ್ಚ – ಖರ್ಚು, ವ್ಯಯ

ವೇಷಪಲ್ಲಟ – ವೇಷಬದಲಾಯಿಸುವಿಕೆ

ವೈಮನಸ್ಸು – ದ್ವೇಷ, ವೈರ, ಮನಸ್ತಾಪ, ಹಗೆತನ

ವ್ಯಥೆ – ನೋವು, ಯಾತನೆ, ದುಃಖ, ಕಳವಳ

ವ್ಯಾಧಿ – ಕಾಯಿಲೆ, ರೋಗ

### ಶ

ಶಯ್ಯೆ – ಹಾಸುಗೆ, ನಿದ್ರೆ

ಶಿಲ್ಲಿಂಗ್ – ಹಿಂದೆ ಇಂಗ್ಲೆಂಡಿನಲ್ಲಿ ಪ್ರಚಲಿತವಿದ್ದ ಬೆಳ್ಳಿನಾಣ್ಯ

ಶಿರಸಾವಹಿಸು – ವಿನಯ ಪೂರ್ವಕವಾಗಿ ಸ್ವೀಕರಿಸು

ಶೀಘ್ರ – ವೇಗದಿಂದ ಕೂಡಿದ, ತ್ವರೆ, ರಭಸ, ಅವಸರ

ಶುಭ್ರ – ಸ್ವಚ್ಛತೆ, ಬಿಳಿಯಾದ

ಶ್ರಮ – ಕಷ್ಟ, ಆಯಾಸ, ಪ್ರಯತ್ನ

ಶ್ರೇಣಿ – ಸಾಲು, ಗುಂಪು, ಮೆಟ್ಟಿಲು

### ಸ

ಸಂಕುಲ – ಗುಂಪು

ಸಂತೃಪ್ತಿ – ಸಮಾಧಾನ, ಶಾಂತಿ

ಸಂತೈಸು – ಸಮಾಧಾನಪಡಿಸು

ಸಂದಿಗ್ಧ – ಕಷ್ಟ, ಇಕ್ಕಟ್ಟು

ಸಂಚು – ಯುಕ್ತಿ, ಪಿತೂರಿ, ವಂಚನೆ

ಸತಿ – ಹೆಂಡತಿ

ಸತ್ಕರ್ಮ – ಒಳ್ಳೆಯ ಕೆಲಸ

ಸದೃಶ – ಸಮಾನವಾದುದು

ಸದ್ಗುಣ – ಒಳ್ಳೆಯ ಗುಣ

ಸದಾಚಾರ – ಒಳ್ಳೆಯ ನಡತೆ

ಸನ್ನಿಧಾನ – ಸಮೀಪ, ಎದುರು, ಸಮ್ಮುಖ

ಸಬ್ಸಿಡಿ – ಸಹಾಯಧನ

ಸಹೃದಯ – ಒಳ್ಳೆಯ ಮನಸ್ಸಿನ

ಸಾರ – ಸತ್ವ, ತಿರುಳು, ಶ್ರೇಷ್ಠ

ಸಿಂಚನ – ಸಿಂಪಡಿಸು, ಚಿಮುಕಿಸು

ಸಿಬ್ಬಂದಿ – ಕಚೇರಿಯ ನೌಕರ ವರ್ಗ

ಸಿರಿ – ಸಂಪತ್ತು, ಐಶ್ವರ್ಯ

ಸೀಸೆ – ಬಾಟಲಿ, ಜಾಡಿ

ಸುತ – ಮಗ

ಸುಸಜ್ಜಿತ – ಚೆನ್ನಾಗಿ ಸಿದ್ಧಗೊಳಿಸಿದ, ಸಜ್ಜುಗೊಂಡ

ಸೂತ್ರ – ದಾರ, ಉಪಾಯ

ಸೊಗಡು – ವಾಸನೆ, ಸಾರ

ಸೊಬಗು – ಚೆಲುವು, ಅಂದ

ಸೋಜಿಗ – ವಿಸ್ಮಯ, ಆಶ್ಚರ್ಯ

ಸೋಪಾನ – ಮೆಟ್ಟಿಲು, ಹಂತ

ಸ್ವಚ್ಛಂದ – ಮನಬಂದಂತೆ ನಡೆಯುವುದು

ಸ್ವಾದಿಷ್ಟ – ರುಚಿಯುಳ್ಳ

**ಹ**

ಹಚ್ಚಡ – ಹೊದೆಯುವ ದಪ್ಪನೆಯ ಬಟ್ಟೆ

ಹಡಿಲು – ಪಾಳುಭೂಮಿ, ಬಂಜರುನೆಲ

ಹತಾಶೆ – ನಿರಾಶೆ

ಹರ್ಬಿ – ಒಂದು ರೀತಿಯ ಓಟದ ಕಾರು

ಹರಯ – ಪ್ರಾಯ

ಹಾಡಿ – ಹಳ್ಳಿ, ಗ್ರಾಮ

ಹಾಯಿಗಂಬ – ದೋಣಿಯ ಗಾಳಿಕಂಬ

ಹಿತ – ಒಳಿತ

ಹಿಮಾಚ್ಛಾದಿತ – ಹಿಮ ಆವರಿಸಿದ

ಹುಲ್ಲೆ – ಜಿಂಕೆ

ಹೆಂಟೆ – ಮಣ್ಣಿನ ಗಟ್ಟಿ

ಹೆಣಗಾಟ – ಪ್ರಯತ್ನ, ಸಾಹಸ

ಹೇರಳ – ಧಾರಾಳ, ವಿಪುಲ

ಹೊಂಚು – ಸಮಯವನ್ನು ಕಾಯು

ಹೊಣೆ – ಭಾರ, ಜವಾಬ್ದಾರಿ

ಹೊಳ್ಳೆ – ಮೂಗಿನರಂಧ್ರ

* * *